ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಆಗಸ್ಟ್-೨೦೧೦ ಸಂಚಿಕೆ-೧



ರಾಷ್ಟ್ರನಿರ್ಮಾಣ ಹಕ್ಕು ಬೇಡಿಕೆಯಿಂದಲ್ಲ ಕರ್ತವ್ಯ ಪಾಲನೆಯಿಂದ

ಜನಪದ ವಿಚಾರದಲ್ಲಿ

ಆಗಸ್ಟ್-೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಗಸ್ಟ್ – ೨೦೧೦
ಸಂಪುಟ – ೧೧
ಸಂಚಿಕೆ – ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ 08236 316344

e-mail : janapada@yahoo.com
web: janapada.net

ಅನ್ನ ಯಜ್ಞ

ಕೂಸುಗಳಿಗೆ ಹಾಲು ಇಲ್ಲ,
ಪಶುಬಲಿಯೇ ನಡೆದಿದೆ.
ಕಾಳು ಇದೆ ಕೂಳು ಇಲ್ಲ,
ಹಣದ ಹುಚ್ಚು ಹಿಡಿದಿದೆ.
ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ.
ಎಲ್ಲ ಇದೆ ಎಲ್ಲ ಇಲ್ಲ, ಇಲ್ಲೆ ಸುತ್ತುಮುತ್ತಿದೆ.

ಸಾಕು ಎಂಬುವಂತೆ ನೀಡು,
ಬೇಕು ಎಂಬ ಹೊತ್ತಿಗೆ
ಬೆಣ್ಣೆ ಎಣ್ಣೆ ಎರೆಯ ಬನ್ನಿ
ಹಸಿದ ಹೊಟ್ಟೆ ನೆತ್ತಿಗೆ.

ಬರುವ ಸಾವು ನೆನೆದು
ಕೆಲವು ತಿನ್ನುತಿಹವು ಹೆಚ್ಚಿಗೆ
ಕಾಳು ಸಾಲದೀಗ ಜನದ
ಇರುವ ಹೊಟ್ಟೆಕಿಚ್ಚಿಗೆ.
ಇದ ಕಂಡೂ ಕಂಡು ಕೂಡ
ಏಳಬೇಡ ರೊಚ್ಚಿಗೆ
ಇದರ ಹೊಟ್ಟೆಯಲ್ಲಿ ಹುಟ್ಟಿತೀ
ಪಿಶಾಚಿ ಹುಚ್ಚಿಗೆ

ಬಾಳ್ಮೆಯಲ್ಲಿ ತಾಳ್ಮೆ ಬೇಕು
ಬದುಕಬೇಕು ಎಂದರೆ
ಜೀವವೇ ಸಾವಾಗಬಹುದು
ಬಚ್ಚಬರಿಯೆ ನೊಂದರೆ.

ಖಣವು ರಣವು, ಜನವು ಹೆಣವು
ಸಾವಿಗಾಗಿ ದುಡಿವರೆ?
ಯಾರ ಬಾಳಿಗಾಗಿ ಯಾರೊ
ಯಾವೊ ಕೈಗೆ ಮಡಿವರೆ?
ಕಾವ ಕೈಯ್ಯೆ ಕೊಲ್ಲುತಿಹವು!
ಮರಣದತ್ತ ನಡೆವರೆ?
ಸಾವಿಗಾಗಿ ತಪಿಸುವವರು
ಬಾಳ-ಬೀಜ ಹಿಡಿವರೆ?

ಕಣ್ಣೀರಿನ ಕಡಲ ನಡುವೆ
ತೇಲುತಿಹವು ನೆಲಗಳು
ತಾಯಿ-ಹಾಲು ಕುದಿಯುತಿಹುದು
ಕೆಂಪೇರಲು ಜಲಗಳು.

– *ಅಂಬಿಕಾತನಯದತ್ತ*

ವಿಚಾರ ದೀಪ್ತಿ

ಇಂಗ್ಲಿಷ್ ಭಾಷೆ ಗೊತ್ತಿಲ್ಲವೆಂಬುದಕ್ಕಾಗಿ ದುಃಖಿಸುವುದಕ್ಕೆ ಕಾರಣವಿಲ್ಲ. ನೀವು ಉನ್ನತ ಸ್ಥಾನದಲ್ಲಿದ್ದರೂ ಆ ಭಾಷೆಯ ಬಗ್ಗೆ ಮೋಹಿತರಾಗಿಲ್ಲ. ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಅಲ್ಲದೆ ನನಗೂ ಕೂಡ ಇಂಗ್ಲಿಷ್ ಪರಭಾಷೆಯೇ. ಆದ್ದರಿಂದ ನಾವಿಬ್ಬರೂ ಒಂದೇ ಸ್ಥಿತಿಯಲ್ಲಿದ್ದೇವೆ. ಒಂದು ವೇಳೆ ಅಮೇರಿಕಾ ತನ್ನ ಶ್ರೀಮಂತಿಕೆಯನ್ನು ಒಳ್ಳೆಯದಕ್ಕೆ ಉಪಯೋಗಿಸದಿದ್ದರೆ ಅದರ ಶ್ರೀಮಂತಿಕೆಯೇ ಅದನ್ನು ನಾಶ ಮಾಡುವುದು. ಅಮೇರಿಕಾ ತನ್ನ ಹಣದ ಸಹಾಯದಿಂದ ಬೇರೆ ದೇಶಗಳ ಸ್ನೇಹವನ್ನು ಸಂಪಾದಿಸಲು ಹೊರಟರೆ ಮತ್ತು ಚೈನಾ, ಜಪಾನ್, ಇರಾನ್, ಭಾರತ, ಪಾಕಿಸ್ತಾನ್ ಅಥವಾ ಇನ್ನಾವುದೇ ದೇಶ ಅದರೊಂದಿಗೆ ಸ್ವಲ್ಪ ಪ್ರಮಾಣದಲ್ಲಿ ತೊಡಗಿಸಿಕೊಂಡರೂ ಅವೆರಡೂ ದುಃಖಕ್ಕೀಡಾಗುವವು. ಆದ್ದರಿಂದಲೇ ಆಹಾರದ ಆಮದು ಗುಲಾಮಿತನದ ಪರಮಾವಧಿಯೆಂದು ನಾನು ದಿನಾಲು ರಾಜೇಂದ್ರ ಬಾಬುರವರಿಗೆ ಹೇಳುತ್ತಲಿದ್ದೇನೆ. ತನ್ನ ಅವಶ್ಯಕತೆಗಳನ್ನು ತಾನು ಪೂರೈಸಿಕೊಳ್ಳಲಾಗದೆ ಬೇರೆಯವರಲ್ಲಿ ಭಿಕ್ಷೆ ಬೇಡುವುದಕ್ಕಿಂತ ಹೀನಾಯ ಸ್ಥಿತಿ ಬೇರೊಂದಿಲ್ಲ.

ಬೇರೊಬ್ಬರೊಂದಿಗಿನ ಸ್ನೇಹ ಉಳಿಯಬೇಕಾದರೆ ಅವರಿಂದ ಹಣಕಾಸಿನ ನೆರವನ್ನು ಕೇಳಬಾರದೆಂಬುದು ಒಂದು ವ್ಯವಹಾರಿಕ ತತ್ವವಾಗಿದೆ. ಆದ್ದರಿಂದ ಅಮೇರಿಕಾ ಎಷ್ಟೇ ಶ್ರೀಮಂತವಾಗಿರಲಿ ನಾವೇನಾದರೂ ಆ ದೇಶದ ಆರ್ಥಿಕ ಸಹಾಯ ಪಡೆದರೆ ನಾವು ಊನತೆಯಿಂದ ಬಳಲುತ್ತೇವಷ್ಟೆ. ಭಾರತದಲ್ಲಿಯಾಗಲೀ ಏಷಿಯಾದಲ್ಲಾಗಲೀ ಯಂತ್ರಗಳ ಅವಶ್ಯಕತೆಯೇ ಇಲ್ಲವೆಂಬುದು ನನ್ನ ಖಚಿತ ಅಭಿಪ್ರಾಯ. ಯಂತ್ರಗಳು ಜನರ ಉದ್ಯೋಗವನ್ನು ತಪ್ಪಿಸುವುದಷ್ಟೇ ಅಲ್ಲ ಅವು ಅವರನ್ನು ಕಂಗಾಲರನ್ನಾಗಿಯೂ, ನಗ್ನರನ್ನಾಗಿಯೂ ಮಾಡುತ್ತವೆ. ಯಂತ್ರಗಳು ಇಂದು ಎಷ್ಟೇ ಚಾಲ್ತಿಯಲ್ಲಿರುವ ಶೈಲಿಯಾಗಿರಬಹುದು, ಬಹಳಷ್ಟು ಮೆಚ್ಚುಗೆಯುಳ್ಳವಾಗಿರಬಹದು ಮತ್ತು ನಗರಗಳನ್ನು ಸ್ವರ್ಗಗಳನ್ನಾಗಿ ಮಾಡುತ್ತಿರಬಹುದು. ಒಂದು ವೇಳೆ ಯಾವುದಾದರೊಂದು ದುರಂತ ಸಂಭವಿಸಿ ಎಲ್ಲ ಯಂತ್ರಗಳು ನಾಶಗೊಂಡಲ್ಲಿ ನಾನು ಖಂಡಿತವಾಗಿಯೂ ದುಃಖಿಸುವುದಿಲ್ಲ.

– *ಮೋ.ಕ.ಗಾಂಧೀ*
ಜುಲೈ ೧೮, ೧೯೪೭

ರಾಷ್ಟ್ರ ನಿರ್ಮಾಣ ಹಕ್ಕುಬೇಡಿಕೆಯಿಂದಲ್ಲ; ಕರ್ತವ್ಯಪಾಲನೆಯಿಂದ

- ಸುರೇಂದ್ರ ಕೌಲಗಿ

ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳು; ಅವುಗಳ ಸಂಬಂಧ ಬೀಜ-ವೃಕ್ಷ ನ್ಯಾಯದಂತೆ.

೨೦೧೦ ಸ್ವತಂತ್ರ ಭಾರತದ ಭವಿಷ್ಯದ ನಿರ್ಣಾಯಕ ವರ್ಷ. ನಮ್ಮ ದೇಶ ಅಖಂಡವಾಗಿ ಉಳಿಯುವುದೇ ಅಥವಾ ವಿಘಟಿತಗೊಳ್ಳುತ್ತ ಹೋಗುವುದೇ ಎಂದು ತಿಳಿಸುವ ನಿರ್ಣಾಯಕ ವರ್ಷ. ನಮ್ಮ ದೇಶ ತನ್ನ ಸಂವಿಧಾನದ ಆಶಯದಂತೆ ಸರ್ವ ಧರ್ಮಗಳ ಶಾಂತಿಯ ತೋಟವಾಗಿ ಉಳಿಯುವುದೇ ಅಥವಾ ಯವುದಾದರೊಂದು ಧರ್ಮದ ನೆಲೆಯಾಗಿ ರೂಪಗೊಳ್ಳುವುದೇ ಎಂದು ಸೂಚಿಸುವ ನಿರ್ಣಾಯಕ ವರ್ಷ. ನಮ್ಮ ದೇಶ ಅಹಿಂಸೆಯನ್ನು ತನ್ನ ಸಾಮಾಜಿಕ ಧರ್ಮವನ್ನಾಗಿ ಅಂಗೀಕರಿಸುವುದೇ ಅಥವಾ ಹಿಂಸೆಯನ್ನೇ ಎಂದು ತಿಳಿಸುವ ನಿರ್ಣಾಯಕ ವರ್ಷ. ನಮ್ಮ ದೇಶ ಸಾಮ್ಯವಾದವನ್ನು ಅಂಗೀಕರಿಸುವುದೇ ಅಥವಾ ಸಾಮ್ಯಯೋಗವನ್ನೇ ಎಂದು ತೀರ್ಮಾನಿಸಬೇಕಾದ ನಿರ್ಣಾಯಕ ವರ್ಷ. ನಮ್ಮ ದೇಶ ಪಾಶ್ಚಿಮಾತ್ಯ ರೀತಿಯ ಅಭಿವೃದ್ಧಿ ಮತ್ತು ಸಂಸ್ಕೃತಿಯನ್ನು ಒಪ್ಪಿ ತನ್ನನ್ನು ರೂಪಿಸಿಕೊಳ್ಳುತ್ತದೋ ಅಥವಾ ಭಾರತೀಯ ರೀತಿಯ ಅಭಿವೃದ್ಧಿ ಮತ್ತು ಸಂಸ್ಕೃತಿಯನ್ನು ಒಪ್ಪಿ ತನ್ನನ್ನು ರೂಪಿಸಿಕೊಳ್ಳುತ್ತದೋ ಎಂದು ಆಲೋಚಿಸಬೇಕಾದ ನಿರ್ಣಾಯಕ ವರ್ಷ. ನಮ್ಮ ದೇಶ ಪ್ರಕೃತಿ ಸಂಪತ್ತನ್ನು ಉಳಿಸಿ-ಬೆಳೆಸಿಕೊಂಡು ಬರುವ ಪ್ರಯತ್ನ ಮಾಡಬೇಕೇ ಅಥವಾ ಅದನ್ನು ವಿನಾಶದ ಅಂಚಿಗೆ ತಳ್ಳಬೇಕೇ ಎಂದು ಚಿಂತಿಸಬೇಕಾದ ನಿರ್ಣಾಯಕ ವರ್ಷ. ನಮ್ಮ ದೇಶದ ಜನತೆ ಅನೀತಿವಂತರಾಗಿ, ಭ್ರಷ್ಟರಾಗಿ ಜೀವನ ನಡೆಸಬೇಕೇ ಅಥವಾ ಅದು ನೀತಿಯುತವಾಗಿ ಜೀವನ ನಡೆಸಬೇಕೇ ಎಂಬುದನ್ನು ಗೊತ್ತು ಮಾಡಿಕೊಳ್ಳಬೇಕಾದ ನಿರ್ಣಾಯಕ ವರ್ಷ. ನಮ್ಮ ದೇಶದ ರಾಜಕಾರಣ ಅಧೋಗತಿಗೆ ಹೋಗುತ್ತಿರುವುದನ್ನು ನೋಡುತ್ತ ಜನತೆ ಮೂಕ ಪ್ರೇಕ್ಷಕನಾಗಿರಬೇಕೇ ಅಥವಾ ರಾಜಕೀಯ ಪ್ರಬುದ್ಧತೆಯನ್ನು ಬೆಳಸಿಕೊಂಡು ಕ್ರಿಯಾಶೀಲವಾಗಿ ರಾಜಕಾರಣವನ್ನು ಉನ್ನತ ಸ್ಥಿತಿಗೆ ಒಯ್ಯಬೇಕೇ ಎಂದು ಆಲೋಚಿಸಬೇಕಾದ ನಿರ್ಣಾಯಕ ವರ್ಷ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ಮೂರು ವರ್ಷಗಳು ಮುಗಿದವು. ಆಡಳಿತದಲ್ಲಾಗಲೀ, ಜನತೆಯಲ್ಲಾಗಲೀ ಪರಿಪಕ್ವತೆ ಜಾಗೃತಗೊಂಡಿಲ್ಲ. ಜನರು ಸ್ವಾರ್ಥಿಗಳಾಗುತ್ತಿದ್ದಾರೆ; ಧರ್ಮಾಂಧರಾಗುತ್ತಿದ್ದಾರೆ; ಹಿಂಸೆಯನ್ನು ತಮ್ಮ ಜೀವನದ ಒಂದು ಮೌಲ್ಯವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ, ತಮ್ಮ ಸಂಸ್ಕೃತಿಯನ್ನು ನಿಕೃಷ್ಟವಾಗಿ ಕಾಣುತ್ತಿದ್ದಾರೆ; ತಮ್ಮ ಭಾಷೆಗಳನ್ನು ಕಾಲ್ಗಸವನ್ನಾಗಿ ಮಾಡಿದ್ದಾರೆ; ತಮ್ಮ

ಸುತ್ತಲಿನ ಪರಿಸರವನ್ನು, ಪ್ರಕೃತಿ ಸಂಪತ್ತನ್ನು ಅವ್ಯಾಹತವಾಗಿ ಹಾಳುಮಾಡುತ್ತಿದ್ದಾರೆ; ತಮ್ಮ ಉದ್ಧಾರಕ್ಕೆ ಸಾಧನವಾಗಬೇಕಿರುವ ರಾಜಕಾರಣವನ್ನು ಅಪವಿತ್ರಗೊಳಿಸಿದ್ದಾರೆ; ಧರ್ಮಾಂಧರಾಗಿ ತಮ್ಮ-ತಮ್ಮ ಧರ್ಮದ ಮೂಲ ತತ್ವಗಳನ್ನು ಮರೆತಿದ್ದಾರೆ, ಪರಧರ್ಮಗಳ ಅಸಹಿಷ್ಣುತೆ ಬೆಳಸಿಕೊಂಡಿದ್ದಾರೆ, ಸಾಮಾಜಿಕ ಸುಧಾರಣೆಯ ವಾಹಕವಾಗಬೇಕಾಗಿರುವ ಎಲ್ಲ ಮಾಧ್ಯಮಗಳು ಸ್ವತಃ ಕುಲಗೆಟ್ಟಿವೆ, ಸಂವಿಧಾನದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಪರಸ್ಪರರ ತೇಜೋವಧೆಯಲ್ಲಿ ತೊಡಗಿವೆ. ದೇಶದ ಪ್ರಮುಖ ಆಡಳಿತ ಘಟಕಗಳಾದ ರಾಜ್ಯಗಳು ನೀರಿಗಾಗಿ, ಪ್ರದೇಶಕ್ಕಾಗಿ, ಭಾಷೆಗಾಗಿ ವೈರಿದೇಶಗಳಂತೆ ವರ್ತಿಸುತ್ತಿವೆ, ಜ್ಞಾನ ಸಂಪಾದನೆಗಾಗಿ ಮೂಲ ಸೆಲೆಯಾಗಬೇಕಾಗಿರುವ ಶಿಕ್ಷಣ ವ್ಯಾಪಾರಿ ಸರಕಾಗಿದೆ, ಸಂಸ್ಕೃತಿಯ ಪ್ರತಿನಿಧಿಯಾಗಬೇಕಾದ ಮಹಿಳೆ ವಾಣಿಜ್ಯ ವಸ್ತುವಾಗಿದ್ದಾಳೆ, ಭೂಮಿಯ ಮೇಲಿರುವ ಜನರ ದೈನಂದಿನ ಸಮಸ್ಯೆಗಳೇ ಬಗೆಹರಿಯದಿರುವಾಗ ಆಕಾಶದಲ್ಲಿಯ ಪ್ರಯೋಗಗಳಿಗೆ ಕೋಟಿ-ಕೋಟಿ ಹಣವನ್ನು ಖರ್ಚುಮಾಡಲಾಗುತ್ತಿದೆ, ದೇಶದ ರಕ್ಷಣೆಯ ಹೆಸರಿನಲ್ಲಿ ಭೀಕರ ಪರಿಣಾಮದ ಶಸ್ತ್ರಾಸ್ತ್ರಗಳ ಪೈಪೋಟಿಯಲ್ಲಿ ತೊಡಗಿವೆ, ೧೯೪೭ರ ದೇಶದ ವಿಭಜನೆಯ ನೋವು ಇನ್ನೂ ಕಾಡುತ್ತಿದೆ, ಜಮ್ಮು-ಕಾಶ್ಮೀರದ ಸಮಸ್ಯೆ ಉಲ್ಬಣಗೊಳ್ಳುತ್ತಿದೆ, ಒಂದು ಕೋಟಿಗೂ ಮೀರಿ ಹೆಚ್ಚು ಜನ ಪಕ್ಕದ ದೇಶಗಳಿಂದ ಭಾರತದೊಳಕ್ಕೆ ನುಸುಳಿದ್ದಾರೆ, ನಕ್ಸಲೀಯರಿಗೆ, ಮಾವೋವಾದಿಗಳಿಗೆ ಚೀನಾ ಮತ್ತಿನ್ನಿತರ ದೇಶಗಳಿಂದ ಎಲ್ಲ ಬಗೆಯ ಸಹಾಯ ಮತ್ತು ಕುಮ್ಮಕ್ಕು ಸಿಗುತ್ತಿದೆ, ನಕ್ಸಲೀಯರು, ಮಾವೋವಾದಿಗಳು, ತಾಲಿಬಾನಿಗಳು ಮುಂತಾದವರ ಅಟ್ಟಹಾಸದಿಂದ ದೇಶದಲ್ಲಿ ಆಂತರಿಕ ವಿಪ್ಲವದ ಪರಿಸ್ಥಿತಿ ಉಂಟಾಗುತ್ತಿದೆ, ಸ್ವಾತಂತ್ರ್ಯ ಬರುವ ಮೂರು ತಿಂಗಳ ಪೂರ್ವ ೧೯೪೭ ಮೇ ಇಂದ ಜುಲೈ ವರೆಗೆ ಯಾವ ಭಯಾನಕ ಮತ್ತು ಅಸ್ಥಿರ ರಾಜಕೀಯ ಸ್ಥಿತಿಯಲ್ಲಿ ಭಾರತವಿತ್ತೋ ಅಂಥದೇ ಪರಿಸ್ಥಿತಿಯಲ್ಲಿ ೨೦೧೦ನೇ ಇಸ್ವಿಯಲ್ಲಿ ಸ್ವಾತ್ರಂತ್ರೋರ ಭಾರತ ಅರವತ್ತುಮೂರನೇ ವರ್ಷದಲ್ಲಿದೆ! ಆರ್ಥಿಕವಾಗಿಯೂ ಜನರ ಸ್ಥಿತಿಯಲ್ಲಿ ಯಾವ ಸುಧಾರಣೆಯೂ ಆಗಿಲ್ಲ. ಸ್ವಾತಂತ್ರ್ಯ ಬರುವ ಮೊದಲು ಯಾವ ಪ್ರಮಾಣದ ಆರ್ಥಿಕ ಅಸಮಾನತೆಯಿತ್ತೋ ಈಗ ಅದಕ್ಕೂ ಹೆಚ್ಚು ತೀವ್ರವಾದ ಅಸಮಾನತೆಯುಂಟಾಗಿದೆ. ಎರಡನೇ ಮಹಾಯುದ್ಧ ಕಾಲದಲ್ಲಿ ಉಂಟಾಗಿದ್ದ ಪದಾರ್ಥಗಳ ಬೆಲೆಯೇರಿಕೆ, ಆಹಾರ ಪದಾರ್ಥಗಳ ಕೊರತೆ, ಪಡಿತರ ವ್ಯವಸ್ಥೆ, ಕಾಳಸಂತೆ ಇತ್ಯಾದಿ ಸಮಸ್ಯೆಗಳೆಲ್ಲ ಕ್ಲಿಷ್ಟತಮವಾಗಿ ಮರುಕಳಿಸಿವೆ, ಇಂಗ್ಲಿಷರ ಸಮ್ಮುಖದಲ್ಲಿ ಭಾರತ ವಿಭಜನೆಗೊಂಡು, ಭೀಕರ ರಕ್ತಪಾತವಾದಂತೆ ಈಗ ಅರವತ್ತು ಮೂರು ವರ್ಷಗಳ ನಂತರ ಸ್ವತಂತ್ರ ಭಾರತದ ನಮ್ಮದೇ ದೇಶೀಯ ಸರ್ಕಾರದ ಸಮ್ಮುಖದಲ್ಲಿ ಅದೇ ಕೋಮುಗಲಭೆಗಳು, ಅದೇ ರಾಜಕೀಯ ರಕ್ತಪಾತವಾಗುತ್ತಿದೆ. ಅಂದು ಇಂಥದಕ್ಕೆಲ್ಲ ಇಂಗ್ಲಿಷರು ಕಾರಣವಾಗಿದ್ದಂತೆ ಇಂದು ಅಮೇರಿಕಾ ಪರೋಕ್ಷವಾಗಿ ಕಾರಣವಾಗುತ್ತಿದೆ. ಅರವತ್ತು ಮೂರು ವರ್ಷಗಳ ಸ್ವಾತಂತ್ರ್ಯದ ನಂತರವೂ ಭಾರತ ಪಾಶ್ಚಿಮಾತ್ಯ ರಾಷ್ಟ್ರಗಳ ರಾಜಕೀಯ ಷಡ್ಯಂತ್ರದಿಂದ ಬಿಡುಗಡೆಗೊಳ್ಳಲು ಸಾಧ್ಯವಾಗಿಲ್ಲ. ದೇಶದ ಭೌಗೋಳಿಕ ವಿಭಜನೆಯೊಂದಿಗೆ ಉಂಟಾದ ಸೈನ್ಯದ ಭಯಂಕರ ಪರಿಣಾಮದ ವಿಭಜನೆಯ ಲಾಭವನ್ನು ಇಂದು ಅಮೇರಿಕ ಅನೇಕ ರೀತಿಯಲ್ಲಿ ತನ್ನ ರಾಜಕೀಯ ಉದ್ದೇಶ್ಯಕ್ಕಾಗಿ ಮಾಡಿಕೊಳ್ಳುತ್ತಿದೆ.

ಅದು ಭಾರತ ಮತ್ತು ಪಾಕಿಸ್ತಾನವನ್ನು ಶಾಶ್ವತ ಶತ್ರುಗಳನ್ನಾಗಿರಿಸಿದೆ. ಅಮೇರಿಕದ ಒಡೆದು ಆಳುವ ಈ ನೀತಿಯು ಭಾರತ ಮತ್ತು ಪಾಕಿಸ್ತಾನಗಳೆರಡು ದೇಶಕ್ಕೂ ಅಹಿತಕಾರಿಯೆಂಬ ಜ್ಞಾನೋದಯ ಅವುಗಳಿಗೆ ಆಗದೇ ಇರುವುದು ೨೧೧೧ನೇ ಇಸ್ವಿಯ ಅತ್ಯಂತ ದುರಂತಕರವಾದ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳ ಸಂಗತಿಯಾಗಿದೆ. ಕದಡಿದ ನೀರಲ್ಲಿ ಮೀನು ಹಿಡಿಯುವ ಅಮೇರಿಕದ ನೀತಿ, ಕಾಶ್ಮೀರ ಸಮಸ್ಯೆಯ ಕಗ್ಗಂಟು, ಭಾರತ ಮತ್ತು ಪಾಕ್ ನಡುವೆ ಎರಡೂ ದೇಶಗಳ ರಚನೆಯ ದಿನದಿಂದಲೇ ಪ್ರಾರಂಭವಾಗಿ ಅರವತ್ತುಮೂರು ವರ್ಷಗಳವರೆಗೂ ನಡೆದುಕೊಂಡು ಬಂದಿರುವ ಅಘೋಷಿತ ಸಮರ, ಝುಲ್ಫೀಕರ್ ಭುಟ್ಟೋರ 'ನೂರು ವರ್ಷಗಳ ಯುದ್ಧ'ದ ಮಾತನ್ನು ನಿಜಗೊಳಿಸುವ ನಿಟ್ಟಿನಲ್ಲಿ ಎರಡೂ ದೇಶಗಳು ಭರದಿಂದ ಸಾಗುತ್ತಿವೆ, ರಾಜಕೀಯ ಪಕ್ಷಗಳು ಸೈದ್ಧಾಂತಿಕವಾಗಿ ದಿವಾಳಿಯೆದ್ದು ಆರು ದಶಕಗಳೇ ಕಳೆದವು, ಪ್ರಜಾತಂತ್ರ ಅಧಿಕಾರಿಶಾಹಿತಂತ್ರವಾಗಿ ರೂಪಾಂತರಗೊಂಡಿದೆ, ಪಂಚಾಯತ್ ರಾಜ್ಯವು ಗ್ರಾಮಸ್ಥರಿಂದ ಗ್ರಾಮಸ್ಥರಿಗಾಗಿ ಎಂಬರ್ಥದ ಗ್ರಾಮರಾಜ್ಯವಾಗದೆ ಅದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೈಗೊಂಬೆಯಾಗಿದೆ, ಪಂಚಾಯತ್ ರಾಜ್ಯವು ಗ್ರಾಮಸ್ಥರಲ್ಲಿ ಆತ್ಮವಿಶ್ವಾಸವನ್ನೂ, ಆತ್ಮಗೌರವವನ್ನೂ, ಸ್ವಾವಲಂಬನೆಯ ಭಾವವನ್ನೂ ಬೆಳೆಸುವುದರ ಬದಲಾಗಿ ಆತ್ಮವಿಶ್ವಾಸಹೀನರನ್ನಾಗಿಯೂ, ಆತ್ಮಗೌರವಹೀನರನ್ನಾಗಿಯೂ, ಪರಾವಲಂಬಿಗಳನ್ನಾಗಿಯೂ, ರಾಜಕೀಯ ಪಕ್ಷಗಳ ದಾಳವನ್ನಾಗಿಯೂ, ಹಿಂಸಾಚಾರದಲ್ಲಿ ತರಬೇತಿಕೊಡುವ ಕೇಂದ್ರವನ್ನಾಗಿಯೂ ಪರಿವರ್ತಿಸಿದೆ. ಪಂಚಾಯತ್‌ರಾಜ್ಯ ಮೂಲಕ ಗ್ರಾಮಸ್ವರಾಜ್ಯದಿಂದ ರಾಮರಾಜ್ಯ ಸ್ಥಾಪನೆಯ ಮಹಾತ್ಮಾ ಗಾಂಧೀಯವರ ಗುರಿ ನುಚ್ಚುನೂರಾಗಿದೆ. ದಲಿತರ ಮೇಲಿನ ದೌರ್ಜನ್ಯವು ಅಸ್ಪೃಶ್ಯತಾ ನಿವಾರಣೆ ಕಾನೂನಿನ ನಂತರವೂ ನಡೆಯುತ್ತಲೇ ಇದೆ. ಮುಸ್ಲಿಂರ ಪ್ರೀತಿ-ಸ್ನೇಹ ಸಂಪಾದಿಸುವುದರಲ್ಲಿ ಹಿಂದುಗಳು ವಿಫಲರಾಗಿದ್ದಾರೆ. ಹಿಂದುಗಳ ಸಂಸ್ಕೃತಿಯನ್ನು ಉಳಿಸಬೇಕೆನ್ನುವ ವಿಚಾರವನ್ನು ಬೆಳೆಸಿಕೊಳ್ಳಲು ಮುಸ್ಲಿಂರೂ ವಿಫಲರಾಗಿದ್ದಾರೆ. ಎಲ್ಲ ಧರ್ಮಗಳಿಗೆ ಸಮಾನ ಗೌರವ ಮತ್ತು ಸ್ಥಾನ ಕೊಟ್ಟಿರುವ ಗಣರಾಜ್ಯವಿದ್ದಾಗ್ಯೂ ಕ್ರಿಶ್ಚಿಯನ್ನರು ಅನ್ಯಧರ್ಮೀಯರನ್ನು ತಮ್ಮ ಧರ್ಮಕ್ಕೆ ಮತಾಂತರಗೊಳಿಸುವುದನ್ನು ನಿಲ್ಲಿಸಿಲ್ಲ. ಇದೆಲ್ಲಕ್ಕಿಂತ ದುರ್ದೈವದ ಸಂಗತಿಯೆಂದರೆ ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರಗಳಗಳಾಗಲೀ ರಾಜಕೀಯ ಉದ್ದೇಶ್ಯಕ್ಕಾಗಿ ವಿವಿಧ ಧರ್ಮೀಯರನ್ನು ಉಪಯೋಗಿಸಿಕೊಳ್ಳುವ ದುರಭ್ಯಾಸವನ್ನು ಬಿಟ್ಟಿಲ್ಲ.

ಇದು ವರೆಗೆ ಪಟ್ಟಿ ಮಾಡಿದ ಸಮಸ್ಯೆಗಳ ಉದ್ಭವಕ್ಕೆ ಮುಖ್ಯ ಕಾರಣ ಭಾರತೀಯರು ಸ್ವಾತಂತ್ರ್ಯ ಬರುತ್ತಿದ್ದ ಹಾಗೆಯೇ ಅಧಿಕಾರ ಗ್ರಹಿಸುವುದಕ್ಕೆ ನುಗ್ಗಿದ್ದು, ತಮ್ಮತಮ್ಮಲ್ಲಿಯೇ ಪೈಪೋಟಿ ನಡೆಸಿದ್ದು. ಯಾವ ನಾಯಕರು ಅಧಿಕಾರದ ಹೊರಗೆ ಇದ್ದು, ಜನರ ಮಧ್ಯ ಇದ್ದು ರಾಷ್ಟ್ರ ನಿರ್ಮಾಣಕ್ಕಾಗಿ ಅಗತ್ಯವಾಗಿದ್ದ ಪರಿಸರವನ್ನು ನಿರ್ಮಿಸಬೇಕಿತ್ತೋ ಅಂಥವರೇ ಅಧಿಕಾರದ ಗದ್ದುಗೆ ಏರಿದರು. ತಮ್ಮ ನಿಜವಾದ ಕರ್ತವ್ಯವೇನೆಂಬುದನ್ನು ಮರೆತರು. ತಾವು ತ್ಯಾಗಮಾಡಿದ್ದೇವೆ, ಜೈಲಿಗೆ ಹೋಗಿದ್ದೇವೆಯಾದ್ದರಿಂದ ಅಧಿಕಾರಸ್ಥರಾಗುವುದು ತಮ್ಮ ಹಕ್ಕು ಎಂದು ತಿಳಿದರು. ರಾಜನಂತೆ ಪ್ರಜೆಗಳು, ಗುರುವಿನಂತೆ ಶಿಷ್ಯರು, ನೂಲಿನಂತೆ ಸೀರೆ ಎಂಬಂತೆ ಪಾಲಿಸಬೇಕಾದ ಕರ್ತವ್ಯ ಮರೆತು, ಕೇವಲ ಹಕ್ಕಿಗಾಗಿ ಹಪಿತಪಿಸುತ್ತಿದ್ದ ನಾಯಕರನ್ನು

ದೇಶದ ಪ್ರಜೆಗಳೂ ಅನುಸರಿಸಿದರು. ಸ್ವಾತಂತ್ರ್ಯ ಬಂದ ಕೂಡಲೆ ಆಗ ಇದ್ದ ಎಲ್ಲ ಬಗೆಯ ಸಾಮಾಜಿಕ, ಆರ್ಥಿಕ ವೈಷಮ್ಯತೆಗಳ ನಿವಾರಣೆಗಾಗಿ ಕೆಲಸ ಮಾಡಬೇಕಿತ್ತು. ಬದಲಿಗೆ ಎಲ್ಲರೂ ಹಕ್ಕುಗಳನ್ನು ಪಡೆಯುವುದರ ಮೂಲಕ ತಾರತಮ್ಯತೆಗಳನ್ನು ಹೋಗಲಾಡಿಸುವ ಪ್ರಯತ್ನದಲ್ಲಿ ತೊಡಗಿದರು. ಈ ಪ್ರಯತ್ನದ ಅರ್ಥ ತಾನು ನಿಂತ ಕೊಂಬೆಯನ್ನೇ ಕಡಿಯುವ ಮೂರ್ಖತನದಂಥದಾಗಿತ್ತು. ಸಾಮಾಜಿಕವಾಗಿ ಹಿಂದುಳಿದವರನ್ನು ಮೇಲಕ್ಕೆ ಎತ್ತುವ ಕರ್ತವ್ಯ ಪ್ರತಿಯೊಬ್ಬ ಭಾರತೀಯನದಾಗಬೇಕಿತ್ತು. ಈ ಕರ್ತವ್ಯದ ನಿರ್ವಹಣೆ ಪ್ರಜೆಗಳಿಂದಲೂ, ಸರ್ಕಾರದಿಂದಲೂ ಶ್ರದ್ಧೆ ಮತ್ತು ನಿಷ್ಠೆಯಿಂದ ಆಗಬೇಕಿತ್ತು. ಹಾಗೆ ಆಗದೇ ಇದ್ದುದರಿಂದ ಮೀಸಲಾತಿಯ ಪ್ರಕ್ರಿಯೆ ಪ್ರಾರಂಭವಾಯಿತು. ಮೊದಲು ಮೀಸಲಾತಿಯ ಅವಧಿ ಹತ್ತುವರ್ಷಕ್ಕೆ ಮಾತ್ರ ಸೀಮಿತಗೊಂಡಿತ್ತು. ನಂತರ ಪುನಃ ಹತ್ತುವರ್ಷ, ನಂತರ ಪುನಃ ಹತ್ತುವರ್ಷ ಎಂದು ಮೀಸಲಾತಿಯ ಅವಧಿಯನ್ನು ವಿಸ್ತರಿಸಿಕೊಳ್ಳುತ್ತಲೇ ಬರಲಾಗುತ್ತಿದೆ. ಹಾಗೆ ಮಾಡದಿದ್ದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರು ಮೀಸಲಾತಿ ತಮ್ಮ ಹಕ್ಕೆಂದು ಚಳುವಳಿ ಹೂಡುತ್ತಾರೆ. ಮುಂದುವರೆದವರು ಹಿಂದುಳಿದವರನ್ನು ಮೇಲಕ್ಕೆತ್ತಬೇಕೆಂಬ ತಮ್ಮ ಪಾಲಿನ ಕರ್ತವ್ಯವನ್ನು ಮಾಡದೆ ಇರುವುದು, ಅಂತೆಯೇ ಹಿಂದುಳಿದವರು ತಾವು ಮುಂದು ಬರಬೇಕೆಂದು ನಿಷ್ಠೆಯಿಂದ ಕರ್ತವ್ಯವನ್ನು ಪಾಲಿಸದೇ ಇರುವುದು ಮೀಸಲಾತಿಯ ಸಮಸ್ಯೆ ಮುಂದುವರಿಯುತ್ತಾ ಹೋಗುವುದಕ್ಕೆ ಕಾರಣವಾಗಿದೆ, ಕರ್ತವ್ಯವನ್ನು ನೆರವೇರಿಸದೆ ಹಕ್ಕೊತ್ತಾಯದ ಮೂಲಕ ಅಭಿವೃದ್ಧಿ ಹೊಂದಬಹುದೆಂಬ ತಪ್ಪು ಕಲ್ಪನೆ ಬೇರೂರಲು ಕಾರಣವಾಗಿದೆ. ಈ ತಪ್ಪು ಕಲ್ಪನೆಯೇ ಈಗ ನಡೆಯುತ್ತಿರುವ ಜನಗಣತಿಯ ಮೇಲೂ ಪ್ರಭಾವ ಬೀರುತ್ತಿದೆ. ಮೀಸಲಾತಿಯ ಹಕ್ಕೊತ್ತಾಯಕ್ಕಾಗಿ ಜಾತಿಗಳ ಗಣನೆಯೂ ಆಗಬೇಕೆಂಬ ಕೂಗು ಕೇಳಿಬರುತ್ತಿದೆ. ದೇಶದ ಅಲ್ಪ ಸಂಖ್ಯಾತರಿಗೆ ಈಗಾಗಲೇ ಮೀಸಲಾತಿಯ ಬೇಡಿಕೆಗೆ ಮುಖ್ಯಕಾರಣ ಆರ್ಥಿಕ ಅಸಮಾನತೆ. ಇಂದು ಉಂಟಾಗಿರುವ ಆರ್ಥಿಕ ಅಸಮಾನತೆಯನ್ನು ಆಧುನಿಕ ಅಭಿವೃದ್ಧಿ ನೀತಿಯಿಂದಂತೂ ನಿವಾರಿಸಲು ಸಾಧ್ಯವಿಲ್ಲ. ಸರ್ಕಾರವೇ ಪ್ರಕಟಿಸಿರುವ ಅಂಕಿಸಂಖ್ಯೆಗಳ ಪ್ರಕಾರ ಅರ್ಥಿಕ ವಿಷಮತೆ ಮತ್ತು ಅವಕಾಶಗಳ ವಿಷಮತೆ ಹೆಚ್ಚಾಗುತ್ತಿದೆ. ಈ ಪರಿಸ್ಥಿತಿ ಆರನೇ ಪಂಚವಾರ್ಷಿಕ ಅವಧಿಯಲ್ಲೂ ಇದೆ.

ದೇಶದ ಜನತೆಯಲ್ಲಿ ಕರ್ತವ್ಯ ನಿರ್ವಹಣೆಯ ಪ್ರಜ್ಞೆ ದಿನೇದಿನೇ ಕಡಿಮೆಯಾಗುತ್ತಿದೆ. ಕರ್ತವ್ಯ ನಿರ್ವಹಣೆಯೆಂದರೆ ಆರ್ಥಿಕ, ಸಾಮಾಜಿಕ ಬೆಳವಣಿಗೆಯ ಮಾರ್ಗ. ಸಮಾಜವನ್ನು ಶಾಂತಿ–ಸುಖ–ನೆಮ್ಮದಿಯಿಂದ ಇಡುವ ಮಾರ್ಗ. ದೇಶಕ್ಕೆ ತನ್ನ ಸೇವೆಯನ್ನು ಮೊದಲು ಸಲ್ಲಿಸಿ ನಂತರ ತನ್ನ ಪಾಲಿನ ಭಾಗವನ್ನು ಪಡೆಯುವ ಮಾರ್ಗ. ದೇಶ ನನಗೇನು ಕೊಟ್ಟಿತು ಎಂದು ಕೇಳುವುದಕ್ಕೆ ಮುನ್ನ ನಾನು ದೇಶಕ್ಕೆ ಏನು ಕೊಟ್ಟಿದ್ದೇನೆ ಎಂಬ ಪ್ರಶ್ನೆಗೆ ಉತ್ತರ ದೊರಕುವ ಮಾರ್ಗ.

ಎಲ್ಲ ಧರ್ಮಗಳೂ ಮಾನವನ ಕಲ್ಯಾಣವನ್ನೇ ಬಯಸುತ್ತಿರುವಾಗ ಎಲ್ಲ ಧರ್ಮೀಯರೂ ಇರುವ ಅವಕಾಶಗಳನ್ನು ನ್ಯಾಯವಂತಿಕೆಯಿಂದ ಉಪಯೋಗಿಸಿಕೊಂಡರೆ ಧರ್ಮಾಧಾರಿತ ಮೀಸಲಾತಿಯ ಹಕ್ಕಿನ ಅವಶ್ಯಕತೆಯೇ ಇರುವುದಿಲ್ಲ. ಎಲ್ಲ ಧರ್ಮೀಯರೂ ತಮ್ಮ ಧರ್ಮದ ಮೂಲ ಸಿದ್ಧಾಂತದ ಪ್ರಕಾರ ಕರ್ತವ್ಯಗಳನ್ನು ನಿರ್ವಹಿಸಿದರೆ ಹಕ್ಕು ಅಧಾರಿತ ಘರ್ಷಣೆಗೆ ಅವಕಾಶವಿರುವುದಿಲ್ಲ.

ದೇಶದ ಭಾಷೆಗಳೆಲ್ಲವೂ ಸಮಾನ ಗೌರವಕ್ಕೆ ಪಾತ್ರವೆಂದು ತಿಳಿದು ಪರಸ್ಪರರ ಭಾಷೆಯನ್ನು ಕಲಿಯುವುದು ಕರ್ತವ್ಯವೆಂದು ಎಲ್ಲರೂ ತಿಳಿದರೆ ಭಾಷೆಯ ಆಧಾರದ ಮೇಲೆ ನಡೆಯುತ್ತಿರುವ ವಿವಾದಗಳೆಲ್ಲವೂ ಇಲ್ಲದಂತಾಗುವುದು. ಕರ್ತವ್ಯ ಲೋಪವೇ ಹಕ್ಕಿನ ಬೇಡಿಕೆಯಾಗಿ ಉಗ್ರರೂಪತಾಳುತ್ತದೆ, ಹಿಂಸೆಗೆ ಕಾರಣವಾಗುತ್ತದೆ, ದೇಶದ ಅಂಖಡತೆಗೆ ಧಕ್ಕೆ ಒದಗುತ್ತದೆ.

ನಮ್ಮ ಸಂವಿಧಾನದ ಮೂರನೇ ಭಾಗದಲ್ಲಿ ಮೂವತ್ತು ಪ್ರಕಾರದ ಮೂಲಭೂತ ಹಕ್ಕುಗಳನ್ನು ತನ್ನ ಪ್ರಜೆಗೆ ನೀಡಿದ್ದರೆ, ಭಾಗ ನಾಲ್ಕು (ಎ)ಯಲ್ಲಿ ಕೇವಲ ಹತ್ತು ಪ್ರಕಾರದ ಮೂಲಭೂತ ಕರ್ತವ್ಯಗಳನ್ನು ಒದಗಿಸಿದೆ. ಅಂದರೆ ಪ್ರಜೆಗಳು ನಿರ್ವಹಿಸಬೇಕಾದ ಕರ್ತವ್ಯಗಳಿಗಿಂತ ಅವರು ಹೊಂದಬೇಕಾದ ಹಕ್ಕುಗಳ ಕಡೆಗೇ ಹೆಚ್ಚು ಗಮನಕೊಟ್ಟಂತಾಯಿತು. ಕರ್ತವ್ಯ ಮತ್ತು ಹಕ್ಕುಗಳ ವಿಷಯದಲ್ಲಿ ಸಂವಿಧಾನ ತಾರತಮ್ಯ ಮಾಡಿದೆ ಎಂದೆನಿಸದೇ ಇರಲಾರದು. ರಾಷ್ಟ್ರಪಿತ ಗಾಂಧೀಯವರ ಪ್ರಕಾರ ಯಾವುದೇ ಒಂದು ಹಕ್ಕು ಯಾವುದೇ ಒಬ್ಬ ವ್ಯಕ್ತಿಗೆ ಸ್ವಾಭಾವಿಕವಾಗಿ ಸಾಮಾಜಿಕ ತಿಳುವಳಿಕೆಯಿಂದ ಬರಬೇಕೇ ಹೊರತು ಘರ್ಷಣೆ, ಹೋರಾಟ, ಮುಷ್ಕರ ಇತ್ಯಾದಿಗಳಿಂದಲ್ಲ. ಅಲ್ಲದೆ, ಇದಕ್ಕಿಂತ ಹೆಚ್ಚಾಗಿ ಸೇವೆಯ ಮೂಲಕ ದತ್ತವಾಗುವ ಹಕ್ಕು ಹೆಚ್ಚು ಫಲದಾಯಕ ಮತ್ತು ಹೆಚ್ಚು ಪ್ರಜಾತಾಂತ್ರಿಕವಾಗಿರುತ್ತದೆ. ಕಳೆದ ಅರವತ್ತುಮೂರು ವರ್ಷಗಳಿಂದ ಹಕ್ಕುಗಳಿಗಾಗಿ ನಡೆದ ಹೋರಾಟದಿಂದ ಪ್ರಜೆಗಳು ಪಡೆದದ್ದಾದರೂ ಏನನ್ನು? ಪರಸ್ಪರ ಹೊಟ್ಟೆಯುರಿ, ದ್ವೇಷ ಮತ್ತು ನ್ಯಾಯಾಲಯಗಳ ಕಟ್ಟೆ ಏರುವಿಕೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿಯೇ ಗಾಂಧೀಜಿಯವರು ಪ್ರತಿಪಾದಿಸಿದ್ದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಸರ್ವಧರ್ಮ ಸಮಾನತ್ವ, ಸ್ವದೇಶಿ, ಸ್ಪರ್ಶಭಾವನೆ, ಇತ್ಯಾದಿ ಮೌಲ್ಯಗಳ ಸ್ಥಾಪನೆಗಾಗಿ ದೇಶದ ನಾಯಕರು, ತಜ್ಞರು, ಬುದ್ಧಿಜೀವಿಗಳು ದೇಶಾಭಿಮಾನದಿಂದ ಪ್ರಯತ್ನಿಸಿದ್ದರೆ ಇಂದು ಹಕ್ಕುಗಳನ್ನು ಪಡೆಯುವ ಉದ್ದೇಶ್ಯಕ್ಕಾಗಿ ಬಗೆಬಗೆಯ ಹೋರಾಟಗಳಿಂದ ದೇಶದ ಸಾರ್ವಜನಿಕ ಜೀವನದಲ್ಲಿ ಹೊರಬಂದಿರುವ ಹಾಲಾಹಲದ ಬದಲಾಗಿ ಸಮಾಜದ ಎಲ್ಲ ಪ್ರಕಾರದ ವರ್ಗಗಳ ಮಧ್ಯ ಭ್ರಾತೃತ್ವ ಭಾವದ ಅಮೃತ ಹರಿಯುತ್ತಿತ್ತು.

ಹಕ್ಕುಗಳಿಗಿಂತ ಕರ್ತವ್ಯ ಹೆಚ್ಚು ಪವಿತ್ರವಾದುದು. ಹಕ್ಕುಗಳಿಗಾಗಿ ಹೋರಾಟ ಕರ್ಮಕಾಂಡವಾದರೆ ಕರ್ತವ್ಯದ ಪಾಲನೆ ಹನುಮನ ರಾಮಭಕ್ತಿಯಂತೆ, ಅಲ್ಲಾಹುವಿನ ಮೇಲಿನ ಭಕ್ತಿಯಂತೆ, ಏಸುವಿನ ಮೇಲಿನ ಪ್ರೀತಿಯಂತೆ ಪಾವನ. ಆತ್ಮೋದ್ಧಾರದ ದಾರಿ. ಆದರೆ, ಹಕ್ಕುಗಳ ಕಲ್ಪನೆಯ ಉಗಮವೇ ರಕ್ತಸಿಕ್ತ. ಫ್ರಾನ್ಸ್ ದೇಶದಲ್ಲಿ ಕ್ರಾಂತಿಯಾದಾಗ ಮಾನವ ಹಕ್ಕುಗಳ ಘೋಷಣೆಯಾಯಿತು. ನಂತರ ಜಾಗತಿಕ ಸ್ವರೂಪದ ರಾಜಕೀಯ ಏರುಪೇರುಗಳು ಸಂಭವಿಸುತ್ತಹೋದಂತೆ ಹಕ್ಕುಗಳ ಸರಮಾಲೆಯೇ ಪ್ರಾರಂಭವಾಯಿತು. ಕೈಗಾರಿಕಾ ಕ್ರಾಂತಿ, ಜಾಗತಿಕರಣ ಮುಂತಾದವುಗಳು ಸಾರ್ವಜನಿಕ ದಿಗಂತದಲ್ಲಿ ಕಾಣಿಸಿಕೊಳ್ಳಲಾರಂಭಿಸಿದವು. ಆರ್ಥಿಕ ಅಸಮಾನತೆ, ಒಂದು ವರ್ಗದಿಂದ ಇನ್ನೊಂದು ವರ್ಗದ ಶೋಷಣೆ ಇತ್ಯಾದಿ ಅಮಾನವೀಯ ಸಂಬಂಧಗಳ ಅರಿವು ಜನರಲ್ಲಿ ಮೂಡುತ್ತಲೇ ಮಾನವ ಹಕ್ಕುಗಳು ಎಂಬ ಪರಿಕಲ್ಪನೆ ಮೂಡಿತು. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಈ

ಹಕ್ಕುಗಳ ಚಲಾವಣೆಗಳ ಹಿಂದೆ ಜಗತ್ತಿನ ಅರ್ಥ ಬಲಾಢ್ಯ ದೇಶಗಳ ಸ್ವಾರ್ಥಪೂರ್ಣ ಪಿತೂರಿಯಿದೆ. ಮಾಹಿತಿ ಹಕ್ಕು, ಉದ್ಯೋಗದ ಹಕ್ಕು, ನೀರಿನ ಮೇಲಿನ ಹಕ್ಕು, ಕುಡಿಯುವ ನೀರಿನ ಹಕ್ಕು, ಆಹಾರ ಭದ್ರತೆಯ ಹಕ್ಕು. ಈ ಹಕ್ಕು ಪಡೆಯುವ ವಿಚಾರ ಎಂಥ ವಿಷಚಕ್ರಕ್ಕೆ ಸಿಕ್ಕಿದೆ ಎಂಬ ವಿಚಾರದಲ್ಲಿ ದೇಶದ ಹಿರಿಯ ಸಮಾಜವಾದಿ ಚಿಂತಕ ಕಿಶನ್ ಪಾಟ್ನಾಯಕ್‌ರ ಕೆಳಗಿನ ಮಾತುಗಳು ಉಲ್ಲೇಖನೀಯವಾಗಿದೆ :-

"ಸರಕುಗಳ ಉತ್ಪಾದನೆ ಹಾಗೂ ಮಾರಾಟದ ಹೊರತಾಗಿ ಮಾಹಿತಿ, ಸಂಶೋಧನೆ, ವಿಜ್ಞಾನ, ನಾಟಕ, ಮನರಂಜನೆ ಎಲ್ಲ ಕೆಲ ವ್ಯಾಪಾರಿ ಸಂಸ್ಥೆಗಳ ನಿಯಂತ್ರಣಕ್ಕೆ ಬಂದಿವೆ. ಈ ವರೆಗೆ ಹಕ್ಕುಗಳಿಗಾಗಿ ಹೋರಾಟ ರಾಜ್ಯದ ವಿರುದ್ಧ ನಡೆಯುತ್ತಿತ್ತು. ಆದರೆ ಈಗ ಬರುಬರುತ್ತಾ ಕಂಪನಿಗಳ ವಿರುದ್ಧವೂ ಹಕ್ಕುಗಳಿಗಾಗಿ ಆಂದೋಲನಗಳು ನಡೆಯುತ್ತಿವೆ. ಒಕ್ಕಲೆಬ್ಬಿಸುವಿಕೆ, ಮಾಲಿನ್ಯ ಇತ್ಯಾದಿ ಆಂದೋಲನಗಳು ಇದೇ ತರಹದ್ದಾಗಿವೆ. ವಿಪರ್ಯಾಸವೆಂದರೆ ಕಂಪನಿಗಳ ವಿರುದ್ಧ ಹಕ್ಕುಗಳನ್ನು ಪಡೆಯಲು ರಾಜ್ಯದ ನೆರವನ್ನು ಕೋರಲಾಗುತ್ತಿದೆ. ಅತ್ತ ರಾಜ್ಯದ ಹಾಗೂ ಮಾರುಕಟ್ಟೆ ಮನುಷ್ಯನ ಸಮಗ್ರ ಅಧಿಕಾರದ ಮೇಲೆ, ಅವನ ಎಲ್ಲ ಸಂಪನ್ಮೂಲ ನೆಲ,ಜಲ,ಗಾಳಿ ಹಾಗೂ ಗಿಡಗಂಟೆಗಳ ಮೇಲೆ ಪ್ರಭುತ್ವ ಹೊಂದಲೆತ್ನಿಸಿದರೆ ಮನುಷ್ಯನಿಗೆ ಸಾವಿರ ಹಕ್ಕುಗಳ ಅವಶ್ಯವಾಗುತ್ತದೆ. ಉಸಿರಾಡುವುದಕ್ಕೂ ಹಕ್ಕಿನ ಅವಶ್ಯಕತೆ ಬೀಳಬಹುದು!"

ಇಂಥ ದುರದೃಷ್ಟಕರವಾದ ಪರಿಸ್ಥಿತಿ ದೇಶದ ಜನತೆಗೆ ಬರಬಾರದೆಂಬ ದೂರದೃಷ್ಟಿಯಿಂದಲೇ ಮಹಾತ್ಮಾ ಗಾಂಧೀಜಿಯವರು ತಮ್ಮ ಜೀವಿತದ ಕೊನೆಯ ಉಸಿರಿನವರೆಗೂ ಸಮಾಜದ ಆರೋಗ್ಯಕ್ಕಾಗಿ ಸೇವೆಯಲ್ಲಿ ತೊಡಗಿದರೆ ವಿನಃ ತಮಗಾಗಿ ಯಾವ ಅಧಿಕಾರದ ಹಕ್ಕನ್ನೂ ಮುಂದಿಡಲಿಲ್ಲ. ಅವರಂತೆಯೇ ಸಂತ ವಿನೋಬಾ ತಮ್ಮ ಇಪ್ಪತ್ತು ವರ್ಷದ ಸೇವೆಯ ಮೂಲಕ, ನಾಗರಿಕ ಕರ್ತವ್ಯ ನಿರ್ವಹಣೆಯ ಮೂಲಕ ಓರ್ವ ಪ್ರಜೆ ಹಕ್ಕನ್ನು ಹೇಗೆ ಪಡೆಯಬೇಕೆಂಬುದನ್ನು ಕಾಯಾ-ವಾಚಾ-ಮನಸಾ ತೋರಿಸಿದರು. ಮುಂದೆ ಲೋಕನಾಯಕ ಜಯಪ್ರಕಾಶ ನಾರಾಯಣರೂ ಸಹ ತಮ್ಮ ಹೋರಾಟವನ್ನು ಅಧಿಕಾರಕ್ಕಾಗಿ ಹಕ್ಕೆಂದು ರೂಪಾಂತರಿಸದೆ ಸಾಮಾಜಿಕ ಆರೋಗ್ಯದ ಕರ್ತವ್ಯ ಬದ್ಧತೆಯಾಗಿ ರೂಪಾಂತರಿಸಿದರು.

ದೇಶದ ಸ್ವಾತಂತ್ರ್ಯದೊಂದಿಗೆ ಹಕ್ಕು ಮತ್ತು ಕರ್ತವ್ಯ ಜರಾಸಂಧನಂತೆ ಎರಡು ಪ್ರತ್ಯೇಕ ದೇಹಗಳಾಗಿ ಹುಟ್ಟಿದಂತೆ ಹುಟ್ಟಿವೆ. ಇದು ಅಪಾಯಕಾರಿ.

ಯಾವುದೇ ಸಿದ್ಧಾಂತಧಾರಿತ ಸಮಾಜವನ್ನು ಸ್ಥಾಪಿಸಿದರೂ ಎಲ್ಲರ ಏಳಿಗೆ ಸಮಾನವಾಗಿ ಏಕ ಕಾಲಕ್ಕೆ ಆಗಲಾರದರು. ಆದ್ದರಿಂದ ಜನರಲ್ಲಿ ಪರಸ್ಪರ ಸಹಕಾರ, ತಾಳ್ಮೆ ಇರಬೇಕು. ಹಕ್ಕಿಗಾಗಿ ಹೋರಾಡುವ ಮನೋಭಾವ ಬೆಳೆಸಿಕೊಳ್ಳುವುದಕ್ಕಿಂತ ಕರ್ತವ್ಯಪಾಲನೆಯ ಮನೋಭಾವ ಬೆಳೆಸಿಕೊಳ್ಳಬೇಕು. ಯಾರ ಮನದೊಳಗೆ ಕರ್ತವ್ಯಾಧಾರಿತ ಪರಹಿತವಿರುತ್ತದೋ ಅಂಥವರಿಗೆ ಜಗದೊಳಗೆ ಯಾವುದೂ ದುಲರ್ಭವಿಲ್ಲ.

ಭಾರತ ದೇಶವಾಸಿಗಳೆಲ್ಲರೂ ಹಕ್ಕಿಗಾಗಿ ಹೋರಾಡುವ ಬದಲು ಕರ್ತವ್ಯಕ್ಕಾಗಿ ಸ್ಪರ್ಧಿಸಿದರೆ ದೇಶ ನಿರ್ಮಾಣವಾದೀತು.

* * *

ಜೀವನದ ಬಗ್ಗೆ ಗಾಂಧೀಜಿಯವರ ವಿಶೇಷ ದೃಷ್ಟಿ

– ರಂಗನಾಥ ದಿವಾಕರ

ಮಹಾತ್ಮಾ ಗಾಂಧೀಯವರು ಮಾನವಕುಲಕ್ಕೆ ಕೊಟ್ಟ ಸಂದೇಶವನ್ನು ಒಂದೇ ಶಬ್ದದಲ್ಲಿ ಹೇಳುವುದಾದರೆ 'ಸತ್ಯ' ಎಂದು ಹೇಳಬೇಕಾದೀತು; ಎರಡು ಶಬ್ದದಲ್ಲಿ ಹೇಳುವುದಾದರೆ 'ಸತ್ಯ–ಅಹಿಂಸೆ' ಎಂದು ಹೇಳಬೇಕಾಗುವುದು. ಸತ್ಯಶೋಧಕನು ಸತ್ಯಲೋಕವನ್ನು ಮುಟ್ಟಬೇಕಾಗಿದ್ದರೆ ಅಹಿಂಸೆಯೇ ರಾಜ ಮಾರ್ಗ ಎಂದು ಅವರು ಸಾರಿದರು. ಗಾಂಧೀಜಿಯವರ ಜೀವನವೆಂದರೆ ಸತ್ಯ–ಅಹಿಂಸೆಗಳ ಮೇಲೆ ಬರೆದ ಜೀವಂತ ಭಾಷ್ಯವೇ ಸೈ. ಅವರು ನುಡಿದುದು, ನಡೆದುದು, ಬರೆದುದು–ಎಲ್ಲವೂ ಕಾಲವಶಾತ್ ನಾಳೆ ಮಾನವರಿಗೆಮರೆತು ಹೋದರೂ 'ಸತ್ಯ–ಅಹಿಂಸೆ' ಈ ಎರಡು ಶಬ್ದಗಳು ವಾಯುಮಂಡಲದಲ್ಲಿ ಅಲೆಯುತ್ತಿರುವವರೆಗೆ ಅವರ ಆದೇಶ ನಮ್ಮ ಕಿವಿಯಲ್ಲಿ ದುಮುದುಮಿಸುತ್ತಲೆ ಇರುವುದು.

ಮಹಾತ್ಮರು ಸತ್ಯ–ಅಹಿಂಸೆಗಳ ಮೇಲೆ ಭಾಷ್ಯ ಬರೆದ ಆಚಾರ್ಯರಷ್ಟೇ ಅಲ್ಲ; ಅವರು ಸನಾತನ ವಾದ ಸತ್ಯ–ಅಹಿಂಸಾ ಧರ್ಮದ ಸ್ಮೃತಿಕಾರರು. ಅವರು ಸತ್ಯ–ಅಹಿಂಸೆಗಳ ದ್ರಷ್ಟಾರರೆಂದೇ ಹೇಳಬಹುದಾಗಿತ್ತು. ಆದರೆ ವೇದೋಪನಿಷತ್ತುಗಳ ಕಾಲದಲ್ಲಿಯೆ ಇವುಗಳ ಪ್ರಥಮ ದರ್ಶನವಾಗಿರುವುದರಿಂದ ಆಗಿನ ಋಷಿಗಳೇ ಈ ಮಂತ್ರಗಳ ದ್ರಷ್ಟಾರರು. ಗಾಂಧೀಜಿಯವರು ಸ್ಮೃತಿಕಾರರು ಹಾಗೂ ಅದ್ವಿತೀಯ ಭಾಷ್ಯಕಾರರು ಎಂದು ಹೇಳಬೇಕಾಗಿರುವುದು. ಎಲ್ಲಕ್ಕೂ ಹೆಚ್ಚಿನದೆಂದರೆ ಆಧುನಿಕ ಕಾಲದಲ್ಲಿ ಅವರು ಈ ಎರಡೂ ವ್ರತಗಳ ನಿತ್ಯ ನಿಷ್ಠಾಪೂರ್ಣ ಆಚರಣೆಯಿಂದ 'ಆಚಾರಪ್ರಭವೋ ಧರ್ಮಃ' ಎಂಬ ನ್ಯಾಯದಂತೆ ಪ್ರತ್ಯಕ್ಷ ವ್ಯಾವಹಾರಿಕ ಧರ್ಮಸ್ವರೂಪವನ್ನೂ ಕೊಟ್ಟು ಮಾನವಕುಲಕ್ಕೆ ಮಾರ್ಗದರ್ಶಕರಾಗಿರುವರು. ಒಬ್ಬ ಮಾನವನ ನಿತ್ಯಜೀವನದಲ್ಲಿ ಸತ್ಯ–ಅಹಿಂಸೆಗಳ ಪ್ರತ್ಯಕ್ಷ ಪ್ರತಿಬಿಂಬವನ್ನು ಎಲ್ಲಿಯಾದರೂ ಯಾರಾದರೂ ನೋಡಬೇಕೆಂದಿದ್ದರೆ ಅದು ಗಾಂಧೀಜಿಯವರ ಜೀವನದಲ್ಲಿಯೇ. ಅವರು ಅದಕ್ಕೆ ದೃಷ್ಟಾಂತಸ್ವರೂಪರು.

ಸತ್ಯ ಎಂಬ ಶಬ್ದವು ವೇದಕಾಲದಿಂದ ವಿವಿಧಾರ್ಥಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಆದರೆ ಸಾಮಾನ್ಯವಾಗಿ, ಯಾವಾಗಲೂ ಇರುವ ವಸ್ತು, ಇದ್ದುದನ್ನು ಇದ್ದಕ್ಕಿದ್ದ ಹಾಗೆ ಶಬ್ದರೂಪದಿಂದ ಹೇಳುವಿಕೆ ಇತ್ಯಾದಿಗಳು ಈ ಸಂದರ್ಭದಲ್ಲಿ ಆಶಬ್ದದ ಮುಖ್ಯಾರ್ಥಗಳು. ಸತ್ಯದಂತೆ ಯಾವುದು ಇರುವುದೋ ಅದು ವೈದಿಕ ಪರಿಭಾಷೆಯಲ್ಲಿ 'ಋತ' ಎನಿಸುವುದು. ಸತ್ಯಾನುರೂಪಕರ್ಮವು, ಆಚರಣೆಯು ಋತ ಎನಿಸುವುದು. ಆದುದರಿಂದ 'ಸತ್ಯಂ ಚ ಋತಂ ಚ' ಎಂಬ ಎರಡು ಶಬ್ದಗಳ ಉಪಯೋಗವು ವೇದದಲ್ಲಿ ಅಲ್ಲಲ್ಲಿ ಕಂಡುಬರುವುದು. ಯಾವುದು

ಸತ್ಯಕ್ಕೆ ಅನುಸರಿಸಿಲ್ಲವೋ ಅದು ಅನೃತ (ನ+ಋತ). 'ಸತ್ಯಮೇವ ಜಯತೇ ನಾನೃತಮ್' – ಸತ್ಯವೇ ಜಯಿಸುವುದು, ಅನೃತ (ಸತ್ಯದಂತೆ, ಸತ್ಯಾನುಸಾರವಾಗಿ ಇಲ್ಲದಿದ್ದುದು) ಜಯಿಸಲಾರದು ಎಂದು ಸಾರುವಾಗ ಋಷಿಗಳು ಸತ್ಯ ಮತ್ತು ಋತ ಇವೆರಡನ್ನು ಹೊಂದಿಸಿ, ಅವುಗಳ ಸಂಬಂಧವನ್ನು ಜೋಡಿಸಿ ಹೇಳಿ ತಮ್ಮ ಅರ್ಥವನ್ನ ಸ್ಪಷ್ಟಗೊಳಿಸಿದ್ದಾರೆ. 'ಸತ್ಯಾತ್ ನಾಸ್ತಿ ಪರೋ ಧರ್ಮಃ' ಎಂದು ಹೇಳುವಲ್ಲಿಯೂ ಇದೇ ಅರ್ಥವು ಅಭಿಪ್ರೇತ ಇರುವುದು.

ಸತ್ಯವನ್ನು ಕಂಡು ಸತ್ಯದಂತೆ ಆಚರಿಸುವುದು ಬಹಳ ಸುಲಭ ಎಂದು ಯಾರಾದರೂ ತಿಳಿದಿದ್ದರೆ ಅದು ದೊಡ್ಡ ತಪ್ಪುತಿಳುವಳಿಕೆಯೆಂದೇ ಹೇಳಬೇಕಾಗುವುದು. ಸತ್ಯವನ್ನು ಕಾಣುವುದು ಮೊದಲು ಕಠಿಣ, ಆಮೇಲೆ ಅದರಂತೆ ವರ್ತಿಸುವುದು ಅದಕ್ಕೂ ನೂರರಷ್ಟು ಕಠಿಣ. ಆದುದರಿಂದಲೇ, ನಾನು ಸತ್ಯದ ಒಬ್ಬ ನಮ್ರ ಶೋಧಕ, ಸೇವಕ, ಪೂಜಾರಿ; ತನ್ನನ್ನು ಧೂಳಿಯ ಒಂದು ಅಣುರೇಣುವಿಗಿಂತ ಕಡೆಯೆಂದು ಭಾವಿಸಿ ಸತ್ಯದ ಶೋಧವನ್ನು ನಡೆಸಬೇಕು ಎಂದು ಗಾಂಧೀಜಿಯವರು ಹೇಳಿರುವರು. ಸತ್ಯದ ರೂಪ ಅಷ್ಟು ಅತಿ ಸೂಕ್ಷ್ಮ, ತಿಳಿಯಲು ಅಷ್ಟು ಕಠಿಣ. ಯಾಕೆಂದರೆ, ಒಬ್ಬನು ಈ ಹೊತ್ತು ಸತ್ಯವೆಂದು ತಿಳಿದುಕೊಂಡದ್ದು ಮರುಕ್ಷಣಕ್ಕೆ ಅಥವಾ ನಾಳೆ ಅಥವಾ ಕಾಲಾಂತರದಿಂದ ಅವನಿಗೆ ಬೇರೆ ಕಾಣಬಹುದು; ಅದು ಅಸತ್ಯವೆಂದು ಅನುಭವ ಬರಬಹುದು. ಆದುದರಿಂದಲೇ, ಆಯಾ ಕಾಲಕ್ಕೆ ವಿಮರ್ಶಿಸಿ, ಸರ್ವತೋಪರಿ ಪರೀಕ್ಷಿಸಿದ ಬಳಿಕ ಅದನ್ನು ಸತ್ಯವೆಂದು ಭಾವಿಸಿ ನಡೆಯಬೇಕು; ಹೀಗೆ ಮಾಡುವುದೇ ಸತ್ಯವ್ರತ. ಅಲ್ಪಶಕ್ತಿಯ ಮಾನವ ಮಾತ್ರಕ್ಕೆ ಇಷ್ಟೇ ಸಾಧ್ಯ ಎಂದು ಗಾಂಧೀಜಿ ಹೇಳಿರುವರು.

ಇದೇ ಸತ್ಯ, ಇದೊಂದೇ ಸತ್ಯ, ಇದಲ್ಲದ್ದೆಲ್ಲ ಅಸತ್ಯ; ಎಲ್ಲರೂ ಇದನ್ನೇ ಸತ್ಯವೆಂದು ಮನ್ನಿಸಲಿಕ್ಕೆ ಬೇಕು ಎಂದು ಹಟಹಿಡಿಯುವುದಾಗಲಿ, ಅಸತ್ಯವನ್ನು ಬಲಾತ್ಕಾರದಿಂದ ಇತರರ ಮೇಲೆ ಹೇರುವುದಾಗಲಿ ಅವರಿಗೆ ಇಷ್ಟವಿರಲಿಲ್ಲ. ಇದು ನನ್ನ ಮಟ್ಟಿಗೆ ಈಗ ಸತ್ಯ, ಇದರಂತೆ ಇತರರಿಗೆ ಹೇಳುವುದು ನನ್ನ ಕರ್ತವ್ಯ, ಈ ಸತ್ಯಕ್ಕೆ ಅನುಸಾರವಾಗಿ ಈಗ ನಾನು ನಡೆಯುವುದು ಅವಶ್ಯ ಎಂಬ ವೃತ್ತಿಯಿಂದಲೇ ಅವರು ಸಾಗುತ್ತಿದ್ದರು. ಅವರು ಈ ವಿಷಯದಲ್ಲಿ ಅಹಿಂಸಾ ವ್ರತವನ್ನು ಕೈಗೊಂಡಿದ್ದಕ್ಕೆ, ಸತ್ಯವನ್ನು ಕುರಿತು ಇದ್ದ ಅವರ ಈ ನಮ್ರ ವೃತ್ತಿಯೇ ಕಾರಣ.

ಸತ್ಯದತ್ತ ಸೂಕ್ಷ್ಮವಾಗಿ ನೋಡಿದರೆ ಸತ್ಯದ ಬಗ್ಗೆ ಇದ್ದ ಅವರ ವೃತ್ತಿಯ ರಹಸ್ಯ ಗೊತ್ತಾಗುವುದು. ಇದ್ದ ವಸ್ತುವನ್ನು ಇದ್ದಕ್ಕಿದ್ದ ಹಾಗೆ ನೋಡುವುದು, ಕಾಣುವುದು, ಹೇಳುವುದು ಇದರ ಅರ್ಥವೇನು? ಅಲ್ಪಶಕ್ತಿ ಮಾನವನು ಇದನ್ನು ಪರಿಪೂರ್ಣವಾಗಿ ಮಡಬಲ್ಲನೋ? ಅಹಂಭಾವ, ಸ್ವಾರ್ಥ ಇತ್ಯಾದಿ ಭಾವನೆಗಳಿಂದ ಕೂಡಿದವನು, ತೀರ ಮರ್ಯಾದಿತ ಶಕ್ತಿಯುಳ್ಳವನು ಇದನ್ನು ಎಷ್ಟರಮಟ್ಟಿಗೆ ಮಾಡಬಲ್ಲನು? ಮೇಲಾಗಿ ಒಂದೇ ಸತ್ಯ ಒಬ್ಬ ಮಾನವನ ಮಟ್ಟಿಗೆ ಸಪ್ತರೂಪವಾಗಿ, ಏಳುಮುಖವಾಗಿ ಕಾಣಬಲ್ಲದು. ಉದಾಹರಣಾರ್ಥವಾಗಿ ಚಂದ್ರದರ್ಶನವನ್ನು ಇಟ್ಟುಕೊಳ್ಳುವ. ಒಂದು ಚಂದ್ರ ಬಿಂಬ ಯಾವುದೊಂದು ವರುಷ ಭಾರತ ಹುಣ್ಣಿಮೆಯ ದಿನ ಒಬ್ಬನಿಗೆ ಕಂಡಿತೆಂದು ತಿಳಿಯುವ. ಕಣ್ಣಿನಿಂದ ಹಾಗೂ ಪಂಚೇಂದ್ರಿಯಗಳಿಂದ ಅವನಿಗೆ ಆ

ದಿನ, ಆ ಕ್ಷಣ ಆದ ಚಂದ್ರದರ್ಶನ ಹಾಗೂ ಚಂದ್ರನ ನಾಮರೂಪ ಗುಣಕರ್ಮ ಪರಿಣಾಮ, ಇವುಗಳ ಅನುಭವ ಇವು ಚಂದ್ರನೆಂಬ ಸತ್ಯವಸ್ತುವಿನ ಒಂದು ರೂಪ. ಇದನ್ನೆಲ್ಲಾ ಅವನು ಸ್ಮೃತಿಪಟಲದಲ್ಲಿ ಫೋಟೋದಂತೆ ಸಂಗ್ರಹಿಸಿಡುವುದು ಆ ಸತ್ಯದ ಎರಡನೇ ರೂಪ. ಅದನ್ನೇ ಅವನು ನೆನಪಿಗೆ ತರುವಾಗ ಅದೆಲ್ಲ ಯಾವ ರೂಪವನ್ನು ಪಡೆಯುವುದೋ ಅದು ಅದರ ಮೂರನೆಯ ರೂಪ. ಯಾವ ಸಂದರ್ಭದಲ್ಲಿ ಅವನು ಮೊದಲು ಆ 'ಚಂದ್ರ' ಎಂಬ ಸತ್ಯವನ್ನು ಕಂಡಿರುವನೋ ಆ ಸಂದರ್ಭವಲ್ಲದ ಇನ್ನೊಂದು ಸಂದರ್ಭದಲ್ಲಿ ಅದನ್ನು ನೆನಪಿಗೆ ತರುತ್ತಿರುವುದರಿಂದ ಅದು ಆ ಸತ್ಯದ ಚತುರ್ಥರೂಪ. ಅದೇ ಚಂದ್ರನನ್ನು ಕನಸಿನಲ್ಲಿ ಕಾಣುವುದಾದರೆ ಅದು ಆ ಸತ್ಯದ ಪಂಚಮರೂಪ. ಅವನ ಸ್ಮರಣಪಟಲದಾಚೆ ತಳ-ಚಿತ್ತ (ಸಬ್-ಕಾನ್‌ಷಸ್)ದಲ್ಲಿ ಸಂಗ್ರಹಿತವಾಗುವ ಆ ಚಂದ್ರನ ರೂಪ ಅದು ಆರನೆಯ ರೂಪ. ಈ ತನ್ನ ಅನುಭವ ಎರಡನೆಯವರಿಗೆ ಹೇಳುವಾಗ ಅದಕ್ಕೆ ಕೊಡತಕ್ಕ ಶಬ್ದ ರೂಪ(ಅನುಭವವನ್ನು ಶಬ್ದರೂಪದಲ್ಲಿ ಇದ್ದಕ್ಕಿದ್ದ ಹಾಗೇ ಹೇಳುವುದು ಅಸಾಧ್ಯ). ಇದು ಸತ್ಯದ ಏಳನೆಯ ರೂಪ!

ಹೀಗೆ ಒಂದೇ ಸತ್ಯವು ಮಾನವನ ಅತ್ಯಂತ ಪರಿಮಿತ ಹಾಗೂ ಅಲ್ಪಶಕ್ತಿಯ ಮೂಲಕ ಸಪ್ತಮುಖವಾಗಿ ಸಪ್ತರೂಪದಿಂದ ಪ್ರತೀತವಾಗುವುದು. ಮೇಲಾಗಿ ಚಿತ್ತ, ವಿಶ್ವ, ನಮಗಾಗುವ ಅನುಭವ ಇವು ಜಡವಸ್ತುಗಳಂತೆ ಅಥವಾ ನಿರ್ಜೀವ ವಸ್ತುಗಳಂತೆ ಸ್ಥಿರವಿಲ್ಲ; ಇವೆಲ್ಲ ಗತಿಶೀಲವಿರುವುವು, ಕ್ಷಣ ಕ್ಷಣವೂ ಅವುಗಳಲ್ಲಿ ಹೆಚ್ಚು ಕಡಿಮೆಗಳಾಗುವುವು. ಹೀಗಿರುವುದರಿಂದಲೇ ಗಾಂಧೀಜಿಯವರು, ಸತ್ಯವನ್ನು ನಾವು ನಮ್ರಾತಿನಮ್ರವಾಗಿ ಶೋಧಿಸಬೇಕು, ಎಂದು ಸಾರಿದರು; ಸತ್ಯದ ನಿಜದರ್ಶನವೇ ದೇವದರ್ಶನ, ಸತ್ಯವೇ ದೇವರು ಎಂದು ಘೋಷಿಸಿದರು.

ಸತ್ಯಕ್ಕೆ, ಸತ್ಯ ಧರ್ಮಕ್ಕೆ ಇದ್ದಂತೆಯೇ ಅಹಿಂಸೆಗೆ, ಅಹಿಂಸಾ ವ್ರತಕ್ಕೆ ಪೂರ್ವ ಪರಂಪರೆ ಇದೆ. ಅದು ಸನಾತನ ಧರ್ಮದ ಅವಿಭಾಜ್ಯ ಅಂಗವಿದೆ. 'ಅಹಿಂಸನ್ ಸರ್ವತೀರ್ಥೇಭ್ಯಃ' ಎಂದು ಸಾರಿದ ಉಪನಿಷತ್ತುಗಳು ಅಹಿಂಸಾ ಧರ್ಮದ ಮೇಲ್ಮೆಯನ್ನು ಸಾರಲಾರಂಭಿಸಿದವು ಎಂದು ಹೇಳಬಹುದು. ಬಳಿಕ ಮಹಾವೀರನಿಗಿಂತ ಪೂರ್ವದಲ್ಲಿ ಸುಮಾರು ಇನ್ನೂರೈವತ್ತು ವರ್ಷಗಳಾಚೆ ಅಂದರೆ ಕ್ರಿಸ್ತಪೂರ್ವ ಒಂಭತ್ತನೆಯ ಶತಮಾನದಲ್ಲಿ ಪಾರ್ಶ್ವನಾಥನು ಅಹಿಂಸಾವ್ರತಕ್ಕೆ ತನ್ನ ಚತುರ್ಯಾಮ (ನಾಲ್ಕು ಸಂಯಮಗಳುಳ್ಳ) ಧರ್ಮದಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟನು. ಮಹಾವೀರನು ಅಹಿಂಸೆಗೆ ಎಲ್ಲದಕ್ಕೂ ಪ್ರಥಮ ಸ್ಥಾನವನ್ನು ಕೊಟ್ಟುದ್ದಲ್ಲದೆ 'ಅಹಿಂಸಾ ಪರಮೋಧರ್ಮಃ' ಎಂದು ಸಾರಿದನು. ಮುಂದೆ ಬುದ್ಧ, ಅಶೋಕ, ಕ್ರೈಸ್ತ, ಇವರೆಲ್ಲರೂ ಅಹಿಂಸೆಗೆ ಬಹಳ ದೊಡ್ಡ ಸ್ಥಾನವನ್ನು ಕೊಟ್ಟು ಮಾನವಕುಲವು ಅಹಿಂಸಾ ಧರ್ಮದ ಆಧಾರದ ಮೇಲೆಯೇ ಬೆಳೆಯಬಲ್ಲದು ಎಂಬುದನ್ನು ಉದ್ಘೋಷಿಸಿದರು.

ಶತ್ರುತ್ವಗಳನ್ನು ಕುರಿತು ಕೂಡ ಅಹಿಂಸಾ ಧರ್ಮವೊಂದೇ ಪರಿಪಾಲಿಸ ಬೇಕೆಂದವರಲ್ಲಿ ಗಾಂಧೀಜಿಯವರು ಎಲ್ಲಕ್ಕೂ ಹಿರಿದಾದವರು ಎಂದು ಹೇಳಲು ಅಡ್ಡಿಯಿಲ್ಲ. ಅಹಿಂಸೆಯು ಕೇವಲ ಸನ್ಯಾಸಿಗಳ ಧರ್ಮವಲ್ಲ; ಕೇವಲ

ವೈಯಕ್ತಿಕ ಮೋಕ್ಷದ ಮಾರ್ಗವಲ್ಲ; ಬರೀ ಬಿಡಿ ವ್ಯಕ್ತಿಗಳಷ್ಟೇ ಆಚರಿಸತಕ್ಕ ವ್ರತವಲ್ಲ; ಅಹಿಂಸೆ ಇದು ಒಂದು ವೃತ್ತಿ, ಒಂದು ಭಾವ, ಕಾಯೇನ ವಾಚಾ ಮನಸಾ ಯಾರನ್ನೂ ಎಂದಿಗೂ ನೋಯಿಸದೆ ಬೇಯಿಸದೆ ಸದಾ ಕಾಲವೂ ಪ್ರೇಮಭರಿತರಾಗಿ, ಸರ್ವರಿಗೂ ಶುಭವನ್ನಿಚ್ಛಿಸುತ್ತ, ಸರ್ವರ ಸೇವೆಯಲ್ಲಿ ಸದಾ ನಿರತರಾಗಿರುವುದೇ ಅಹಿಂಸಾ ಧರ್ಮ ಎಂದು ಗಾಂಧೀಜಿಯವರು ಪದೇ ಪದೇ ಹೇಳಿದ್ದಾರೆ. ಅಲ್ಲದೆ ವ್ಯಕ್ತಿ, ಸಮಾಜ, ದೇಶ, ರಾಷ್ಟ್ರ- ಇವರಲ್ಲಿ ಇರುವ ಹಾಗೂ ಉಂಟಾಗುವ ದ್ವೇಷ ಅಸೂಯೆಗಳನ್ನು ಆ ಮೂಲಕ ಉದ್ಭವಿಸುವ ಅನ್ಯಾಯ ವ್ಯಸನಗಳನ್ನು ಯಾವ ರೀತಿ ಪರಿಹರಿಸಬೇಕು ಎಂಬ ಬಗ್ಗೆ ಒಂದು ಹೊಸ ಶಾಸ್ತ್ರವನ್ನೇ ಅವರು ನಿರ್ಮಿಸಿದ್ದಾರೆ. ಆ ಶಾಸ್ತ್ರಕ್ಕೇ, ಆ ರೀತಿನೀತಿಗಳಿಗೇ, ಆ ಧರ್ಮಕ್ಕೇ ಅವರು 'ಸತ್ಯಾಗ್ರಹ' ಎಂಬ ಹೆಸರನ್ನು ಇಟ್ಟರು. ಅದು ಒಂದು ಧರ್ಮವೂ ಸೈ; ಒಂದು ಮಾರ್ಗವೂ ಸೈ; ಒಂದು ಶಾಸ್ತ್ರವೂ ಹೌದು; ಅನ್ಯಾಯಾದಿಗಳನ್ನು ಹೋಗಲಾಡಿಸಲು ಒಂದು ಪರಿಹಾರವು ಸಹ; ದುಷ್ಟರಿಂದ ಮತ್ತು ಪಾತಕಿಗಳಿಂದ ಸುರಕ್ಷಿತವಾಗಿರುವ ರಕ್ಷಾಕವಚವೂ ನಿಜ; ದ್ವೇಷಾದಿಗಳೊಡನೆ ಹೋರಾಡುವ ಆಯುಧವೂ ಸೈ; ಸತ್ಯಾಗ್ರಹದಲ್ಲಿ ಸಾಧ್ಯ-ಸಾಧನಗಳ ಏಕರಸತೆ ಇದೆ; ಧರ್ಮ-ಮೋಕ್ಷಗಳ ಸಮನ್ವಯವಿದೆ.

ಒಂದು ರೀತಿ ನೋಡಿದರೆ, ಸನಾತನ ಧರ್ಮದ ಬೀಜಮಂತ್ರವಾದ 'ಸತ್ಯಾನ್ನಾಸ್ತಿ ಪರೋ ಧರ್ಮಃ' ಹಾಗೂ ಸನಾತನ ಧರ್ಮದ ಬಲವಾದ ಅಂಗವಾದ ಜೈನ ಸಂಪ್ರದಾಯದ ಬೀಜ ಮಂತ್ರವಾದ 'ಅಹಿಂಸಾ ಪರಮೋಧರ್ಮಃ' ಇವುಗಳ ಸಮನ್ವಯವು 'ಸತ್ಯಾಗ್ರಹ' ಧರ್ಮದಲ್ಲಿ ಸ್ಪಷ್ಟವಾಗಿ ಗೋಚರವಾಗುವುದು. ಈ ಸಮನ್ವಯದ ಶ್ರೇಯಸ್ಸು ಗಾಂಧೀಜಿ ಅವರಿಗೆ ಸೇರುವುದು.

ಗಾಂಧೀ ಪ್ರಣೀತ ಸತ್ಯ-ಅಹಿಂಸೆಗಳ ಅಭ್ಯಾಸವು ನಮ್ಮನ್ನು ಎಲ್ಲಿಯವರೆಗೆ ಒಯ್ಯಬಲ್ಲದು, ಒಯ್ಯಬಹುದು ಎಂಬುದನ್ನು ಮೇಲೆ ಕಾಣಿಸಲಾಗಿದೆ. ಗಾಂಧೀಜಿಯವರು ಆ ತತ್ವಗಳನ್ನು ಅಕಸ್ಮಾತ್ತಾಗಿ ಹುಟ್ಟಿಸಿಲ್ಲ ಅಥವಾ ಚೇಷ್ಟೆಗಾಗಿ ನಮ್ಮೆದುರು ಇಟ್ಟಿಲ್ಲ. ಅವು ಭಾರತೀಯ ಸಂಸ್ಕೃತಿಯ ಹಾಗೂ ಸನಾತನ ಧರ್ಮದ ಮಹಾಪ್ರವಾಹದ ಗುಂಟ ಹರಿಯುತ್ತ ಬಂದಿವೆ. ಆ ಸಂದರ್ಭದಲ್ಲಿ ಅವುಗಳ ರಹಸ್ಯ, ಬಲಾಬಲ ತಿಳಿಯಬಲ್ಲದು; ಅವುಗಳ ಪೂರ್ಣ ಅರ್ಥ ತಿಳಿದು ನಮಗೆ ಚೆನ್ನಾಗಿ ಉಪಯುಕ್ತವಾಗುವುವು.

ಇದಲ್ಲದೆ, ಮಾನವ ಕುಲದ ಸಭ್ಯತೆಯ ಪರಂಪರೆಯಲ್ಲಿಯೂ ಆ ಸತ್ಯ-ಅಹಿಂಸಾತತ್ವಗಳ ಅಭ್ಯಾಸ ಅಗತ್ಯ. ಮೇಲ್ತೋರಿಕೆಗೆ ಹಿಂಸೆ, ಅಸತ್ಯ, ಯುದ್ಧಗಳು, ದ್ವೇಷ ನಮ್ಮ ಇತಿಹಾಸದಲ್ಲಿ ಬೇಕಾದಷ್ಟು ಎದ್ದು ಕಾಣಿಸಿದರೂ ನಮ್ಮ ಸಾಂಸ್ಕೃತಿಕ ಬೆಳವಣಿಗೆ, ಸಭ್ಯತೆಯ ಪ್ರಗತಿ ಅವುಗಳಿಂದಾಗದೆ ಸತ್ಯ-ಅಹಿಂಸೆಗಳ ಮೂಲಕವೇ ಆಗಿದೆ ಎಂಬುದು ಸಿದ್ಧ. ಕಾಡುಸ್ಥಿತಿಯಿಂದ ಎದ್ದು ಮುಂದರಿದು ಮಾನವನು ಈಗ ವಿಶ್ವಕುಟುಂಬದ ಧ್ಯೇಯವನ್ನು ಸಾಧಿಸಬೇಕು ಎನ್ನುತ್ತಿರುವನು. ಈ ಸಂದರ್ಭದಲ್ಲಿಯೂ ಗಾಂಧೀಜಿಯವರು ಪುರಸ್ಕರಿಸಿದ ಸತ್ಯ-ಅಹಿಂಸಾ ಮಾರ್ಗದ ಅಭ್ಯಾಸ-ಆಚರಣೆ ಇವು ಮಹತ್ವ ಎನಿಸದೆ ಇರಲಾರವು.

* * *

ಪ್ರಜಾಪ್ರಭುತ್ವದ ಪರಿಭಾಷೆಯ ಒಂದು ಹುಡುಕಾಟ

– ಸಿ.ಡಗ್ಲಾಸ್ ಲಮ್ಮಿಸ್ : ಕನ್ನಡಕ್ಕೆ – ಅಕ್ಷರ.ಕೆ.ವಿ

ಪ್ರಜಾಪ್ರಭುತ್ವ– ಡೆಮಾಕ್ರಸಿ– ಎಂಬ ಶಬ್ದದ ವಿಚಾರದಲ್ಲಿ ಹೇಳುವುದಾದರೆ, ಆ ಶಬ್ದಕ್ಕೆ ಸರ್ವಸಮ್ಮತವಾದೊಂದು ವ್ಯಾಖ್ಯೆಯು ಇಲ್ಲ ಮಾತ್ರವಲ್ಲ, ಅಂಥದೊಂದು ವ್ಯಾಖ್ಯೆಯನ್ನು ರೂಪಿಸುವುದಕ್ಕೂ ಎಲ್ಲ ದಿಕ್ಕುಗಳಿಂದ ಪ್ರತಿರೋಧ ಎದುರಾಗುತ್ತದೆ. ಯಾವುದಾದರೊಂದು ದೇಶವನ್ನು ನಾವು ಪ್ರಜಾಸತ್ತಾತ್ಮಕವೆಂದು ಕರೆದರೆ ಆ ದೇಶವನ್ನು ನಾವು ಹೊಗಳುತ್ತಿದ್ದೇವೆ ಎಂಬುದೇನೋ ಸಾರ್ವತ್ರಿಕವಾಗಿ ಭಾವಿತವಾಗುತ್ತದೆ. ಆದಕಾರಣ– ಎಲ್ಲ ರೀತಿಯ ಪ್ರಭುತ್ವಗಳ ಬೆಂಬಲಿಗರೂ ತಮ್ಮನ್ನು ಪ್ರಜಾಸತ್ತೆಯೆಂಬ ಹೆಸರಿನಿಂದಲೇ ಕರೆದುಕೊಳಲು ಬಯಸುತ್ತಾರೆ, ಮತ್ತು ಆ ಶಬ್ದವು ಒಂದೇ ನಿರ್ದಿಷ್ಟ ಅರ್ಥಕ್ಕೆ ಬಂಧಿತವಾಗಿಬಿಟ್ಟರೆ, ತಾವು ಆ ಪದವನ್ನು ಬಳಸುವುದನ್ನೇ ಬಿಡಬೇಕಾದೀತೆಂದು ಅವರೆಲ್ಲ ಹೆದರುತ್ತಾರೆ.

ಮೇಲಿನ ಮಾತುಗಳನ್ನು ಹೇಳಿದವ –ಜಾರ್ಜ್ ಆರ್ವೆಲ್; ಈ ಮಾತುಗಳನ್ನಾತ ಶೀತಲ ಸಮರವೆಂದು ನಾವು ಕರೆಯುವ ಕಾಲ ಆರಂಭವಾಗುವುದಕ್ಕೆ ಮೊದಲೇ ಹೇಳಿದ್ದ. ಇವತ್ತು, ಆ ಶೀತಲ ಸಮರದ ಯುಗ ಮುಕ್ತಾಯವಾಗಿದ್ದರೂ, ಆತನ ಈ ಮಾತುಗಳು ಸತ್ಯವಾಗಿಯೇ ಉಳಿದಿವೆ. ಆತ ಹೇಳುವಂತೆ, ಪ್ರಜಾಪ್ರಭುತ್ವವೆಂಬ ಈ ಶಬ್ದವು ಅದರ ಶತ್ರುಗಳಲ್ಲಿ ಭಯಹುಟ್ಟಿಸುವುದು ಸಹಜವೇ ಸರಿ. ಆದರೆ, ಅದರ ಮಿತ್ರವರ್ಗದಲ್ಲೂ ಕೂಡಾ ಅದು ಭಯಕ್ಕೆ ಕಾರಣವಾಗಿದೆಯೆಂಬುದು ಆರ್ವೆಲ್ಲನ ಮಾತುಗಳು ಸೂಚಿಸುವ ವಿಶಿಷ್ಟ ಒಳನೋಟ. ಈ ಶಬ್ದಕ್ಕೇನಾದರೂ ಸ್ಪಷ್ಟವಾದ ವ್ಯಾಖ್ಯಾನವನ್ನು ಕೊಟ್ಟುಕೊಂಡ ಪಕ್ಷದಲ್ಲಿ , ಸ್ವತಃ ತಮ್ಮನ್ನು ಪ್ರಜಾಪ್ರಭುತ್ವವಾದಿಗಳೆಂದು ಕರೆದುಕೊಳ್ಳುತ್ತಿರುವ ಹೆಚ್ಚಿನಪಾಲು ಜನರೇ ತಮ್ಮ ನಡೆಯಲ್ಲಿ ಪ್ರಜಾಸತ್ತೆಯ ವ್ಯಾಖ್ಯೆಗೆ ಅನುಗುಣವಾಗಿಲ್ಲವೆಂಬುದು ಜಾಹೀರಾಗುತ್ತದೆ; ಆದ್ದರಿಂದ ಆಗ ಅವರು ಇಲ್ಲವೆ ಆ ಶಬ್ದದ ಬಳಕೆಯನ್ನೇ ಕೈಬಿಡಬೇಕಾಗುತ್ತದೆ, ಅಥವಾ ತಮ್ಮ ದಾರಿಯನ್ನೇ ತಾವು ಬದಲಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದಲೇ ಪ್ರಜಾಪ್ರಭುತ್ವವನ್ನು ಕುರಿತು ಬರೆಯುವ ಇವತ್ತಿನ ಬಹುತೇಕ ಸಿದ್ಧಾಂತಕಾರರು ಆ ಶಬ್ದದ ಅರ್ಥವನ್ನು ಮರೆಮಾಚುತ್ತಾರೆ; ಆ ಅರ್ಥವನ್ನು ಹೇಳದ ಭಾರೀ ಭಾರೀ ಪದಗಳ ರಾಶಿಯ ಅಡಿಯಲ್ಲಿ ಅದನ್ನು ಹೂತುಬಿಡುತ್ತಾರೆ.

ರಾಜಕೀಯ ಸಿದ್ಧಾಂತಗಳಲ್ಲಿ ಕೂಡಾ ಪ್ರಜಾಪ್ರಭುತ್ವವೆಂಬುದು ಹೆಚ್ಚಾಗಿ ವರ್ಜ್ಯವಾದ ಒಂದು ಪರಿಕಲ್ಪನೆಯಾಗಿಯೇ ಕಾಣಿಸಿಕೊಂಡಿದೆ. ಈ ಮಾತು ಆಶ್ಚರ್ಯ ಹುಟ್ಟಿಸೀತು, ಕಾರಣ, ಈ ವಿಚಾರವನ್ನು ಕುರಿತು ಚರ್ಚಿಸುತ್ತಿರುವುದಾಗಿ ಹೇಳಿಕೊಳ್ಳುವ ಪುಸ್ತಕಗಳ ರಾಶಿ ಹಲವು ಗ್ರಂಥಭಂಡಾರಗಳನ್ನು ತುಂಬುವಷ್ಟಿದೆ.

ಉದಾಹರಣೆಗೆ, ಈ ಒಂದು ಸಂಗತಿಯನ್ನು ಗಮನಿಸಿ– ರಜಕೀಯ ಸಿದ್ಧಾಂತ ಕುರಿತ ಶಾಸ್ತ್ರೀಯ ಯುಗದ ಸಾಹಿತ್ಯದಲ್ಲಿ ಎಲ್ಲಿಯೂ ಈ ವಿಚಾರಕ್ಕೆ ಸಬಂಧಿಸಿದ ಒಂದೇ ಒಂದು ಪುಸ್ತಕವಿಲ್ಲ. ಪ್ಲೇಟೋ ಈ ಪರಿಕಲ್ಪನೆಯನ್ನು ಹಾಸ್ಯ ಮಾಡಲಿಕ್ಕಾಗಿ ಬಳಸಿದ, ಅರಿಸ್ಟಾಟಲ್ ತನ್ನ ಸಂವಿಧಾನಗಳ ವರ್ಗೀಕರಣದಲ್ಲಿ ಇದನ್ನು ನೀಚವರ್ಗಕ್ಕೆ ಸೇರುವಂಥದೆಂದು ಗುರುತಿಸಿದ. ಅಲ್ಲಿಂದ ಮುಂದೆ, ೧೯ನೆಯ ಶತಮಾನದ ತನಕವೂ ಈ ವಿಷಯ ಪ್ರಸ್ತಾಪವಾಗಿದ್ದೇ ಅಪರೂಪ. ಒಟ್ಟಿನಲ್ಲಿ ಅಂದಿನಿಂದಲೂ ಪ್ರಜಾಪ್ರಭುತ್ವವೆಂಬ ಪರಿಭಾಷೆಯೇನೋ ಇದೆ, ಆದರೆ ಅದು ಹೆಚ್ಚಾಗಿ ಒಂದು ಋಣಾತ್ಮಕವಾದ ಪರಿಕಲ್ಪನೆಯಾಗಿಯೇ ಕಾಣಿಸಿಕೊಂಡಿದೆ. ಅರ್ಥಾತ್ ಆಳುವುದಕ್ಕೆ ಯೋಗ್ಯವಾಗಬಲ್ಲದ್ದು ಎಂದು ಪ್ರಸ್ತಾಪವಾಗುವ ಹಲವಾರು ಆಡಳಿತ ಮಾದರಿಗಳ ಸಾಲಿನಲ್ಲಿ ಪ್ರಜಾಪ್ರಭುತ್ವವು ಯಾವತ್ತೂ ಮೌನವಾಗಿ ಅಡಗಿರುತ್ತದೆ; ಯಾವತ್ತೂ ಆಳಲಿಕ್ಕಾಗಿ ಆಯ್ಕೆಯಾಗದ ಒಂದು ಪ್ರಸ್ತಾಪ ಅದು, ಎನ್ನುವ ಹಾಗೆ. ಈ ಪರಿಕಲ್ಪನೆಯ ಅಸ್ತಿತ್ವವನ್ನು ಆವಿಷ್ಕರಿಸಲಿಕ್ಕೆ ನಾವು ಖಗೋಳ ಶಾಸ್ತ್ರದ ಒಂದು ಕ್ರಮವನ್ನೇ ಅನುಸರಿಸಬೇಕಾಗುತ್ತದೆ– ಉದಾಹರಣೆಗೆ, ಪ್ರಜಾಪ್ರಭುತ್ವವೆಂಬುದನ್ನು 'ಋಣಾತ್ಮಕ ಗುರುತ್ವಶಕ್ತಿ'ಯನ್ನು ಹೊಮ್ಮಿಸುತ್ತಿರುವ ಒಂದು ಕಾಯವೆಂದಿಟ್ಟುಕೊಳ್ಳಿ. ಆಗ, ಅದರಿಂದ ಪ್ರಭಾವಿತವಾಗಿ ಅದರ ಸುತ್ತ, ಅನ್ನು ತಪ್ಪಿಸಿಕೊಳ್ಳುತ್ತ ಸತ್ತಾಡುವ, ಬೃಹತ್ ಕಾಯಗಳ ಪರಿಭ್ರಮಣಮಾರ್ಗಗಳ ಸಮೀಕ್ಷೆಯ ಮೂಲಕವೇ ನಾವು ಪ್ರಜಾಪ್ರಭುತ್ವದ ಅಸ್ತಿತ್ವವನ್ನು ಊಹಿಸಿಕೊಳ್ಳಬೇಕು.

ಹಾಗಂತ, ಈ ಪದವನ್ನು ಹಿಡಿದು ಅದನ್ನು ನಿರ್ದಿಷ್ಟ ವ್ಯಾಖ್ಯೆಯೊಂದರಲ್ಲಿ 'ಕಟ್ಟುವುದು' ಕಷ್ಟದ ಕೆಲಸವೇನೂ ಅಲ್ಲ; ಆದರೆ ಅಂಥ ವ್ಯಾಖ್ಯೆಯ ಅರ್ಥವ್ಯಾಪ್ತಿಯನ್ನು ಗ್ರಹಿಸುವುದು ನಿಜವಾಗಿಯೂ ಕಷ್ಟವೇ ಸರಿ. ಡೆಮಾಕ್ರಸಿ ಎಂಬ ಶಬ್ದವು ಮೂಲತಃ ಎರಡು ಗ್ರೀಕ್ ಶಬ್ದಗಳಿಂದ ಬಂದಿದೆ– ಡೆಮೋ ಎಂದರೆ ಜನ, ಕ್ರೇಷಿಯಾ ಅಂದರೆ ಅಧಿಕಾರ. ಅರ್ಥಾತ್ ಜನಗಳೇ ಅಧಿಕಾರವನ್ನು ಹೊಂದಿರುವ ಸನ್ನಿವೇಶಗಳನ್ನು ಸೂಚಿಸುವುದಕ್ಕೆ ಬಳಕೆಯಾಗಬೇಕಾದ ಪದ ಇದು. ಆದರೆ, ಸೂಕ್ಷ್ಮವಾಗಿ ಗಮನಿಸಿದರೆ, ಈ ಪದಸಮಾಗಮವೇ 'ಬಿಸಿಯಾದ ಮಂಜುಗಡ್ಡೆ' ಎಂಬ ಶಬ್ದದ ಹಾಗೆ ಕಾಣಲಿಕ್ಕೆ ಸಾಧ್ಯವಿದೆ– ಯಾಕೆಂದರೆ, 'ಬಿಸಿಯಾದ ಮಂಜುಗಡ್ಡೆ' ಎಂಬ ಪದವೇನೋ ಇರಲಿಕ್ಕೆ ಸಾಧ್ಯವಿದೆ, ಅಲ್ಲಿ ಅರ್ಥಸಂದಿಗ್ಧವೇನೂ ಇಲ್ಲ; ಆದರೆ , ಅಥದೊಂದು ಸ್ಥಿತಿಯು ಸಂಭವಿಸಲಿಕ್ಕೆ ಹೇಗೆ ಸಾಧ್ಯ ಎಂಬುದು ಅಸ್ಪಷ್ಟವಾಗಿ ಉಳಿಯುತ್ತದೆ. ಕಾರಣ, ಬಿಸಿ ಮತ್ತು ಮಂಜುಗಡ್ಡೆಯನ್ನು ಒಟ್ಟಿಗೇ ಕೂಡಿಸಿದರೆ ಒಂದು ಕರಗುತ್ತದೆ, ಇನ್ನೊಂದು ತಣಿಯುತ್ತದೆ– ಎರಡೂ ತಾವಿದ್ದುದಕ್ಕಿಂತ ಬೇರೆಯೇ ಆಗಿಬಿಡುತ್ತವೆ.

ಈ ವೈರುಧ್ಯದ ಹಿಂದಿರುವ ಸಮಸ್ಯೆ ಇದು– ಸಾಧಾರಣವಾಗಿ ನಾವು ಅಧಿಕಾರ ಎಂಬುದನ್ನು 'ಯಾವುದಾದರೂ ಒಂದರ ಮೇಲೆ ನಮಗಿರುವ ಅಧಿಕಾರ' ಎಂದೇ ಕಲ್ಪಿಸಿಕೊಳ್ಳುವುದರಿಂದ ಮತ್ತು ರಾಜಕೀಯ ಅಧಿಕಾರವೆಂಬುದು ಜನರ ಮೇಲಿರುವ ಅಧಿಕಾರವೆಂದು ಭಾವಿತವಾಗುವುದರಿಂದ, ಜನರೇ ಅಧಿಕಾರ ಹೊಂದಿರುವುದಾದರೂ ಹೇಗೆಂಬ ಸಮಸ್ಯೆ ಏಳುತ್ತದೆ. ಹಾಗಾದಾಗ, ಬಿಸಿಯಾದ ಮಂಜುಗಡ್ಡೆಯ ಹಾಗೆ, ಒಂದೇ ಅಧಿಕಾರವೇ ಕರಗಬೇಕು ಅಥವಾ ಜನರೆ

ತಣ್ಣಗಾಗಬೇಕಾಗುತ್ತದೆ. 'ಜನರೇ ಆಳುವವರಾದರೆ ಆಳಿಸಿಕೊಳ್ಳುವವರಾದರೂ ಯಾರು?' – ಎಂಬ ಜಾನ್ ಕಾಟನ್‌ನ ಪ್ರಸಿದ್ಧ ಪ್ರಶ್ನೆ ಇದೇ ವಿಷಯವನ್ನು ಎತ್ತುತ್ತದೆ. ಗ್ರೀಕ್ ಪ್ರಜಾಪ್ರಭುತ್ವವಾದಿಗಳಿಗೆ ಇದು ಒಂದು ಸಮಸ್ಯೆಯಾಗಲಿಲ್ಲ, ಕಾರಣ, ಅಲ್ಲಿ ಜನರೇ ಆಳುವವರಾಗಿದ್ದರೂ ಅವರಿಗೆ ಆಳಲಿಕ್ಕೆ ಹೆಂಗಸರೂ ಗುಲಾಮರೂ ಮತ್ತು ಯುದ್ಧದಲ್ಲಿ ಸೆರೆಯಾದವರೂ – ಇತ್ಯಾದಿ ಅನ್ಯ 'ಜನ'ಗಳಿರುತ್ತಿದ್ದರು.

ಇಂಥದೊಂದು ಆಯ್ಕೆ ಸಮಕಾಲೀನ ಪ್ರಜಾಪ್ರಭುತ್ವವಾದಿಗಳಿಗೆ ಲಭ್ಯವಿಲ್ಲ – ಕಡೆಯಪಕ್ಷ 'ಸೈದ್ಧಾಂತಿಕವಾಗಿಯಾದರೂ' ಅದು ಅಸಾಧ್ಯ. ಜನರಿಂದ ಆಳಿಸಿಕೊಳ್ಳಲಿಕ್ಕಾಗಿ 'ಜನರಲ್ಲದ' ಒಂದು ಜನವರ್ಗವನ್ನು ಸೃಷ್ಟಿಸಿಕೊಳ್ಳುವುದು ಈಗ ಪ್ರಜಾಪ್ರಭುತ್ವಪರವಾಗಿ ಕಾಣಲಾರದು. ಹಾಗಿದ್ದರೆ ಮಾಡುವುದೇನು? ಸಮಕಾಲೀನ ಪ್ರಜಾಪ್ರಭುತ್ವ ಸಿದ್ಧಾಂತದ ಪ್ರಧಾನ ಧಾರೆಗಳು 'ಈ ಸಮಸ್ಯೆಯನ್ನು ಪರಿಹರಿಸಲಿಕ್ಕೆ ಸಾಧ್ಯವಿಲ್ಲ' ಎಂದು ಹೇಳುವ ಮೂಲಕ ಪರಿಹರಿಸಿಕೊಳ್ಳುತ್ತವೆ. ಇವತ್ತಿನ ಪ್ರಜಾಪ್ರಭುತ್ವ ಸಿದ್ಧಾಂತದ ಒಂದು ಮಾದರಿ ಪಠ್ಯವು, ತನ್ನ ಮೊದಲ ಅಧ್ಯಾಯದ ಮೊದಲ ಸಾಲುಗಳಲ್ಲಿಯೇ – 'ಪ್ರತ್ಯಕ್ಷ ಪ್ರಜಾಪ್ರಭುತ್ವ' ಎಂಬುದು ಅಸಾಧ್ಯ ಎಂಬುದನ್ನು ಸ್ಪಷ್ಟಗೊಳಿಸಿಬಿಡುತ್ತದೆ (ಆಧುನಿಕ ರಾಷ್ಟ್ರಗಳು ತುಂಬ ದೊಡ್ಡದಾಗಿ ಬಿಟ್ಟಿವೆ, ಬದುಕು ತುಂಬ ಸಂಕೀರ್ಣವಾಗಿದೆ, ಜ್ಞಾನವೆಂಬುದು ತುಂಬ ಪರಿಣತವಾಗಿದೆ ಮತ್ತು ಜನರು ತುಂಬ ರಾಜಕೀಯ ವಿಮುಖರಾಗಿದ್ದಾರೆ – ಇತ್ಯಾದಿ ಇತ್ಯಾದಿ ಕಾರಣಗಳಿಂದಾಗಿ). ಆದ್ದರಿಂದಲೇ ನಾವಿವತ್ತು ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಆಳುವ ಕೆಲಸವನ್ನು ವರ್ಗಾಯಿಸಿದ್ದೇವೆ; ನಮ್ಮೆಲ್ಲರ ಸಮ್ಮತಿಯೊಂದಿಗೆ ಅವರಿಂದು ನಮ್ಮನ್ನು ಆಳುತ್ತಾರೆ. ಹೀಗೆ, ಪ್ರಜಾಪ್ರಭುತ್ವ ಸಿದ್ಧಾಂತವೆಂಬ ಪುಸ್ತಕವನ್ನು ತೆರೆಯುವುದಕ್ಕೆ ಮೊದಲೇ ಆ ಪುಸ್ತಕವು ಜನರೇ ಆಳುವ ಸಾಧ್ಯತೆಗೆ ಬಾಗಿಲನ್ನು ಮುಚ್ಚಿಬಿಡುತ್ತದೆ.

ಪ್ರಜಾಸತ್ತಾತ್ಮಕ ರಾಜಕಾರಣದ ಒಂದು ಸುಪ್ರಸಿದ್ಧ ಗಾಳ ಇದು, ತಾನು 'ಜನರಿಗೇ ಅಧಿಕಾರ ಕೊಡುವ' ಮಾರ್ಗವೆಂದು ಅದು ನಿಮ್ಮನ್ನು ನಂಬಿಸಿ ಸೆಳೆಯುತ್ತದೆ; ಆದರೆ ಅದನ್ನು ನಂಬಿ ಕಚ್ಚಿಕೊಳ್ಳುತ್ತಿದ್ದಂತೆ, ನಿಜವಾಗಿ ನಮಗೇನೂ ಅಧಿಕಾರ ಇಲ್ಲವೆಂಬುದೂ ಮತ್ತು, ಮತನೀಡಿ ಆರಿಸುವ ಮೂಲಕ, ಹಾಗೆ ಅಧಿಕಾರ ಪಡೆಯಲು ಬಯಸುವವರಿಗೆ ಸಹಾಯ ಮಾಡುವ ಅಧಿಕಾರ ಮಾತ್ರವೇ ನಮಗುಂಟೆಂಬುದೂ ನಮಗೆ ಗೊತ್ತಾಗುತ್ತಹೋಗುತ್ತದೆ. ಈ ಗಾಳದ ತಂತ್ರವು ಬಂಡವಾಳಶಾಹಿಯು ನಮಗೆ ಒಡ್ಡುವ ಮತ್ತೊಂದು ಪ್ರಸಿದ್ಧ ಗಾಳದ ಉಪಾಯಕ್ಕೆ ಸಂವಾದಿಯಾಗಿಯೇ ಇದೆ. ಅದೂ ಕೂಡ ತಾನು ಜನರನ್ನೆಲ್ಲ ಶ್ರೀಮಂತರನ್ನಾಗಿಸುವ ಒಂದು ಅರ್ಥವ್ಯವಸ್ಥೆಯೆಂದು ಹೇಳಿಕೊಳ್ಳುತ್ತದೆ; ಆಮೇಲೆ ನಮಗೆ ಗೊತ್ತಾಗುವುದೇನೆಂದರೆ, ಅದು ನಮ್ಮನ್ನು ಶ್ರೀಮಂತರಾಗಿಸುವುದಿಲ್ಲ, ಬದಲು, ಶ್ರೀಮಂತರಾಗಲಿಕ್ಕೆ ಬಯಸುವವರ ಉತ್ಪನ್ನಗಳನ್ನು ಕೊಳ್ಳುವ ಮೂಲಕ ನಾವು ಅವರಲ್ಲಿ ಕೆಲವರನ್ನಾಯ್ದು, ಅವರು ಸಿರಿವಂತರಾಗಲಿಕ್ಕೆ ಸಹಾಯ ಮಾಡಲು ನಮಗೆ ಅವಕಾಶ ಒದಗಿಸಿಕೊಡುತ್ತದೆ, ಅಷ್ಟೇ.

ಈ ದಿಸೆಯಲ್ಲಿ ನೋಡಿದಾಗ, ಪ್ರಜಾಪ್ರಭುತ್ವ ಸಿದ್ಧಾಂತವನ್ನು ಕುರಿತು ಇದೆಯೆಂದು ಮೊದಲು ಉಲ್ಲೇಖಿಸಿದ 'ಹಲವು ಗ್ರಂಥಭಂಡಾರಗಳನ್ನು ತುಂಬುವಷ್ಟು

ಪುಸ್ತಕಗಳು' ನಿಜವಾಗಿ ಪ್ರಜಾಪ್ರಭುತ್ವವನ್ನು ಕುರಿತಾಗಿ ಇರುವಂಥವಾಗಿರದೆ, ಜನಪ್ರತಿನಿಧಿಗಳ ಮೂಲಕ ಆಡಳಿತ ನಡೆಸುವ ಒಂದು ವಿಧಾನವನ್ನೂ ಮತ್ತ ಆ ಕುರಿತ ತತ್ವಗಳನ್ನೂ ಕುರಿತಂಥವಾಗಿವೆ. ವ್ಯಂಗ್ಯದ ವಿಚಾರವೆಂದರೆ, ಇಂಥ ಆಡಳಿತ ವಿಧಾನಕ್ಕೆ ಅಮೇರಿಕಾದ ಸಂವಿಧಾನವು ಒಂದು ಪ್ರಧಾನ ಮಾದರಿಯಾಗಿದೆಯಾದರೂ, ಸ್ವತಃ ಅಮೇರಿಕಾದ ಸಂವಿಧಾನದ ನಿರ್ಮಾತೃಗಳು ಅದನ್ನು ಪ್ರಜಾಸತ್ತಾತ್ಮಕವೆಂದಾಗಲೀ ಅಥವಾ ತಮ್ಮನ್ನು ತಾವು ಪ್ರಜಾಪ್ರಭುತ್ವವಾದಿಗಳೆಂದಾಗಲೀ ಕರೆದುಕೊಳ್ಳಲಿಲ್ಲವೆಂಬುದು ಗಮನಾರ್ಹ. ನಿಜವಾಗಿ, ಆ ಕಾಲದ ಪ್ರಜಾಪ್ರಭುತ್ವವಾದಿಗಳಿದ್ದದ್ದು ಅದಕ್ಕೆ ವಿರೋಧವಾಗಿದ್ದ ಬಣದಲ್ಲಿ. ಗಣರಾಜ್ಯವಿರೋಧಿಗಳು (ಆಂಟಿ ಫೆಡರಲಿಸ್ಟ್ಸ್) ಎಂಬ ಆ ಬಣವು ಅಮೇರಿಕನ್ ಸಂವಿಧಾನಕ್ಕೆ ವಿರೋಧಿಯಾಗಿತ್ತು. (ಕಾರಣ, ಆ ಸಂವಿಧಾನವು ರೂಪಿಸುವ ರಾಷ್ಟ್ರವು ತುಂಬ ದೊಡ್ಡದಾಗುತ್ತದೆ, ಅದರೊಳಗಿನ ಸಮಾಜವು ಅತಿ ಸಂಕೀರ್ಣವಾಗಿಬಿಡುತ್ತದೆ, ಹಾಗೂ ಅಲ್ಲಿ ಜ್ಞಾನವೆಂಬುದು ತುಂಬ ಪರಿಣತಿಯ ಕ್ಷೇತ್ರವಾಗಿ ಜನರು ರಾಜಕೀಯ ವಿಮುಖರಾಗುತ್ತಾರೆ, ಇತ್ಯಾದಿ ಇತ್ಯಾದಿ ಎಂಬುದು ಅವರ ನಿಲುವಾಗಿತ್ತು. ಈ ಕಾರಣಗಳಿಂದಾಗಿ, ಅಲ್ಲಿ ಪ್ರಜಾಪ್ರಭುತ್ವವು ಅಸಾಧ್ಯವಾಗುತ್ತದೆಯೆಂಬುದೂ ಅವರ ಕಲ್ಪನೆಯಾಗಿತ್ತು). ಅದಾಗಿ ಹಲವು ಕಾಲದ ಅನಂತರ, ಹತ್ತೊಂಭತ್ತನೇ ಶತಮಾನದಲ್ಲಿ ಈ ಪ್ರತಿನಿಧಿಗಳ ಆಳ್ವಿಕೆಯ ಗಣರಾಜ್ಯಕ್ಕೆ 'ಪ್ರಜಾಪ್ರಭುತ್ವ'ವೆಂದು ಹೆಸರು ಹತ್ತಿಕೊಂಡಿತು. ನಿಜ, ಪ್ರಜೆಗಳ ಪ್ರತಿನಿಧಿಗಳು ಆಳುವ ವ್ಯವಸ್ಥೆಯಲ್ಲಿ ಶಿಫಾರಸಿಗೆ ಯೋಗ್ಯವಾದ ಅನೇಕ ಸದ್ಗುಣಗಳಿವೆಯೆಂಬುದೇನೋ ನಮಗೆಲ್ಲಾ ಚೆನ್ನಾಗಿಯೇ ಗೊತ್ತಿದೆ; ಆದರೆ ಅಷ್ಟು ಮಾತ್ರಕ್ಕೇ ಅದನ್ನು 'ಪ್ರಜಾಪ್ರಭುತ್ವ'ವೆಂದು ಕರೆಯಲಿಕ್ಕಾಗದು, ಹಾಗೆ ಕರೆಯುವುದು ದೋಷಯುಕ್ತ ಪರಿಭಾಷೆಯಾಗುತ್ತದೆ, ಅಷ್ಟೇ. ಈ ಕಾಲಘಟ್ಟದಲ್ಲಿಯೇ ಪ್ರಜಾಪ್ರಭುತ್ವವೆಂಬ ಶಬ್ದವು ತನ್ನ ಮೂಲಾರ್ಥದಿಂದ ವಿಚ್ಛೇದಗೊಂಡು, ಕ್ರಮೇಣ, ಆರ್ವೆಲ್ ಉಲ್ಲೇಖಿಸುವ ವ್ಯಂಗ್ಯದ ದಿಕ್ಕಿಗೆ ಸರಿಯತೊಡಗಿತು. ಪ್ರಜಾಪ್ರಭುತ್ವ ಎಂಬುದಕ್ಕೆ 'ಜನರದ್ದೇ ಅಧಿಕಾರ' ಎಂಬ ಮೂಲಾರ್ಥವನ್ನು ವಿಸರ್ಜಿಸಿದ ಬಳಿಕ, ಆ ಶಬ್ದವನ್ನು ನಾವು ಸಮರ್ಥಿಸಲು ಬಯಸುವ ಯಾವುದೇ ರೀತಿಯ ಆಡಳಿತಕ್ಕಾದರೂ ಬಳಸುವುದರಲ್ಲಿ ತಪ್ಪೇನು?

ಇದು, ಪ್ರಜಾಪ್ರಭುತ್ವದ ಪರಿಕಲ್ಪನೆಯ ಮೂಲದಲ್ಲೇ ಅಡಗಿರುವ ಒಂದು ವೈರುಧ್ಯ. ಪ್ರಜಾಪ್ರಭುತ್ವವೆಂದರೆ 'ಜನರ ಅಧಿಕಾರ' ಎಂಬುದು ಮರೀಚಿಕೆಯಾಗಿರುವುದರಿಂದ, ಹಾಗೂ ವ್ಯಾಖ್ಯೆಯಲ್ಲೇ ಅದು ಅಸಾಧ್ಯವಾದದ್ದೂ ಆಗಿಬಿಟ್ಟಿರುವುದರಿಂದ, ಯಾವುದನ್ನು ಬೇಕಿದ್ದರೂ ನಾವೀಗ ಪ್ರಜಾಪ್ರಭುತ್ವವೆಂದು ಕರೆದುಕೊಳ್ಳಲು ಸಾಧ್ಯವಿದೆ. ಈ ವೈರುಧ್ಯ–ವೈಚಿತ್ರ್ಯಗಳಿಗೆ ಒಂದು ಮುಖ್ಯ ಕಾರಣವು ಅಧಿಕಾರವನ್ನು ಕುರಿತ ನಮ್ಮ ಕಲ್ಪನೆಯೊಳಗೇ ಅಡಕವಾಗಿದೆ. ಅಧಿಕಾರವೆಂದರೆ ಇನ್ನೊಬ್ಬರ ಮೇಲಿನ ಅಧಿಕಾರವೆಂಬ ನಂಬಿಕೆಯೇ ಈ ವಿಪರ್ಯಾಸಕ್ಕೆ ಕಾರಣ. ಹಾಗಂತ, ಈ ವೈರುಧ್ಯದ ಚೌಕಟ್ಟಿನೊಳಗಡೆಯೂ ನಮ್ಮ ಕಾಲವು ಹಲವು ರೀತಿಯ ಆಡಳಿತಾತ್ಮಕ 'ಪರಿಹಾರ'ಗಳನ್ನು ರೂಪಿಸಿ ರೂಢಿಸಿಕೊಂಡಿದೆ. ಉದಾಹರಣೆಗೆ, ಅಲ್ಪಸಂಖ್ಯಾತರ ಮೇಲಿನ ಅಧಿಕಾರದ ಚಲಾವಣೆಯ ಮಾರ್ಗ (ಅಂದರೆ, ಬಹುಸಂಖ್ಯಾತರ ದಬ್ಬಾಳಿಕೆ); ಅಥವಾ, ವಿದೇಶಿಯರ ಮೇಲೆ ಅಧಿಕಾರ

ನಡೆಸುವ ಮಾರ್ಗ (ಸಾಮ್ರಾಜ್ಯಶಾಹಿ ಪ್ರಜಾಪ್ರಭುತ್ವವೆಂಬುದು ಸೈದ್ಧಾಂತಿಕವಾಗಿ ನಿರಾಕರಣೆಗೊಂಡಿದೆಯಾದರೂ ಅದು ಇವತ್ತಿಗೂ ಹಲವೆಡೆ ಚಾಲ್ತಿಯಲ್ಲಿದೆ); ಅಥವಾ, ಆಸ್ತಿವಂತರ ಮೇಲೆ ಅಧಿಕಾರ ನಡೆಸುವ ಮಾರ್ಗ (ನಿರ್ಗತಿಕವರ್ಗದ ಸರ್ವಾಧಿಕಾರ– ಡಿಕ್ಟೇಟರ್‌ಶಿಪ್ ಆಫ್ ದಿ ಪ್ರಾಲಿಟೇರಿಯಟ್) ಇತ್ಯಾದಿ. ಇವಕ್ಕೆ ಪರ್ಯಾಯವಾಗಿ ಕೆಲವೊಮ್ಮೆ ಕೆಲಕೆಲವು ಶಕ್ತಿಗಳು ಕೆಲಕಾಲ ಉಳಿದ ಶಕ್ತಿಗಳನ್ನು ಆಳುವಂತೆ ಸರದಿ ಬದಲಾಯಿಸಿಕೊಳ್ಳುವ ಉದಾಹರಣೆಗಳೂ ಲಭ್ಯವಿದೆ.

ಮೇಲಿನ ಎಲ್ಲಾ ಸಾಧ್ಯತೆಗಳೂ ಶಕ್ಯವೇ ಸರಿ, ಕೆಲವಂತೂ ಈಗ ಆಚರಣೆಯಲ್ಲಿಯೂ ಇವೆ. ಆದರೆ, ಇವುಗಳಲ್ಲಿ ಯಾವೊಂದು (ಪ್ರಾಯಶಃ ನಿರ್ಗತಿಕರ ಸರ್ವಾಧಿಕಾರವು ಸರಿಯಾಗಿ ಸಾಕ್ಷಾತ್ಕಾರಗೊಂಡರೆ ಅದೊಂದನ್ನುಳಿದ ಇನ್ನಾವುದೋ) ನಿಜವಾಗಿ ಆಕರ್ಷಕವಾದ ಆಡಳಿತದ ಮಾದರಿಗಳಲ್ಲ. ಹಾಗಿದ್ದರೆ, ಅಂಥ ಒಂದು ಸಾಧ್ಯತೆಯೆ ಅಸಾಧ್ಯವೆ? ಅಧಿಕಾರಕ್ಕೆ ಪಕ್ಕಾದ ಬೇಕಾದ ದುರ್ಬಲರು ಇರದೆ ಅಧಿಕಾರವೆಂಬುದೇ ಇರಲಿಕ್ಕೆ ಸಾಧ್ಯವಿಲ್ಲವೆ? ಇಂಥ ಸಾಧ್ಯತೆಯ ಬಗ್ಗೆ ಬರೆಯುವುದು ಕಷ್ಟ; ಆದ್ದರಿಂದ ರಾಜಕೀಯ ಸಿದ್ಧಾಂತಗಳಲ್ಲಿ ಈ ಕುರಿತು ಪ್ರಸ್ತಾಪ ಇಲ್ಲ. ಆದರೆ, ಅನುಭವ ಲೋಕದಲ್ಲಿ ಅಧಿಕಾರದ ಇಂಥ ರೂಪವನ್ನು ನಾವು ಆಗೀಗ ಕಾಣಲಿಕ್ಕೆ ಸಾಧ್ಯವಿದೆ. ಉದಾಹರಣೆಗೆ, ಹಲವೊಮ್ಮೆ ಯಾವುದೋ ಒಂದು ರಾಜಕೀಯ ಉದ್ದೇಶಕ್ಕಾಗಿ ಜನರೇ ಒಟ್ಟಾಗಿ ವ್ಯವಹರಿಸುವ ಸಂದರ್ಭಗಳಲ್ಲಿ ಇಂಥ ಅಧಿಕಾರದ ಹೊಸ ರೂಪವು ಗೋಚರವಾಗುತ್ತದೆ. ಸಮಕಾಲೀನ ಸಂದರ್ಭಗಳಲ್ಲಿ ಸಾಧಾರಣವಾಗಿ ಇಂಥ ಸಂಘಟನೆಗಳು ಅಂತಿಮವಾಗಿ ಸಾಂಪ್ರದಾಯಿಕ ಅಧಿಕಾರವನ್ನು ಪಡೆಯುವ ಪ್ರಯತ್ನಗಳೇ ಆಗಿರುತ್ತವೆ, ನಿಜ. ಮತ್ತು ಹಲವೊಮ್ಮೆ ಅವು ರಾಷ್ಟ್ರಕ್ಕೆ ಅಥವಾ ಅಂಥ ಇನ್ನೊಬ್ಬ ಶತ್ರುವಿಗೆ ವಿರೋಧಿಯಾಗಿ ಹುಟ್ಟಿಕೊಂಡಿರುತ್ತವೆ ಎಂಬುದು ನಿಜ. ಹಾಗಿದ್ದರೂ ಅವು ತಮ್ಮೊಳಗೆ ಸೃಷ್ಟಿಸಿಕೊಳ್ಳುವ ಶಕ್ತಿಗಳೊಳಗೆ ಹೊಸ ಮಾದರಿಯ ಅಧಿಕಾರದ ರೂಪವೊಂದು ಆಕಾರ ಪಡೆಯುತ್ತದೆ; ಆ ಅಧಿಕಾರವು ಯಾರ ಮೇಲೂ ಅಧಿಕಾರ ನಡೆಸದೆ ತನ್ನ ಸಮುದಾಯವನ್ನೇ ವ್ಯವಸ್ಥಿತಗೊಳಿಸುವ ಕಡೆಗೆ ಉದ್ಯುಕ್ತವಾಗಿರುತ್ತದೆ. ನಿಜ, ಇಂಥ ಅನುಭವಗಳು ಅಪರೂಪವೂ ಕ್ಷಣಿಕವೂ ಆಗಿದ್ದು, ಕ್ರಮೇಣ, ಅಂಥ ಹೊಸ ಅಧಿಕಾರ ರೂಪಗಳನ್ನು ಆವಿಷ್ಕರಿಸಿದ ಜನರೇ ಮತ್ತೆ, ಹಳೆಯ ಅಧಿಕಾರದ ಜಾಡಿಗೆ ಹಿಂದಿರುಗುತ್ತಾರೆ. ಹಾಗಿದ್ದರೂ ಹಳೆಯ ಅಧಿಕಾರವೇ ಮತ್ತೆ 'ಮರುಕಳಿಸಿತು' ಎಂಬ ಅನಿಸಿಕೆಯೇ ಆ ನಡುವೆ ಹೊಸತೇನೋ ಆವಿರ್ಭವಿಸಿದ್ದಕ್ಕೆ ಸಾಕ್ಷಿಯಾಗುತ್ತದೆ.

ಅಧಿಕಾರದ ಇಂಥ ಪುನರಾವಿಷ್ಕಾರದ ಸಂದರ್ಭಗಳಲ್ಲಿ ನಡೆಯುವ ಪ್ರಕ್ರಿಯೆ ಗಮನಾರ್ಹವಾದದ್ದು. ಒಂದು ಸಮುದಾಯವು ಆ ಸಂದರ್ಭದಲ್ಲಿ ಸ್ವಯಂಸ್ಫೂರ್ತವಾದೊಂದು ಸ್ವಯಂ ಆಡಳಿತದ ವಿಧಾನಕ್ಕೆ ಪಲ್ಲಟಗೊಳ್ಳುತ್ತದೆ. ಆಗ ಆ ಇಡೀ ಸಮುದಾಯದ – ಅಥವಾ ಆ ಸಮುದಾಯದ ಬಹು ಭಾಗದ ಚಟುವಟಿಕೆಗಳು 'ಮೇಲಿನಿಂದ ಹೇರಲ್ಪಡುವ' ಅಧಿಕಾರವೊಂದರ ಬಲವಿಲ್ಲದೆಯೇ, ಸಮೂಹ ಆಯ್ಕೆಯ ಫಲವಾಗಿ ವಿಶಿಷ್ಟವಾದೊಂದು ವ್ಯವಸ್ಥೆಗೆ ವರ್ಗಾವಣೆಗೊಳ್ಳುತ್ತವೆ. ಇಂಥ ಪ್ರಕ್ರಿಯೆ ನಡೆಯುವುದು ಸುಲಭಸಾಧ್ಯವಲ್ಲ; ಸಾಕಷ್ಟು ಚರ್ಚೆ – ವಾಗ್ವಾದಗಳ

(ಮತ್ತು 'ರಾಜಕಾರಣ'ದ) ಪರಿಣಾಮವಾಗಿ ಮಾತ್ರ ಇದು ಸಾಧಿತವಾಗುತ್ತದೆ. ಹಾಗಿದ್ದರೂ ಇದು ಸಂಭವ ಎಂಬುದಂತೂ ಸತ್ಯ. ಇಂಥ ಅಧಿಕಾರ ರೂಪದ ಪಲ್ಲಟಗಳನ್ನು ವಿವಿಧ ದೇಶಕಾಲದ ಜನರು ಅಲ್ಲಲ್ಲಿ ಅನುಭವಿಸಿದ ದೃಷ್ಟಾಂತಗಳಿವೆ. ಉದಾಹರಣೆಗೆ, ಅಲಬಾಮಾದ ಮಾಂಟ್‌ಗೋಮೇರಿಯಲ್ಲಿ ೧೯೫೦ರಲ್ಲಿ ನಡೆದ ಬಸ್ ಬಹಿಷ್ಕಾರದ ಸನ್ನಿವೇಶ, ಅಥವಾ ೧೯೬೦ರ ಜಪಾನಿನ ಭದ್ರತಾ ಒಪ್ಪಂದ ವಿರೋಧಿ ಚಳುವಳಿ, ಅಥವಾ ಫಿಲಿಪೇನ್ಸ್‌ನಲ್ಲಿ ನಡೆದ ಜನಾಧಿಕಾರದ ಆಂದೋಲನ, ಅಥವಾ ಪೋಲೆಂಡಿನ ಒಗ್ಗಟ್ಟಿನ (ಸಾಲಿಡಾರಿಟಿ) ಚಳುವಳಿ, ಅಥವಾ ಥೈಲೆಂಡಿನಲ್ಲಿ ನಡೆದ ರಸ್ತೆ – ಪಾರ್ಲಿಮೆಂಟಿನ ಪ್ರಯೋಗ, ಅಥವಾ (ಇವೆಲ್ಲಕ್ಕಿಂತ ದೊಡ್ಡ ಪ್ರಮಾಣದಲ್ಲಿ ನಡೆದ) ಭಾರತದ ಸತ್ಯಾಗ್ರಹ – ಇವೆಲ್ಲವೂ ಅಂಥ ಅಧಿಕಾರ ಪಲ್ಲಟಗಳೇ. ಇಂಥ ಅನುಭವಗಳು ಸಂಭವಿಸಿದಾಗ ಅದನ್ನು ವರ್ಣಿಸಲಿಕ್ಕೆ ತಕ್ಕ ಶಬ್ದಗಳು ಸಿಗುವುದು ಕಷ್ಟವೇ, ಕಾರಣ ಸಾಧಾರಣವಾಗಿ ರಾಜಕೀಯದ ಚರ್ಚೆಗೆ ನಾವು ಬಳಸುವ ಪರಿಭಾಷೆಗಳಲ್ಲಿ ಈ ಅನುಭವವನ್ನು ಅಭಿವ್ಯಕ್ತಿಸುವುದು ಅಸಾಧ್ಯ. ಆದರೆ ಇಂಥ ಅಪರೂಪದ ನಿಜಜೀವನದ ಅನುಭವಗಳನ್ನು ಸೂಚಿಸಲಿಕ್ಕೆ ಒಂದು ನಿಖರವಾದ ಶಬ್ದ ಇದೆ. ಪ್ರಜಾಸತ್ತೆಯ ಸ್ವಾತಂತ್ರ್ಯ ಎಂದು ಕರೆಯುವುದು ಅದೇ ಸರಿ.

(ಸಾಭಾರ : ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು : ವಿನಯ ಲಾಲ್ ಮತ್ತು ಅಶೀಶ್ ನಂದಿ ಸಂಪಾದಿಸಿರುವ ಪರಿಭಾಷಾಕೋಶ)

* * *

ಕೋಗಿಲೆ ಸಂದೇಶ

ವಸಂತ ಋತುವಿನ ಬೆಳಗಿನ ಸಮಯದಿ
ಕೋಗಿಲೆ ಕೂಗಿತ್ತು
"ಬೆಳಗಿನ ಹೊತ್ತಲಿ ಹೊಲದಲಿ ಸುತ್ತಿರಿ,
ಮರಗಿಡ ನೋಡಿರಿ" ಎನ್ನುತ ಕೋಗಿಲೆ ಕೂಗಿತ್ತು,
ರೈತಗೆ ದಿನಚರಿ ತಿಳಿಸಿತ್ತು;

'ಕಾಫಿಯ ಹೀರುತ ಸುದ್ದಿಯ ಓದುವ
ರೂಢಿಯು ನಮ್ಮದು' ಎನ್ನುವ ಮಣ್ಣಿನ ಮಕ್ಕಳ
ಹೊಸಪರಿ ಉತ್ತರ ದೊರಕಿತ್ತು
'ಗಾಡಿಯ ಹೂಡುತ ಕೊಟ್ಟಿಗೆ ಗೊಬ್ಬರ
ಭೂಮಿಗೆ ಸುರಿಯಿರಿ' ಎನ್ನುತ ಕೋಗಿಲೆ ಕೂಗಿತ್ತು,
ರೈತಗೆ ನೆನಪನು ಮಾಡಿತ್ತು;

'ಅಂಗಡಿ ಗೊಬ್ಬರ ಹೆಗಲಲಿ ಹೊರುವೆವು
ಭೂಮಿಗೆ ಸುರಿವೆವು' ಎಂದು ರೈತರ
ಸಲೀಸು ಜವಾಬು ಚಿಮ್ಮಿತ್ತು.

'ನೇಗಿಲು ಕಟ್ಟಿರಿ –ಉಳುಮೆಯ ಮಾಡಿರಿ
ಬೆವರನು ಬಸಿಯಿರಿ' ಎನ್ನುತ ಕೋಗಿಲೆ ಕೂಗಿತ್ತು,
ಕಾಯಕ ನಿಷ್ಠೆಯ ಸಾರಿತ್ತು;
'ಟ್ರಾಕ್ಟರ್ ಚಾಲಿಸಿ –ಮೋಜಿನ ಪರಿಯಲಿ
ಭೂಮಿಯ ಕೆರೆವೆವು' ಎಂದು
ಠೀವಿಯ ಉತ್ತರ ಹೊರಬಿತ್ತು.

'ಹಕ್ಕಿಯ ಬಳಗವ ಸಾಕಿರಿ ಉಳಿಸಿರಿ'
ಎನ್ನುತ ಕೋಗಿಲೆ ಕೂಗಿತ್ತು,
ಪರಿಸರ ಚಕ್ರವ ತಿಳಿಸಿತ್ತು;
'ಬೇಗನೆ ಕೊಲ್ಲುವ ಔಷಧಿ ಇರುತಿರೆ
ಏಕೀ ಕೊಂಕಣ?' ಎನ್ನುವ ಮಣ್ಣಿನ ಮಕ್ಕಳ
ನಿರ್ದಯ ಪ್ರಶ್ನೆ ಗುಡುಗಿತ್ತು;
ಯಂತ್ರದ ಬೆಡಗನು ಹೊಗಳಿತ್ತು,
ಕೋಗಿಲೆ ಆ ಕೂಗನು ತೆಗಳಿತ್ತು.

– *'ಎಲ್ಲೆನ್' ತೊಂಡೋಟಿ*

ಸಾಮಾನ್ಯತೆಯಿಂದ ಅಸಾಮಾನ್ಯತೆಗೇರಿದ ಸಿಂಡಿಕೇಟ್ ಬ್ಯಾಂಕ್ ಅಧ್ಯಕ್ಷ ದಿ.ಕೃಷ್ಣರಾವ್

- ಕೆ.ಆರ್.ಮೋಹನ್

ಉಡುಪಿಯಲ್ಲಿ ತೀರ ಭಿನ್ನವಾದ ಬದುಕು, ಅನುಭವ ಮತ್ತು ಹಿನ್ನೆಲೆ ಹೊಂದಿ, ಅಪಾರ ಸ್ನೇಹಿತರ, ಅಭಿಮಾನಿಗಳ, ಸಹೋದ್ಯೋಗಿಗಳ ಮತ್ತು ಬಂಧುಗಳ ಜೀವನವನ್ನು ಶ್ರೀಮಂತಗೊಳಿಸಿ ಮಾರ್ಚ್ ೨ರ ಬೇಳಿಗ್ಗೆ ಮಣಿಪಾಲಿನಲ್ಲಿ ಸದ್ದಿಲ್ಲದೆ ಕೃಷ್ಣರಾಯರು ಕಾಲವಾದರು. ಈಗ ಅವರ ಆಕರ್ಷಕ ವ್ಯಕ್ತಿತ್ವದ ನಗುಮುಖದ ಸ್ಮರಣೆಯೊಂದೇ ಉಳಿದಿದೆ.

ಬಡತನದಲ್ಲಿ ಅಂಬಲಪಾಡಿ ದೇವಸ್ಥಾನದ ಪರಿಸರದಲ್ಲಿ ಓಡಾಡಿಕೊಂಡು, ಕ್ರಿಶ್ಚಿಯನ್ ಹೈಸ್ಕೂಲ್ ವಿದ್ಯಾರ್ಥಿಯಾಗಿ ಎಸ್. ಎಸ್. ಎಲ್. ಸಿ.ಯಲ್ಲಿ ಉತ್ತಮ ಅಮಕಗಳನ್ನು ಪಡೆದರು. ಕಾಲೇಜು ವಿದ್ಯಾಭ್ಯಾಸಕ್ಕೆ ಬೇಕಾದ ಆರ್ಥಿಕ ಶಕ್ತಿ ಸವಲತ್ತುಗಳು ಇರಲಿಲ್ಲ. ಕೆಲಸಕ್ಕೆ ಸೇರಲು ಖ್ಯಾತ ಉಡ್‌ಲ್ಯಾಂಡ್ಸ್ ಹೋಟೆಲಿನ ಮಾಲೀಕರಾದ ಕಡಂದಲೇ ಕೃಷ್ಣಭಟ್ಟರನ್ನು ಭೇಟಿ ಮಾಡಿದಾಗ ಇವರ ಪ್ರತಿಭೆಯನ್ನು ಗುರುತಿಸಿ ಮಂಗಳೂರು ಮತ್ತು ಮದ್ರಾಸಿನಲ್ಲಿ ವಿದ್ಯಾಭ್ಯಾಸಕ್ಕೆ ಸೌಕರ್ಯವನ್ನು ಮಾಡಿಕೊಟ್ಟರು. ಎಂ. ಎ. ಮತ್ತು ಎಂ. ಎಲ್. ಪದವಿಗಳನ್ನು ಉತ್ತಮ ಶ್ರೇಣಿಯಲ್ಲಿ ಪಡೆದರು. ರಕ್ಷಣಾ ಖಾತೆಯಲ್ಲಿ ಮತ್ತು ಕಾಲೇಜು ಉಪನ್ಯಾಸಕರಾಗಿ ಸ್ವಲ್ಪ ಸಮಯ ಮದ್ರಾಸಿನಲ್ಲಿ ಕೆಲಸ ಮಾಡಿದರು.

ಬ್ಯಾಂಕಿನ ಪ್ರವೇಶ ಆಕಸ್ಮಿಕವೆಂದರೆ ತಪ್ಪಾಗಲಾರದು. ೧೯೫೦ರಲ್ಲಿ ಡಾ. ಮಾಧವ ಪೈಯವರು ಉಡುಪಿಯಲ್ಲಿ ಕಾನೂನು ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ತಮಗೆ ಕಾನೂನು ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಇದ್ದ ಕಾರಣ, ಪ್ರಿನ್ಸಿಪಾಲ್ ಹುದ್ದೆಗೆ ಕೃಷ್ಣರಾವ್‌ರವರು ಅರ್ಜಿ ಸಲ್ಲಿಸಿದರು ಗುಣಗ್ರಾಹಿಗಳಾದ ಶ್ರೀ ಟಿ.ಎ.ಪೈಯವರು, ಸೀಮಿತ ಕ್ಷೇತ್ರವಾದ ಲಾ ಕಾಲೇಜಿಗಿಂತ ವ್ಯಾಪಕ ಅವಕಾಶಗಳಿರುವ ಸಿಂಡಿಕೇಟ್ ಬ್ಯಾಂಕ್ ಕೃಷ್ಣರಾಯರಿಗೆ ಸರಿಯದ ಜಾಗವೆಂದು ನಿರ್ಧರಿಸಿ ಅವರಿಗೆ ಬ್ಯಾಂಕಿನ ಕಾನೂನು ವಿಭಾಗಾಧಿಕಾರಿಯಾಗಿ ನೇಮಕ ಮಾಡಿದರು. ಪೈಯವರ ನಿರ್ಧಾರ ಸರಿಯಾಗಿಯೇ ಇತ್ತು. ಕೃಷ್ಣರಾಯರು ಸ್ವಂತ ಪ್ರತಿಭೆ ಮತ್ತು ಪರಿಶ್ರಮದಿಂದ ಬ್ಯಾಂಕಿನಲ್ಲಿ ಹಂತಹಂತವಾಗಿ ಉನ್ನತ ಹುದ್ದೆಗಳನ್ನು ಏರುತ್ತಾ ೧೯೮೮ರಲ್ಲಿ ಬ್ಯಾಂಕಿನ ಅಧ್ಯಕ್ಷರಾಗಿ ೧೯೮೬ರಲ್ಲಿ ನಿವೃತ್ತಿ ಪಡೆದರು.

ತಮ್ಮ ವೃತ್ತಿ ಜಿವನದಲ್ಲಿ ಲೆಕ್ಕವಿಲ್ಲದಷ್ಟು ಜನರಿಗೆ ತಮ್ಮ ಕೈಯಲ್ಲಾದ ಸಹಾಯ ಮಾಡಿದ್ದಾರೆ. ಎಷ್ಟೋ ಜನ ಇವರ ಔದಾರ್ಯವನ್ನು ದುರುಪಯೋಗಪಡಿಸಿಕೊಂಡು ಇವರಿಗೆ ಕೆಟ್ಟ ಹೆಸರನ್ನು ತಂದಿದ್ದರು. ಈ ಬಗ್ಗೆ ಪ್ರಸ್ತಾಪ ಮಾಡಿದಾಗ "ನನಗೆ ಸಹಾಯು ಮಾಡುವ ಅವಕಾಶವಿತ್ತು, ನಾನು ಮಾಡಿದೆ. ಅದರ ಒಳಿತು ಕೆಡುಕುಗಳು

ಅವರಿಗೆ ಸೇರಿದ್ದು" ಎಂದು ವಿಚಲಿತರಾಗದೇ ಉತ್ತರ ಕೊಟ್ಟಿದ್ದರು. ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅನುಭವಿಸಿದ ಕಷ್ಟಗಳನ್ನು ನೆನೆದು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದರು.

ತಮ್ಮ ವೃತ್ತಿ ಜೀವನವನ್ನು ಬ್ಯಾಂಕಿನ ಮಟ್ಟಿಗೆ ಸೀಮಿತಗೊಳಿಸದೇ ತಮ್ಮ ಅಪಾರ ಹಿಂದೀ ಜ್ಞಾನವನ್ನು ಸಾರ್ಥಕವಾಗಿ ಉಪಯೋಗಿಸಲು ವಾರಕ್ಕೆ ಮೂರು ದಿನ ಉಡುಪಿ ಹಿಂದೀ ಪ್ರಚಾರ ಸಭಾದಲ್ಲಿ ವಿಶಾರದ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಟಿ. ಎ. ಪೈಯವರ ನೆರವು ಪಡೆದು ಸಭಾಕ್ಕೆ ಸ್ವಂತ ಕಟ್ಟಡವನ್ನು ಕಟ್ಟಿಸಿಕೊಟ್ಟರು.

ಅಪೂರ್ವ ಸಾಹಿತಿ ಮತ್ತು ತಾಂತ್ರಿಕರಾಗಿದ್ದ ಸತ್ಯಕಾಮರವರನ್ನು ಉಡುಪಿಗೆ ಪರಿಚಯ ಮಾಡಿಕೊಟ್ಟ ಶ್ರೇಯಸ್ಸು ಕೃಷ್ಣರಾಯರದು. ೧೯೮೦ರಲ್ಲಿ ಸತ್ಯಕಾಮರವರನ್ನು ಜಮಖಂಡಿಯಿಂದ ಕರೆಸಿ ತಮ್ಮ ಮನೆಯಲ್ಲೆ ಒಂದು ವಾರ ಇರಿಸಿಕೊಂಡು, ಉಡುಪಿ ಮತ್ತು ಮಣಿಪಾಲದ ಪ್ರತಿಷ್ಠಿತರನ್ನು ಆಹ್ವಾನಿಸಿ ಸತ್ಯಕಾಮರ ಜೊತೆ ಸಂವಾದ, ಚರ್ಚೆ, ಗೋಷ್ಠಿಗಳನ್ನು ಏರ್ಪಡಿಸಿದ್ದರು. ಅಲ್ಲಿಂದ ಅಂಬಲಪಾಡಿಯ ನಂಟು ಬೆಳೆದು ಸತ್ಯಕಾಮರು ಮೇಲಿಂದ ಮೇಲೆ ಉಡುಪಿಗೆ ಬರುತ್ತಿದ್ದರು. ಅವರ ಅಭಿಮಾನಿಗಳ ಕೋರಿಕೆಯ ಮೇರೆಗೆ ಸತ್ಯಕಾಮರ 'ಪಂಚಮಗಳ ನಡುವೆ' ಎಂಬ ಆತ್ಮಕಥನವನ್ನು ಕೃಷ್ಣರಾಯರು ಹಿಂದಿಗೆ ಅನುವಾದ ಮಾಡಿಕೊಟ್ಟಿದ್ದರು.

ಅಂಬಲಪಾಡಿಯಲ್ಲಿದ್ದ ಅವರ ಮನೆಯಲ್ಲಿ ನವರಾತ್ರಿಯಲ್ಲಿ ಒಂಬತ್ತು ದಿನ ದೇವತಾ ಪೂಜೆ ನಡೆಸುತ್ತಿದ್ದರು. ರಾಯರ ಸ್ನೇಹಿತರು ಮತ್ತು ಅಭಿಮಾನಿಗಳು ಭಾರತದ ಬೇರೆ ಬೇರೆ ಪ್ರದೇಶಗಳಿಂದ ಬಂದು, ಅವರಲ್ಲಿಯೇ ಉಳಿದುಕೊಂಡು, ಪೂಜಾ ಕಲಾಪಗಳಲ್ಲಿ ಭಾಗಿಯಾಗುತ್ತಿದ್ದರು. ಜಾತಿ, ಮತ, ಪಂಥ ಮುಂತಾದ ಯಾವ ನಿರ್ಬಂಧವಿರಲಿಲ್ಲ. ಎಲ್ಲರಿಗೂ ಮುಕ್ತ ಪ್ರವೇಶ. ಶುಚಿರುಚಿಯಾದ ಆತಿಥ್ಯ. ಆಗ ಕಳೆದ ದಿನಗಳು ಅವಿಸ್ಮರಣೀಯ.

ಅವರ ಓದು ವ್ಯಾಪಕವಾಗಿತ್ತು. ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ, ತತ್ವಶಾಸ್ತ್ರ ಸಂಬಂಧಿಸಿದಂತಹ ಅಗಾಧ ಜ್ಞಾನ ಸಂಗ್ರಹವಿತ್ತು. ಆಸಕ್ತರಿಗೆ ಕೇಳಿದ ಪುಸ್ತಕಗಳನ್ನು ಮುಕ್ತವಾಗಿ ಕೊಡುತ್ತಿದ್ದರು. ಅವರಿಗೆ ಕನ್ನಡ, ಹಿಂದೀ ಮತ್ತು ಇಂಗ್ಲಿಷ್‌ನಲ್ಲಿ ಅಗಾಧವಾದ ಪಾಂಡಿತ್ಯವಿತ್ತು. ಆಧ್ಯಾತ್ಮ ಅಥವಾ ಕಾನೂನಿನ ಸೂಕ್ಷ್ಮಗಳನ್ನು ಸುಲಲಿತವಾಗಿ ಮೂರು ಭಾಷೆಗಳಲ್ಲಿ ಹೇಳುವ ವಾಕ್ಪಟುತ್ವವಿತ್ತು. ಇದರ ಪ್ರಯೋಜನವನ್ನು ಹಲವಾರು ಸಂಘ ಸಂಸ್ಥೆಗಳು ಪಡೆದುಕೊಂಡಿದ್ದವು. ರಾಯರ ಮೂರೂ ಭಾಷೆಯ ಸುಂದರ ಕೈಬರಹ ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಂತಿತ್ತು

ಕೃಷ್ಣರಾಯರ ಜೀವನದ ಕೊನೆಯ ೧೦-೧೫ ವರ್ಷಗಳು ದಾರುಣವಾಗಿದ್ದವು. ೧೯೮೮ರಲ್ಲಿ ಅವರ ಹೆಂಡತಿ ಕಾಲವಾದರು. ಎರಡು ಬಾರಿ ಪಾರ್ಶ್ವವಾಯು ಪೀಡಿತರಾಗಿ, ಅವರ ಓಡಾಟ ನಿಂತುಹೋಗಿತ್ತು. ಅವರನ್ನು ನೋಡಿಕೊಳ್ಳುತ್ತಿದ್ದ ಅವರ ತಂಗಿ, ಭಾವ ಮತ್ತು ಆಪ್ತರು ಅವರ ಇದಿರೇ ತೀರಿಹೋದರು. ಮಣಿಪಾಲಿನಲ್ಲಿ ಒಂಟಿ ಜೀವನ. ಕೊನೆಯ ವರ್ಷ ವಾರಕ್ಕೆ ಎರಡು ಬಾರಿ ಮಣಿಪಾಲ್ ಆಸ್ಪತ್ರೆಗೆ ಡಯಾಲಿಸಿಸ್‌ಗೆ ಹೋಗಬೇಕಾದ ಪರಿಸ್ಥಿತಿ ಉಂಟಾಯಿತು.

ಇಷ್ಟೆಲ್ಲಾ ದೈಹಿಕ ತೊಂದರೆಗಳಿದ್ದರೂ ಅವರ ಜ್ಞಾಪಕಶಕ್ತಿ ಪ್ರಖರವಾಗಿತ್ತು. ಅವರ ಅನಾರೋಗ್ಯದ ಬಗ್ಗೆ ಸಂತಾಪ ವ್ಯಕ್ತಪಡಿಸಿದಾಗ, "ದೇವರು ನನಗೆ ಜೀವನದಲ್ಲಿ ಎಲ್ಲಾ ಸುಖಸೌಕರ್ಯಗಳನ್ನು ಕೊಟ್ಟಿದ್ದರು. ಈಗ ಬಂದ ಅನಾರೋಗ್ಯದ ಬಗ್ಗೆ ನಾನು ಯಾಕೆ ದೂರಬೇಕು? ಬಹುಶಃ ಪ್ರಾರಬ್ಧ ಕರ್ಮಗಳನ್ನು ನಾನು ಅನುಭವಿಸಬೇಕು. ನೀವು ತಿಳಿದುಕೊಂಡ ಹಾಗೆ ಡಯಾಲಿಸಿಸ್‌ನಿಂದ ನನಗೆ ವಿಶೇಷ ಬಾಧೆಯಾಗುತ್ತಿಲ್ಲ. ವಾತಾನುಕೂಲಿತ ಕೋಣೆಯಲ್ಲಿ ಡಯಾಲಿಸಿಸ್ ಮಾಡುತ್ತಿರುವಾಗ ನಾನು ಶಾಂತವಾಗಿ ಜಪ ಮಾಡುತ್ತಾ ಎರಡು ಗಂಟೆ ಸಮಯವನ್ನು ಸದುಪಯೋಗ ಮಾಡಿಕೊಳ್ಳುತ್ತೇನೆ" ಎಂದು ನಿರ್ವಿಕಾರವಾಗಿ ಹೇಳುತ್ತಿದ್ದರು. ಆದರೆ ಯಾರಿಗೂ ಅನ್ಯಾಯ ಮಾಡದೆ, ಸಾತ್ವಿಕ ಜೀವನವನ್ನು ನಡೆಸಿ, ಜೀವಿತದ ಕೊನೆಯಲ್ಲಿ ಅವರಿಗೆ ಬಂದ ಅವಸ್ಥೆಯನ್ನು ನೋಡಿ ಅವರ ಅಭಿಮಾನಿಗಳಿಗೆ ಬಿಡಿಸಲಾರದ ಪ್ರಶ್ನೆಯಾಗಿತ್ತು.

ಶ್ರೀಯುತರಾದ ಕಡಂದಲೆ ಕೃಷ್ಣಭಟ್, ಸಿ. ರಾಮಚಂದ್ರ ರಾವ್ ಮತ್ತು ಟಿ. ಎ. ಪೈ ಇವರು ಮಾಡಿದ ಉಪಕಾರಗಳನ್ನು ರಾಯರು ಯಾವಾಗಲೂ ಸ್ಮರಿಸುತ್ತಿದ್ದರು ಮತ್ತು ಅವುಗಳನ್ನು ಅಭಿಮಾನಿಗಳಿಗೆ ಹೇಳುತ್ತಿದ್ದರು.

ಕೃಷ್ಣರಾಯರಂತಹ ಮಹಾಚೇತನದ ನಿರ್ವ್ಯಾಜ್ಯ ಪ್ರೀತಿಯನ್ನು ಅನೇಕ ರೀತಿಯಲ್ಲಿ ನಾನು ಪಡೆದಿದ್ದೇನೆ. ಇದು ನನ್ನ ಸುಕೃತವೆಂದು ಭಾವಿಸುತ್ತೇನೆ. "ಜೀವನದಲ್ಲಿ ಬೇಕಾದಷ್ಟು ಸಮಸ್ಯೆಗಳು ಬರುತ್ತವೆ. ಹಾಗೆ ಪರಿಹಾರ ಕೂಡ ಆಗುತ್ತದೆ. ಪರಿಹಾರ ಹೇಗೆ ಆಯಿತು ಎಂದು ವಿಶ್ಲೇಷಣೆ ಮಾಡಿದರೆ, ದೈವಾನುಗ್ರಹದ ಪರಿಚಯವಾಗುತ್ತದೆ" ಎಂದು ರಾಯರು ಹೇಳಿದ ಮಾತು ನನಗೆ ದಾರಿದೀಪವಾಗಿದೆ.

* * *

ಸಂತಾಪ

ಮೈಸೂರು ನಗರದ ಅಚ್ಚುಮೆಚ್ಚಿನ ಮಿತ್ರ ಮತ್ತು ಕನ್ನಡ ಭಾಷೆಯ ಪ್ರೀತಿಯ ಪುತ್ರ ಶಿಕಾರಿಪುರ ಹರಿಹರೇಶ್ವರರು ೨೨-೭-೧೦ ರಂದು ಕನ್ನಡಾಂಬೆಯ ಪಾದವನ್ನು ಸೇರಿದರು. ಅವರು ತಮ್ಮ ಜೀವಿತದ ಕೊನೆಯ ಗಳಿಗೆಯವರೆಗೂ ಕನ್ನಡದ ಧ್ಯಾನ ಮಾಡುತ್ತಿದ್ದರು. ಕನ್ನಡದ ಕೆಲಸ ಮಾಡುವವರಲ್ಲಿ ಅವರೆಂದಿಗೂ ಭೇದ ಎಣಿಸಲಿಲ್ಲ. ವಿದೇಶಗಳಲ್ಲೂ ಕನ್ನಡದ ಸೇವಕನಾಗಿ ಕೆಲಸ ಮಾಡಿದರು. ಉನ್ನತ ವ್ಯಾಸಂಗ ಮತ್ತು ವೃತ್ತಿಯಿದ್ದಾಗ್ಯೂ ಕನ್ನಡವನ್ನು ಮರೆಯದೇ ಕನ್ನಡಕ್ಕಾಗಿ ಕೆಲಸ ಮಾಡಿದರು. ಹರಿಹರೇಶ್ವರರು ಎಲ್ಲ ಕನ್ನಡಿಗರಿಗೆ ಆದರ್ಶಪ್ರಾಯರಾಗಿದ್ದಾರೆ. ಅವರ ಆತ್ಮಕ್ಕೆ ಜನಪದ ವಿಚಾರವು ಶಾಂತಿಯನ್ನು ಕೋರುತ್ತದೆ.

ಕೆಲವು ವೇದ ಮಂತ್ರಗಳು ಮತ್ತು ಅವುಗಳ ಅರ್ಥ

– ವಿನೋಬಾ

ಯತ್ ಸಾನೋಃ ಸಾನುಮಾರುಹತ್ ಭೂರ್ಯಸ್ಪಷ್ಟ ಕರ್ತವಂ
ತ್ರದಿಂದ್ರೊ ಅರ್ಥ ಚೇತತಿ

ವೇದಗಳಲ್ಲಿ ಪರ್ವತಾರೋಹಣದ ವರ್ಣನೆ ಬಂದಿದೆ. ನಾವು ಒಂದು ಪರ್ವತ ಹತ್ತುತ್ತೇವೆ. ಮೇಲೆ ನೋಡಿದಾಗ ಇಂಥ ಒಂದು ಸ್ಥಳ ಮುಗಿಯಿತೆಂದು ಆಭಾಸವಾಗುತ್ತದೆ. ಆದರೆ ಅಲ್ಲಿಗೆ ತಲುಪಿದ ಮೇಲೆ ಅಷ್ಟೇ ಎತ್ತರದ ಇನ್ನೊಂದು ಪರ್ವತ ಇದೆ ಎಂದು ಕಾಣುತ್ತದೆ. ಪುನಃ ಅದನ್ನು ಹತ್ತಲಾರಂಭಿಸುತ್ತೇವೆ. ಅದಾದ ನಂತರ ಮೂರನೆಯ ಪರ್ವತ ಕಾಣುತ್ತದೆ. ಇದೇ ಆರೋಹಣ ಪ್ರಕ್ರಿಯೆ.

ತ್ರೀಣಿ ಪದಾ ವಿ ಚಕ್ರಮೆ ವಿಷ್ಣುರ್ಗೋಪಾ ಅದಾಭ್ಯಃ
ಅತೋ ಧರ್ಮಾಣಿ ಧಾರಯನ್

ವಿಶ್ವ ಗೋಪ್ತನಾದ ನಿರ್ದಭ ಪರಮೇಶ್ವರನು ಮೂರು ಹೆಜ್ಜೆ ಇಟ್ಟು (ಅಂದರೆ ಓಂಕಾರದ ಮೂರು ಮಾತ್ರೆಗಳಲ್ಲಿ) ಧರ್ಮಧಾರಣೆಯ ಕೆಲಸವನ್ನು ಸತತವಾಗಿ ಮಾಡುತ್ತಿರುತ್ತಾನೆ. ಈ ರೀತಿ ಪರಮೇಶ್ವರನ ದಿವ್ಯ–ಜನ್ಮ–ಕರ್ಮ–ಹಗಲೂರಾತ್ರಿ ನಡೆಯುತ್ತಿರುತ್ತವೆ.

ವಿಷ್ಣು ಮೂರು ಹೆಜ್ಜೆಗಳನ್ನಿಟ್ಟ. ಒಂದನ್ನು ಸ್ವರ್ಗದಲ್ಲಿ, ಎರಡನೆಯದನ್ನು ಅಂತರಿಕ್ಷದಲ್ಲಿ ಮತ್ತು ಮೂರನೆಯದನ್ನು ಪೃಥ್ವಿಯ ಮೇಲೆ. ಈ ಮೂರೂ ಹೆಜ್ಜೆಗಳನ್ನು ವಿಷ್ಣು ***ಅತೋ ಧರ್ಮಾಣಿ ದಾರಯನ್*** – ಧರ್ಮದ ಧಾರಣೆಯನ್ನು ಮಾಡುವುದಕ್ಕೊಸ್ಕರ ಮತ್ತು ಮೂರೂ ಲೋಕಗಳಿಗೆ ಧರ್ಮದ ಅಭ್ಯಾಸ ಮಾಡಿಸುವುದಕ್ಕಾಗಿ ಹಾಗೂ ಧರ್ಮದ ಉದಾಹರಣೆ ಕೊಡುವುದಕ್ಕಾಗಿ ಈ ಹೆಜ್ಜೆಗಳನ್ನಿಟ್ಟನು. ಈ ವರೆಗೂ ನಿಜವಾದ ಧರ್ಮ ರಚಿತವಾಗಿಲ್ಲ. ಏಕೆಂದರೆ ಈ ವರೆಗೆ ಅದು ಮಾನಸಿಕ ಭೂಮಿಕೆಯ ಮೇಲೆಯೇ ಆಧೃತವಾಗಿತ್ತು. ಇನ್ನು ಮುಂದೆ ಕಲ್ಪನೆ, ವಾಸನೆ, ಕಾಮನೆ ಇತ್ಯಾದಿಗಳಿಗೆ ಅವಕಾಶವಿರುವುದಿಲ್ಲ. ಈಗ ವಿಜ್ಞಾನ ಮತ್ತು ಆತ್ಮಜ್ಞಾನದ ರೆಕ್ಕೆಗಳಿಂದ ಹಾರುವುದನ್ನು ಕಲಿತು ಧರ್ಮಸಂಸ್ಥಾಪನೆಯನ್ನು ಮಾಡಬೇಕಾಗಿದೆ. ಧರ್ಮವು ವಿಜ್ಞಾನದ ಭೂಮಿಕೆ ಮೇಲೆ ಬಂದಾಗ ಜಗತ್ತಿನ ಸ್ಪಷ್ಟ ಸ್ವರೂಪ ಗಮನಕ್ಕೆ ಬರುವುದು. ಆಗಲೇ ಅದು ನಿಜವಾದ ಧರ್ಮವಾಗುವುದು. ಬುದ್ಧಿಯ ಪರೀಕ್ಷೆಗೆ ಒಳಗಾಗುವಂಥ ಮತ್ತು ಎಲ್ಲ ಭೇದ ಭಾವವನ್ನು ಅಳಿಸಿಹಾಕುವಂಥದೇ ನಿಜವಾದ ಧರ್ಮವಾಗುವುದು. ಹಿಂದೂ, ಮುಸಲ್ಮಾನ, ಇಸಾಯಿ ಇತ್ಯಾದಿಗಳೆಲ್ಲವೂ ಧರ್ಮ ಅಲ್ಲ. ಪಂಥ. ಮೊದಲನೆಯ ಚರಣ ಇಡುವುದಕ್ಕಾಗಿಯೇ ಈ ಎಲ್ಲ ಪಂಥಗಳ ನಿರ್ಮಾಣವಾಯಿತು. ಈ ಪಂಥಗಳಿಂದ ಇನ್ನೂ ಮುಂದೆ ಹೋಗಬೇಕಿದೆ.

ತದ್ ವಿಷ್ಣೋಃಷೋಃ ಪರಮ್ ಪದಂ

ವೇದ ಮತ್ತು ಉಪನಿಷತ್ತುಗಳು ಬ್ರಾಹ್ಮೀ ಸ್ಥಿತಿಯನ್ನು ***ತದ್ ವಿಷ್ಣೋಃಷೋಃ ಪರಮ್ ಪದಂ*** ಎಂದು ಹೇಳಿದೆ. ಇದನ್ನೇ ಗೀತೆಯು ***ತದ್ ಧಾಮಂ ಪರಂ ಮಮ*** ಎಂದು ಹೇಳಿದೆ ಮತ್ತೂ ಹೇಳಿದ್ದೇನೆಂದರೆ ಪರಂಧಾಮವನ್ನು ಪಡೆದ ಮೇಲೆ ಪುನಃ ಪೂರ್ವ ಪದಕ್ಕೆ ಹಿಂದಿರುಗಲು ಸಾಧ್ಯವಾಗುವುದಿಲ್ಲ.

ಕಸ್ಯ ನೂಂ ಕತಮಸ್ಸಾಮೃತಾನಾಂ ಮನಾಮಹೇ ಚಾರೂ ದೇವಸ್ಯ ನಾಮ

ಯಾವ ಮಧುರ ಹೆಸರಿನ ಚಿಂತನೆಯನ್ನು ನಾವು ಮಾಡೋಣ? ***ಕೊ ನೊ ಮಹ್ಯಾ ಅದಿತಯೇ ಪುರ್ನದಾತ್*** – ನನಗೆ ಈ ಮಹಾನ್ ಅದಿತಿಯ ಬಳಿ ಯಾರು ತಲುಪಿಸುವವರು?

ಶೂನಃ ಶೇಪೋ ವ್ಯಾವ್ಹದ್ ಗೃಭೀತಃ ತ್ರಿಪ್ವಾದಿತ್ಯಂ
ದ್ರುಪದೇಶು ಬದ್ಧಃ
ಅವೈನಂ ರಾಜಾ ವರುಣಃ ಸ ಸೃಜ್ಯಾತ್ ವಿದ್ವಾನ್ ಅದಬ್ಧೊ
ವಿ ಮುಮೋಕ್ತು ಪಾಶಾನ್

ಜೀವವು ವರುಣದೇವನ ಮೂರು ಪಾಶಗಳಿಂದ ಬಂಧಿತನಾಗಿದ್ದಾನೆಂದು ವೇದದಲ್ಲಿ ವರ್ಣನೆಯಿದೆ. ಈ ಪಾಶಗಳಿಂದ ತನ್ನನ್ನು ಮುಕ್ತನನ್ನಾಗಿ ಮಾಡು ಎಂದು ಜೀವವು ವರುಣದೇವನನ್ನು ಪ್ರಾರ್ಥಿಸುತ್ತದೆ.

ಇಂದು ಪರಮಾರ್ಥ ಸಾಧಕರಾದ ನಾವೆಲ್ಲರೂ ಜನಸೇವೆ ಮತ್ತು ಸರ್ವಭೂತ ಸೇವೆ ಮಾನವನ ಕರ್ತವ್ಯವೆಂದು ಮತ್ತು ಅದೇ ಅವನ ಮಹಾನ್ ಯಜ್ಞವೆಂಬ ವಿಚಾರದ ಆಧಾರದಿಂದ ನಿಂತಿದ್ದೇವೆ. ಋಗ್ವೇದದಲ್ಲಿ ಕೂಡ ಈ ವಿಚಾರದ ಬಗ್ಗೆ ಸ್ಪಷ್ಟವಾದ ನಿರ್ದೇಶ ಮತ್ತು ಆದೇಶವಿದೆ.

ಸ್ವಾದುಕ್ಷದ್ಮಾ ಯೋ ವಸತೌ ಸ್ಯೋನಕೃತ್
ಜೀವಯಾಜಂ ಯಜತೆ ಸೋಪಮಾ ದಿವಃ

ಮನೆಗೆ ಬಂದ ಮನುಷ್ಯನಿಗೆ ಮೃಷ್ಟಾನ್ನ ತಯಾರಿಸಿ ಉಣಿಸುತ್ತಾನೆ ಮತ್ತು ಅವನ ಇರುವಿಕೆಗಾಗಿ ಸುಖ ಸೌಕರ್ಯಗಳನ್ನು ಮಾಡುತ್ತಾನೆ. ಹೀಗೆ ಅವನು ಜೀವನ ಯಜ್ಞದ ಯಜನ ಮಾಡುತ್ತಾನೆ.

ವಾಶ್ರಾ ಇವ ಧೇನವಃ ಸ್ಯಂದಮಾನಾಃ ಅಂಜಃ
ಸಮುದ್ರಮವ ಜಗ್ಮುರಾಪಃ

ವೈದೀಕ ಋಷಿಗಳಿಗೆ ಬೆಟ್ಟಗುಡ್ಡಗಳಿಗಿಂತ ಸ್ವಚ್ಛ ಜಲಧಾರೆಗಳನ್ನೂ, ಕಲಕಲ ಎಂದು ನಿನಾದಿಸುತ್ತು ಓಡುತ್ತಾ ಬರುವ ನದಿಗಳನ್ನೂ ನೋಡಿ ಕರುಗಳಿಗಾಗಿ ಹಾಲು ತುಂಬಿದ ಸ್ತನಗಳನ್ನು ತೂಗುತ್ತಾ ಬರುವ ಪ್ರೇಮಮಯಿ ಹಸುಗಳ ನೆನಪುಂಟಾಗುತ್ತದೆ. ಆಗ ಋಷಿಯು ನದಿಗಳಿಗೆ "ಹೇ ದೇವಿ! ಹಾಲಿನಂತೆ ಪವಿತ್ರ, ಪಾವನ, ಮಧುರ ಜಲವನ್ನು ತರುವಂಥ ಧೇನುವಂತಿದ್ದೀಯೆ. ಯಾವ ರೀತಿ ಕರುವನ್ನು ಬಿಡದೆ ಹಸು ಕಾಡಿನಲ್ಲಿ ಇರಲಾರದೋ ಅದೇ ರೀತಿ ನೀವು ನದಿಗಳೂ ಕೂಡ ಪರ್ವತಗಳಲ್ಲಿ ಇರಲು ಸಾಧ್ಯವಾಗುವುದಿಲ್ಲ. ಪ್ರೀತಿಯ ಮಕ್ಕಳ ಭೇಟಿಗಾಗಿ ನೀವು ಸರಸರ ಓಡುತ್ತಾ ಬರುತ್ತೀರಿ – ವಾಶ್ರಾ ಇವ ಧೇನವಃ ಸ್ಯಂದಮಾನಾಃ.

* * *

ಗಾಂಧೀ ಪ್ರತಿಮೆಯ ಪುನರಾಗಮನ

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

ಪಟ್ಟಣಕ್ಕೆ, ಮುಖ್ಯಮಂತ್ರಿಯವರು ನೀಡಲಿದ್ದ ಭೇಟಿ ಸಂಬಂಧದಲ್ಲಿ ಎಲ್ಲ ವ್ಯವಸ್ಥೆಯೂ ಆಗಿತ್ತು. ಹಿರಿಯ ಸದಸ್ಯರು, ಪ್ರಾಂಶುಪಾಲರೂ ಹನುಮ ಸ್ವಾಮಿಯ ಮಂದಿರವನ್ನು ಸೊಗಸಾಗಿ ಅಲಂಕರಿಸಿದ್ದರು. ಪುರಸಭಾ ಭವನ ಮತ್ತು ಅದರ ಆಸು–ಪಾಸಿನ ಪ್ರದೇಶಗಳು ಅಚ್ಚುಕಟ್ಟಾಗಿ, ಅಂದವಾಗಿ ಅಣಿಯಾಗಿದ್ದವು. ಪಟ್ಟಣದ ಪ್ರವೇಶಾರಂಭದಲ್ಲಿ ಕಮಾನಿನ ಒಂದು ಮಹಾ ದ್ವಾರವನ್ನು ನಿರ್ಮಿಸಿ ನಾನಾ ಬಣ್ಣದ ಕಾಗದ ಮತ್ತು ಪತಾಕೆಗಳಿಂದ ಶೃಂಗರಿಸಲಾಗಿತ್ತು. ಅದಕ್ಕೆ ಅನುಸಂಬಂಧಿಯಾಗಿ, "ಮುಖ್ಯ ಮಂತ್ರಿಯವರಿಗೆ ಹಾರ್ದಿಕ ಸ್ವಾಗತ"ವೆಂದು ಎದ್ದು ಕಾಣುವಂತೆ ಬರೆಯಿಸಲಾಗಿದ್ದ ಬ್ಯಾನರ್ ಕಟ್ಟಲಾಗಿತ್ತು.

ಮುಖ್ಯ ಮಂತ್ರಿಯವರು ಬೆಳಿಗ್ಗೆ ೯–೦೦ಕ್ಕೆ ಆಗಮಿಸುವವರಿದ್ದರು. ಆದ್ದರಿಂದ ಪುರಸಭಾಧ್ಯಕ್ಷರು ತಮ್ಮ ಪುರಸಭಾ ಸದಸ್ಯರೊಂದಿಗೆ ಹೂಮಾಲೆ ಸಹಿತ ಮಹಾದ್ವಾರದ ಬಳಿ ಬಂದು ನಿಂತರು. ಸಾರ್ವಜನಿಕರ ಸಂಖ್ಯೆಯೂ ಗಮನಾರ್ಹವಾಗಿತ್ತು.

ಗಂಟೆ ೯–೦೦ ಆಗುತ್ತಿದ್ದಂತೆ ಸುಮಾರು ಸಂಖ್ಯೆಯ ಕಾರುಗಳು ಬಂದವು. ಅವುಗಳ ಮಧ್ಯ ಭಾಗದಲ್ಲಿ ಮುಖ್ಯ ಮಂತ್ರಿಯವರ ಕಾರು – ಕೆನೆಬಣ್ಣದ ಕಾರು, ಮುಂಭಾಗದಲ್ಲಿ ಹಾರಾಡುವ ತ್ರಿವರ್ಣ ಧ್ವಜ, ಮೇಲ್ಗಡೆ ಒಂದೇ ಸಮನೆ ಸುತ್ತುವ ಕೆಂಬಣ್ಣದ ದೀಪ ಬಂದು ನಿಂತಿತು.

ಬಾಗಿಲು ತೆರೆಯುತ್ತಿದ್ದಂತೆಯೇ ಕೆಳಗಿಳಿದ ಮುಖ್ಯ ಮಂತ್ರಿಯವರು ಮುಗುಳ್ನಗುತ್ತ ಕೈ ಜೋಡಿಸಿದರು. ಪುರಸಭಾಧ್ಯಕ್ಷರು ಮುಂದೆ ಹೋಗಿ ಮಾಲಾರ್ಪಣೆ ಮಾಡಿ ಪಟ್ಟಣಕ್ಕೆ ಸ್ವಾಗತಿಸಿದರು.

ಸಾಂಪ್ರದಾಯಿಕ ಸ್ವಾಗತ ಮುಗಿದ ಮೇಲೆ, ಮುಖ್ಯ ಮಂತ್ರಿಯವರು ಹನುಮಸ್ವಾಮಿಯ ದೇವಾಲಯಕ್ಕೆ ತೆರಳಿದರು. ಅವರ ಹಿಂದೆ ಪುರಸಭಾಧ್ಯಕ್ಷರೂ ಸೇರಿದಂತೆ ಸ್ಥಳೀಯರು ಕಾರುಗಳಲ್ಲಿ ಹೊರಟರು.

ದೇವಸ್ಥಾನದ ಚೌಕಕ್ಕೆ ಮುಖ್ಯ ಮಂತ್ರಿಯವರು ಆಗಮಿಸುತ್ತಿದ್ದಂತೆ, ಸಿಡಿಮದ್ದುಗಳ ಸೊಗಸಾದ ಪ್ರದರ್ಶನವಿತ್ತು. ಅದು ಮುಗಿಯುತ್ತಿದ್ದಂತೆ ತಾಳವಾದ್ಯ, ತಮಟೆ, ಕೊಂಬು, ಕಹಳೆಗಳ ಸಾಂಪ್ರದಾಯಿಕ ಸ್ವಾಗತ ಪ್ರಾರಂಭವಾಯಿತು. ಅದು ಹಾಗೆಯೇ ಮುಂದುವರಿಯುತ್ತಿರುವಾಗ, ಆ ಒಂದು ಮೂಲೆಯಿಂದ ಸಾಲಂಕೃತವಾಗಿದ್ದ ದೇವಸ್ಥಾನದ ಗಜರಾಜ ಮಾವಟಿಗನ ಅಂಕೆಯಲ್ಲಿ ಮುಂದಕ್ಕೆ ಬಂದಿತು. ತನ್ನ ಸೊಂಡಲಿನಲ್ಲಿ ಕೆಂಪು ಗುಲಾಬಿಯ ಹಾರವನ್ನೂ ತಂದಿತ್ತು. ಮುಖ್ಯ ಮಂತ್ರಿಯವರು, ಪುರಸಭಾಧ್ಯಕ್ಷರು, ಪ್ರಾಂಶುಪಾಲರು, ಹಿರಿಯ ಸದಸ್ಯರು ಮತ್ತು ಹಿಂಬೆಂಚಿನ ಸದಸ್ಯರು ಎಲ್ಲರೂ ಸಾಲಾಗಿ ನಿಂತಿದ್ದರು. ಮುಖ್ಯ ಮಂತ್ರಿಯವರು ಇವರೆಲ್ಲರ ಮಧ್ಯೆ ನಿಂತಿದ್ದರು. ಗಜರಾಜ ಅವರಿಗೆ ಗುಲಾಬಿ ಹಾರವನ್ನು ಹಾಕಬೇಕೆಂದು ವ್ಯವಸ್ಥೆಯಾಗಿತ್ತು. ಆದರೆ ಮಾವಟಿಗನಿಗೆ ಮತ್ತು ಗಜರಾಜನಿಗೆ ಹಿಂಬೆಂಚಿನ ಸದಸ್ಯರು ಮಾತ್ರವೆ ಪರಿಚಯವಿದ್ದುದರಿಂದ ಅವರತ್ತ ನಡೆದು

ಅವರಿಗೆ ಮಾಲಾರ್ಪಣೆ ಮಾಡಲೆಂಬಂತೆ ನಿಧಾನವಾಗಿ ಸೊಂಡಿಲೆತ್ತಲಾರಂಭಿಸಿತು. ಏನಾಗಲಿದೆಯೆಂದು ಗ್ರಹಿಸಿದ ಅವರು ಪ್ರೀತಿಯಿಂದ ಸೊಂಡಿಲನ್ನು ಸವರುತ್ತ ಮುಖ್ಯ ಮಂತ್ರಿಯವರ ಕಡೆಗೆ ಗಜರಾಜನನ್ನು ತಿರುಗಿಸಿದರು. ಗಜರಾಜ ಅವರಿಗೆ ಮಾಲಾರ್ಪಣೆ ಮಾಡಿ, ಗೌರವ ಸೂಚಕವಾಗಿ ಸೊಂಡಿಲನ್ನು ಮೇಲೆತ್ತಿತು. ಮುಖ್ಯ ಮಂತ್ರಿಯವರಿಗೆ ಸಂತೋಷವಾಯಿತು, ಹಾಗೆಯೇ ಸೇರಿದ್ದ ಜನಸಮುದಾಯಕ್ಕೂ ಸಹ.

ವ್ಯವಸ್ಥಾಪಕ ಧರ್ಮದರ್ಶಿಯಾಗಿದ್ದ ಹಿರಿಯ ಸದಸ್ಯರು ಮುಖ್ಯ ಮಂತ್ರಿಯವರನ್ನು ದೇವಸ್ಥಾನಕ್ಕೆ ಬರಮಾಡಿಕೊಂಡರು. ಸ್ವಾಮಿ ಹನುಮಂತನ ಮೂರ್ತಿಯನ್ನು ಹೂವು ಮತ್ತು ಹೂಮಾಲೆಗಳಿಂದ ಬಹಳ ಶೋಭಾಯಮಾನವಾಗಿ ಅಲಂಕರಿಸಲಾಗಿತ್ತು. ಮುಖ್ಯ ಮಂತ್ರಿಯವರು ಮತ್ತಿತರರು ಮೂರ್ತಿಯ ಮುಂದೆ ನಿಂತು ಪ್ರಾರ್ಥನೆ ಸಲ್ಲಿಸಿದರು. ಪಜಾರಿಯವರು ಸ್ವಾಮಿ ಹನುಮನನ್ನು ಕುರಿತಾದ ಸ್ತೋತ್ರಗಳನ್ನು ಪಠಿಸುತ್ತ ಮಂಗಳಾರತಿ ಮಾಡಿದರು. ಆಮೇಲೆ ಮೂರ್ತಿಯ ಮೇಲಿದ್ದ ಹೂಮಾಲೆಯನ್ನು ತೆಗೆದು ಶುಭಾಶಯಗಳೊಂದಿಗೆ ಮುಖ್ಯ ಮಂತ್ರಿಯವರಿಗೆ ಹಾಕಿದರು. ಅವರು ಒಂದು ನೂರು ರೂ. ನೋಟನ್ನು ಮಂಗಳಾರತಿ ತಟ್ಟೆಗೆ ಹಾಕಿದರು. ಅಲ್ಲಿಗೆ ದೇವಸ್ಥಾನದ ಭೇಟಿಯ ಕಾರ್ಯಕ್ರಮ ಮುಗಿದಂತಾಯಿತು.

ಅದಾದ ಮೇಲೆ ಮುಖ್ಯ ಮಂತ್ರಿಯವರು ಪುರಸಭಾ ಭವನಕ್ಕೆ ಹಿಂದಿರುಗಿದರು. ಪುರಸಭಾಧ್ಯಕ್ಷರು ಮುಖ್ಯ ಮಂತ್ರಿಯವರಿಗೆ ಪುಷ್ಪಗುಚ್ಛವನ್ನು ನೀಡಿ ಸ್ವಾಗತ ಕೋರಿದರು.

ಆಸೀನರಾದ ಮುಖ್ಯ ಮಂತ್ರಿಯವರು ಹುಡುಕುನೋಟದಿಂದ ಸುತ್ತಲೂ ನೋಡಲರಂಭಿಸಿದರು. ಹಾಗೇ ನೋಡುತ್ತಿರುವಾಗ ಸಭಾ ಭವನದ ಬಾಗಿಲಿಗೆ ನೇತುಹಾಕಿದ್ದ ಒಂದು ಘೋಷಣಾ ಫಲಕ ಅವರ ಕಣ್ಣಿಗೆ ಕಂಡುಬಂದಿತು. ಅದರಲ್ಲಿ ".....ಪಿತ ಎಂದಿರುವುದನ್ನು ಸಾಧಾರಣವಾಗಿ ಖಾಲಿಯಿರುವ ಜಾಗವನ್ನು ತುಂಬಿದ ಯಾರಿಗೇ ಆಗಲಿ ೫೦೦೦ರೂ. ನಗದು ಬಹುಮಾನ ನೀಡಲಾಗುವುದು" ಎಂದಿತ್ತು.

ಮುಖ್ಯ ಮಂತ್ರಿಯವರು ಅದನ್ನು ಎಚ್ಚರಿಕೆಯಿಂದ ಒಂದು ಬಾರಿ, ಎರಡು ಬಾರಿ, ಮೂರು ಬಾರಿ ಓದಿಕೊಂಡರು. ಆದರೂ ಏನೂ ತಿಳಿಯದ ಪ್ರಯುಕ್ತ ಅದರ ಹಿನ್ನೆಲೆ-ಔಚಿತ್ಯಗಳೇನು? ಎಂದು ಪುರಸಭಾಧ್ಯಕ್ಷರನ್ನು ಮೆಲ್ದನಿಯಲ್ಲಿ ಕೇಳಿದರು.

ಗಾಂಧೀ ಮೈದಾನದಲ್ಲಿ ಭೂಮಿ ಪೂಜಾ ಕಾರ್ಯಕ್ರಮವನ್ನು ನೆರವೇರಿಸಿದ್ದು, ಮಾರನೆಯ ದಿನ ಭೂಮಿಯನ್ನು ಶೋಧಿಸಿದಾಗ ಪ್ರತಿಮೆ ದೊರಕಿದ್ದು, ಅದರ ಪಾದ ಪೀಠದ ಮೇಲೆ- ಮಹಾತ್ಮಾ ಗಾಂಧಿ......ಪಿತ ಎಂದು ಕೆತ್ತನೆ ಇದ್ದುದು, ಅದನ್ನು ಅನುಸರಿಸಿ ನಡೆದ ಎಲ್ಲ ಪ್ರಯತ್ನ ವಿದ್ಯಮಾನಗಳನ್ನು ಸಂಕ್ಷೇಪಿಸಿದ ಅಧ್ಯಕ್ಷರು "ಅಖೈರಾಗಿ ತಮ್ಮ ಸೂಚನೆಯಂತೆಯೇ ಸದರಿ ಪ್ರತಿಮೆಯನ್ನು ರಾಜಧಾನಿಗೆ ರವಾನಿಸಿದ್ದಾಯಿತು. ಪ್ರತಿಮೆಯಂತೂ ನಮ್ಮಿಂದ ಕಣ್ಮರೆಯಾಯಿತು, ಅದಕ್ಕೆ ಮೊದಲು ನೂರಾರು ಮಂದಿ ಬಂದು ಅದನ್ನು ನೋಡಿಕೊಂಡು ಹೋದರು, ಆದರೆ ಅದರ ಸಂಬಂಧದ ರಹಸ್ಯ ಮಾತ್ರ ಹಾಗೆಯೇ ಉಳಿದಿದೆ" ಎಂದು ವಿನಮ್ರರಾಗಿ ಒಪ್ಪಿಸಿದರು.

ಮುಖ್ಯ ಮಂತ್ರಿಯವರ ಮುಖ ಕೆಂಪಾಗಿ ಕಣ್ಣುಗಳು ಅರಳಿದವು. ಅವರ ಮನಸ್ಥಿತಿ ಏರುಪೇರಾದಂತೆ ಕಂಡಿತು. ತನ್ನೆಲ್ಲ ಭಾವನೆ-ಉದ್ವೇಗಗಳನ್ನು ನಿಗ್ರಹಿಸಿಕೊಂಡು "....ಪಿತ" ಎಂಬುದನ್ನು ತುಂಬ ಬಲ್ಲವರು ಈ ಪಟ್ಟಣದಲ್ಲಿ ಯಾರೊಬ್ಬರೂ ನಿಮಗೆ ದೊರಕಲಿಲ್ಲವೇ?" ಎಂದು ಪಿಸುಮಾತಿನಲ್ಲಿ ಕೇಳಿದರು.

“ಇಲ್ಲ ಸಾರ್, ಒಂದೇ ಒಂದು ಪಿಳ್ಳೆಯೂ ಕಂಡು ಬರಲಿಲ್ಲ. ಇನ್ನು ನನ್ನ ಬಗೆಗೆ ಹೇಳುವುದಾದರೆ, ತಮಗೂ ತಿಳಿದಿರಬಹುದು. ನಾನೊಬ್ಬ ಅನಿವಾಸಿ ಭಾರತೀಯ. ಹುಟ್ಟಿದ್ದು, ಬೆಳೆದಿದ್ದು ಹಾಗೆಯೇ ವಿದ್ಯಾಭ್ಯಾಸ ಮಾಡಿದ್ದೂ ಸಂಯುಕ್ತ ಸಂಸ್ಥಾನಗಳಲ್ಲಿ. ನನ್ನ ತಾತ ತಮ್ಮ ಪ್ರಾರಂಭದ ವರ್ಷಗಳಲ್ಲಿ ಇಲ್ಲಿಂದ ದೇಶಾಂತರವಾದರು, ಈ ಮಹಾನ್ ದೇಶಕ್ಕೆ ಹಾಗೂ ಈ ದೇಶದ ಜನತೆಗೆ ಒಂದಿಷ್ಟು ಸೇವೆ ಸಲ್ಲಿಸಬೇಕೂಂತ ನಾನು ಬಂದೆ, ಇಂಡಿಯಾ ಏನು? ಅದರ ಜನ-ಈಗಿನ ಜನ ಎಂತಹವರು ಎಂಬುದನ್ನು ನಿಧಾನವಾಗಿ ತಿಳಿಯುತ್ತಿದ್ದೇನೆ, ನಿಜಕ್ಕೂ ರೋಚಕ ಅನುಭವ, ದಿಗ್ಭ್ರಮೆ ಹಿಡಿಸುವಂತಹುದೂ ಹೌದು!” ಎಂದು ಅಧ್ಯಕ್ಷರು ತೋಡಿಕೊಂಡರು.

ಪುರಸಭಾಧ್ಯಕ್ಷರು ಘಾಸಿಗೊಳಗಾಗಿರುವುದನ್ನು ಗಮನಿಸಿ, ಪ್ರಶಂಸಿಸಿದ ಮುಖ್ಯ ಮಂತ್ರಿಯವರು “ನೀವು ಈ ದೇಶಕ್ಕೆ, ಇಲ್ಲಿನ ಇತಿಹಾಸ, ಸಂಸ್ಕೃತಿಗಳಿಗೆ ಹೊಸಬರಾದರೂ, ಇಲ್ಲಿರುವ ಈ ಪುರಸಭಾ ಪಿತೃಗಳೆನಿಸಿದವರು ಈ ರಾಷ್ಟ್ರದ ಪ್ರಜೆಗಳು, ವಾರಸುದಾರರು, ಇವರಾದರೂ ನಿಮಗೆ ಮಾಹಿತಿ ನೀಡಿ ಮಾರ್ಗದರ್ಶನ ಮಾಡಬಹುದಿತ್ತು, ಇದು ನಿಜಕ್ಕೂ ವಿಚಿತ್ರ-ವಿಪರ್ಯಾಸ!” ಎಂದು ಬೇಸರಿಸಿದರು.

“ಸರ್, ಪುರಸಭಾ ಪಿತೃಗಳೆಲ್ಲರೂ ಇಲ್ಲೇ ಇದ್ದಾರೆ, ಮಹಾತ್ಮಾ ಗಾಂಧೀ ಬಗ್ಗೆ ಇವರಿಗೇನಾದರೂ ತಿಳಿದಿದೆಯೆ ಅಂತ ತಾವೇ ಕೇಳಿ ನೋಡಿ, ಈವೊತ್ತು ತಾವು ಪುನರ್ ನಾಮಕರಣ ಮಾಡಲಿರುವ ಮೈದಾನಕ್ಕೆ “ಗಾಂಧೀ ಮೈದಾನ” ಅಂತ ಹೆಸರು ಹೇಗೆ ಬಂದಿತು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಒಂದು ಸಮಿತಿಯನ್ನೂ ರಚಿಸಿದ್ದೆ ಸರ್, ಅದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಯಾರೊಬ್ಬರಿಗೂ ಆ ಮಹಾತ್ಮಾ ಗಾಂಧೀ ಯಾರು, ಅವರ ಮಗ ಅಥವಾ ಮಗಳು ಅಥವಾ ಮಕ್ಕಳು ಯಾರು ಎಂಬುದೂ ತಿಳಿದಿಲ್ಲ!” ಅಧ್ಯಕ್ಷರು ಇನ್ನಷ್ಟು ವಿವರಿಸಿದರು.

“ಹೌದಾ? ಅಂದಹಾಗೆ ಅವರ ಮಗ ಅಥವಾ ಮಗಳು ಯಾರು ಎಂಬುದನ್ನು ಯಾಕೆ ತಿಳಿಯಬಯಸುತ್ತೀರಿ?” ಮುಖ್ಯ ಮಂತ್ರಿಯವರು ತಿಳಿಯ ಬಯಸಿದರು.

“ಯಾರೂ ಇಲ್ಲ ಸರ್, ಈ ಮಹಾತ್ಮಾ ಗಾಂಧಿಯ ವಂಶಸ್ಥರು ಯಾರಾದರೂ ಇದ್ದಾರೆಯೇ ಎಂಬುದನ್ನು ತಿಳಿಯಬೇಕು, ಆ ಮೂಲಕವಾದರೂ ಪಾದಪೀಠದ ಆ ಪದಪುಂಜವನ್ನು “...ಪಿತ” ಎಂಬುದನ್ನು ಪೂರ್ಣ ಮಾಡಲಾದೀತು ಎಂಬ ಆಶಯ ನನ್ನದು ಸರ್!” ಎಂದು ಪುರಸಭಾಧ್ಯಕ್ಷರು ಸ್ಪಷ್ಟೀಕರಿಸಿದರು.

“ ದುರದೃಷ್ಟ!”ವೆಂಬಂತೆ ಮುಖ್ಯ ಮಂತ್ರಿಯವರು ಹಣೆಯ ಮೇಲೆ ಕೈ ಹೊತ್ತು ಕುಳಿತಿದ್ದು ಮರುಕ್ಷಣದಲ್ಲಿಯೇ ಏನಾದರೂ ಮಾಡಬೇಕೆಂದು ನಿರ್ಧರಿಸಿದರು. ಕುಳಿತಿದ್ದ ಕಡೆಯಿಂದ ಎದ್ದು ತಮ್ಮನ್ನು ಹಿಂಬಾಲಿಸುವಂತೆ ಪುರಸಭಾಧ್ಯಕ್ಷರಿಗೆ ತಿಳಿಸಿ ಹೊರಟರು. ಅಧ್ಯಕ್ಷರ ಕೊಠಡಿಗೆ ಹೋದ ಮುಖ್ಯ ಮಂತ್ರಿಯವರು ಮೆಲುದನಿಯಲ್ಲಿ!

“ಪುರಸಭಾ ಸದಸ್ಯರು ಯಾರೂ ಪ್ರತಿಮೆಯನ್ನು ಗುರುತಿಸಲಾರದೆ ಹೋದರು ಎಂದಿರಿ- ಇದು ನಿಜವೆ? ಖಚಿತವಾಗಿ ಹೇಳಿ!”

“ಹೌದು ಸರ್, ಆ ಪ್ರತಿಮೆಯ ಪಾದಪೀಠದ ಮೇಲೆ “ಮಹಾತ್ಮಾ ಗಾಂಧಿ” ಎಂದೂ ಇತ್ತು!” ಅಧ್ಯಕ್ಷರು ಮುಗ್ಧವಾಗಿ ಹೇಳಿದರು.

“ ಆ ಮಹಾತ್ಮಾ ಗಾಂಧೀ ಯಾರು ಎಂಬುದನ್ನು ಅವರ್‍ಯಾರೂ ಖಚಿತವಾಗಿ ಹೇಳಲಿಲ್ಲವೆ?”

"ಇಲ್ಲ ಸರ್!"

"ಆ ಅಪೂರ್ಣ ಪದಪುಂಜ "......ಪಿತ" ಎಂದಿದ್ದುದನ್ನು ಯಾರೂ ಪೂರ್ಣ ಮಾಡಲಿಲ್ಲ ಎಂದಿರಾ?"

"ಹೌದು ಸರ್! ಯಾರೊಬ್ಬರೂ ಮಾಡಲಿಲ್ಲ!"

"ಪುರಸಭಾ ಪಿತೃಗಳನ್ನು ಒಳಗೊಂಡಂತೆ?"

"ಹೌದು ಸರ್!"

"ಮಹಾ ವಿದ್ಯಾಲಯದ ಪ್ರಾಂಶುಪಾಲರು?"

"ಇಲ್ಲ ಸರ್, ಇಂಡಿಯಾ ಇತಿಹಾಸದ ಪ್ರಾರಂಭಿಕ ಯುಗದಲ್ಲಾಗಲಿ, ಮಧ್ಯ ಯುಗದಲ್ಲಾಗಲಿ "ಮಹಾತ್ಮಾ ಗಾಂಧೀ" ಎಮಬ ಹೆಸರಿನ ಯಾವ ಸಂತನೂ ಕಂಡು ಬರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದರು ಸರ್!"

"ಒಳ್ಳೆಯದು! ಈ ಗಾಂಧೀ ಮೈದಾನಕ್ಕೆ ಇಲ್ಲಿನ ಹಿರಿಯ ಸದಸ್ಯರು ತಮ್ಮ ತಂದೆಯ ಹೆಸರನ್ನಿರಿಸಬೇಕೆಂದು ಬಯಸಿದ್ದಾರೆ, ಪ್ರಯತ್ನಿಸಿದ್ದಾರೆ-ಅಲ್ಲವೆ?"

"ಹೌದು ಸರ್, ಹಾಗೆ ಆಗಬೇಕೂಂತ ಈ ಮೊದಲಿನ ಪ್ರಸ್ತಾವನೆ ಇತ್ತು ಸರ್, ಆದರೆ ಈಗದು ಬದಲಾಗಿದೆ- ಯಾಕೆ ಅಂತಂದ್ರೆ, ಪುರಸಭಾ ಸದಸ್ಯರೊಬ್ಬರಿಂದಲೇ ಆ ಪ್ರಸ್ತಾವನೆಗೆ ವಿರೋಧ ಕಂಡುಬಂದಿತು. ಆ ವಿರೋಧಿಯೊಂದಿಗೇ ಈಗ ಒಂದು ಸಂಧಾನ ಮಾಡಿಕೊಂಡಿದ್ದಾರೆ. ಅದರ ಪ್ರಕಾರ ಮೈದಾನದ ಹೆಸರನ್ನು ಗಾಂಧೀ ಮೈದಾನ ಅಂತ ಉಳಿಸಿಕೊಳ್ಳಬೇಕು, ಅದರ ಜೊತೆಗೆ ಹಿರಿಯ ಸದಸ್ಯರ ತಂದೆ ಹೆಸರು "ಪಿಣ್ಣು ಶೇಠ್" ಎಂಬುದನ್ನು ಉಪಸರ್ಗವನ್ನಾಗಿ ಸೇರಿಸಿಕೊಂಡು ಕರೆಯಬೇಕು ಅಂತ ತೀರ್ಮಾನಕ್ಕೆ ಬಂದಿದ್ದಾರೆ".

"ಅಂದರೆ- ಗಾಂಧೀ ಮೈದಾನ "ಪಿಣ್ಣು ಶೇಠ್ ಗಾಂಧೀ ಮೈದಾನ" ಅಂತ ಆಗುತ್ತದೆ ಅಲ್ಲವೆ?"

"ಹೌದು ಸರ್, ತಾವು ಹೇಳಿದ ಹಾಗೆ ಅದು "ಪಿಣ್ಣು ಶೇಠ್ ಗಾಂಧೀ ಮೈದಾನ" ಅಂತ ಆಗುತ್ತದೆ!"

"ಆಗಲಿ, ಈಗ ಹೇಳಿ-ಆ ಪಿಣ್ಣು ಶೇಠ್ ಅನ್ನೋರು ಯಾರು, ಏನಾಗಿದ್ದರು?"

"ಅವರೊಬ್ಬ ಪಾನ್-ಬೀಡಾ ವ್ಯಾಪಾರಿ ಸರ್, ಪುರಸಭಾ ಮೀನಿನ ಮಾರುಕಟ್ಟೆಗೆ ಹೊಂದಿಕೊಂಡಂತೆ ಅವರ ಅಂಗಡಿ ಇತ್ತಂತೆ!"

"ಅವರು ಏನಾಗಿದ್ದರು? ಸಮಾಜ ಕಾರ್ಯಕರ್ತರೋ, ಸ್ವಾತಂತ್ರ್ಯ ಹೋರಾಟಗಾರರೋ?"

"ಯಾವುದೂ ಇಲ್ಲ!"

"ಆ ಮೀನಿನ ಮಾರುಕಟ್ಟೆಗೆ ಏನಾದರೂ ಹೆಸರಿದೆಯೆ?"

" ಏನೂ ಇಲ್ಲ ಸರ್!"

"ಒಳ್ಳೆಯದು ನಡೆಯಿರಿ ಹೋಗೋಣ!" ಎನ್ನುತ್ತ ಮುಖ್ಯ ಮಂತ್ರಿಗಳು ಮೇಲೆದ್ದರು.

ಹಿಂದಿರುಗಿ ಬಂದ ಮುಖ್ಯ ಮಮತ್ರಿಯವರು ಗಂಭೀರವಾಗಿ ಆಸೀನರಾದರು, ಪುರಸಭಾಧ್ಯಕ್ಷರು ವಿನೀತರಾಗಿ ಬಂದು ಕುಳಿತರು. ಮುಖ್ಯ ಮಂತ್ರಿಯವರು ಪುರಸಭಾಧ್ಯಕ್ಷರ ಕಿವಿಯಲ್ಲಿ -"ಇಗ ಸಭೆಯನ್ನು ಉದ್ದೇಶಿಸಿ ನಾನು ಮಾತಾಡಲಿದ್ದೇನೆ-ಇದನ್ನು ದಯವಿಟ್ಟು ಸಭೆಗೆ ತ್ರಿಳಿಸಿರಿ" ಎಂದರು. ಅದರಂತೆ ಅಧ್ಯಕ್ಷರು ಎದ್ದು ನಿಂತು "ಸನ್ಮಾನ್ಯ ಸಭಾಸದರೇ ನಮ್ಮ

ಸನ್ಮಾನ್ಯ ಮುಖ್ಯ ಮಂತ್ರಿಯವರು ನಮ್ಮೆಲ್ಲರನ್ನು ಕುರಿತು ಮಾತನಾಡಲು ಅಪೇಕ್ಷಿಸಿದ್ದಾರೆ. ಆದ್ದರಿಂದ ಅವರು ಹೇಳುವುದನ್ನು ಗಮನವಿಟ್ಟು ಕೇಳಬೇಕು ಎಂದು ವಿನಂತಿಸಿಕೊಳ್ಳುತ್ತೇನೆ!" ಎಂದು ಕೇಳಿಕೊಂಡರು.

ಕಾಲಹರಣ ಮಾಡದೆ, ಮುಖ್ಯ ಮಂತ್ರಿಯವರು ಎದ್ದು ನಿಂತು ಮಾತನಾಡಲಾರಂಭಿಸಿದರು.

'ಮಾನ್ಯ ಪುರಸಭಾಧ್ಯಕ್ಷರೇ ಮತ್ತು ನನ್ನ ಪ್ರೀತಿಯ ಸ್ನೇಹಿತರೇ,

ಕೆಲವು ದಿನಗಳ ಹಿಂದೆ, ಈ ಪುರಸಭಾ ಮೈದಾನದಲ್ಲಿ ಅಗೆಯುತ್ತಿದ್ದಾಗ ಒಂದು ಪ್ರತಿಮೆ ಕಂಡು ಬಂದಿತೆಂದು ನನಗೆ ತಿಳಿಯಿತು. ಈ ಸ್ಥಳದ ಕೆಲವು ಮಂದಿಯ ಒಂದು ನಿಯೋಗವು ನನ್ನನ್ನು ಭೇಟಿ ಮಾಡಿ-ಸಿಕ್ಕಿರುವ ಆ ಪ್ರತಿಮೆ ಗತಕಾಲದ್ದೆಂದೂ, ತುಂಬಾ ಬೆಲೆಬಾಳುವುದೆಂದೂ, ಅಂಥಾದ್ದನ್ನು ಕಾಪಾಡಲು ಸೂಕ್ತವಾದ ಭದ್ರತಾ ವ್ಯವಸ್ಥೆ ಇಲ್ಲವೆಂದೂ ನನಗೆ ತಪ್ಪು ಮಾಹಿತಿ ನೀಡಿದರೆಂದು ತಿಳಿಸಲು ವಿಷಾದಿಸುತ್ತೇನೆ! ಸದರಿ ನಿಯೋಗ ನನಗೆ ನೀಡಿದ ಮಾಹಿತಿಯ ಹಿನ್ನೆಲೆ ಮತ್ತು ಆಧಾರದ ಮೇಲೆ, ಪ್ರತಿಮೆಯನ್ನು ರಾಜಧಾನಿಗೆ ಸಾಗಿಸಲು ನಾನೇ ಆದೇಶ ನೀಡಿದೆ ಎಂಬುದೂ ನಿಜ. ಪ್ರತಿಮೆಯನ್ನು ರಾಜಧಾನಿಗೆ ತಂದು ಬಿಚ್ಚಿದಾಗ, ನಾನು ಹಾಜರಿದ್ದು ನೋಡಿದೆ, ಆ ಪ್ರತಿಮೆ ಬೇರೆ ಏನೂ ಆಗಿರದೆ, ಯಾರದ್ದೋ ಆಗಿರದೆ ಮಹಾತ್ಮಾ ಗಾಂಧಿಯವರದ್ದೇ ಎಂದು ತಿಳಿದು ಬಹಳ ಸಂತೋಷವಾಯಿತು. ಹಾಗೆಯೇ ಆತಂಕ-ನಾಚಿಕೆಗಳೂ ಆದವು. ಕಳೆದ ಏಳೆಂಟು ದಶಕಗಳಷ್ಟು ಅಂದರೆ ೮೦-೯೦ ವರ್ಷಗಳ ಹಿಂದೆ ಈ ರಾಷ್ಟ್ರದಲ್ಲಿ ಆಗಿಹೋದ ಗಾಂಧೀಜಿ ಪ್ರತಿಮೆಯನ್ನು "ಗತಕಾಲದ್ದು" ಎಂದು ಯಾಕೆ ಹೆಸರಿಸಿದರು, ಇದರ ಒಳ ವಿದ್ಯಮಾನ ಏನು ಅಂತ ನನಗೆ ಅರ್ಥವಾಗುತ್ತಿಲ್ಲ!'

'ಇನ್ನು ಇಲ್ಲಿಗೆ ಬಂದ ಮೇಲೆ, ಆ ಘೋಷಣಾ ಫಲಕವನ್ನು ಓದಿ, ಕುತೂಹಲವುಂಟಾಗಿ ವಿವರಗಳನ್ನು ತಿಳಿದುಕೊಂಡೆ."....ಪಿತ" ಎಂದಿರುವ ಪದಪುಂಜವನ್ನು ಸದಸ್ಯರೂ ಸೇರಿದಂತೆ ಪಟ್ಟಣದಲ್ಲಿರುವ ಯಾರೊಬ್ಬರೂ ಪೂರ್ಣಗೊಳಿಸಲಾಗಲಿಲ್ಲವೆಂಬುದು ದುರದೃಷ್ಟ, ನಾಚಿಕೆಗೇಡು! ಮಹಾತ್ಮಾ ಗಾಂಧೀ "ರಾಷ್ಟ್ರ ಪಿತ" ಎಂಬುದು ವಿದ್ಯೆ ಕಲಿತ ಪ್ರತಿಯೊಬ್ಬರಿಗೂ ತಿಳಿದಿದೆ ಅಂತ ನನ್ನ ದೃಢವಾದ ನಂಬಿಕೆ. ಮತ್ತೊಮ್ಮೆ ಹೇಳುತ್ತೇನೆ, ದಯವಿಟ್ಟು ಕೇಳಿ, ಮಹಾತ್ಮಾ ಗಾಂಧೀ ರಾಷ್ಟ್ರ ಪಿತ! ಅವರ ವೈಯುಕ್ತಿಕ ನೆಲೆಗಟ್ಟಿನಲ್ಲಿ ಅವರಿಗೆ ಪುತ್ರ-ಪುತ್ರಿಯರಿದ್ದರಾದರೂ ಅವರನ್ನು ನಾವು ಎಕ್ಸ್ ಅಥವಾ ವೈ ನ ಪಿತ ಎಂದು ಎಂದೂ ಗುರುತಿಸಿಲ್ಲ! ರಾಷ್ಟ್ರ ಪಿತರೆಂದೇ ಗುರುತಿಸಿದ್ದೇವೆ, ಗೌರವಿಸಿದ್ದೇವೆ, ಯಾವ ಪುಣ್ಯಾತ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ತನ್ನ ಸರ್ವಸ್ವವನ್ನೂ ಸಮರ್ಪಿಸಿದರೋ ಅಂತಹ ವ್ಯಕ್ತಿಯ ಬಗ್ಗೆ ಈ ರೀತಿಯ ಪ್ರಕಟಣೆ ಮಾಡಿದ್ದು, ಅದಕ್ಕೆ ಪ್ರತಿಕ್ರಿಯೆ ಬಾರದೆ ಹೋದುದು ಅವಮಾನ, ಅಗೌರವ! ನನಗೆ ತಿಳಿದು ಬಂದ ಪ್ರಕಾರ ನಿಮ್ಮೀ ಅಧ್ಯಕ್ಷರು ಹುಟ್ಟಿದ್ದು, ಬೆಳೆದದ್ದು ಹಾಗೂ ವಿದ್ಯಾಭ್ಯಾಸ ಮಾಡಿದ್ದು ಇಲ್ಲಿ-ಭಾರತದಲ್ಲಿ ಅಲ್ಲ. ದೂರದ ಸಂಯುಕ್ತ ಸಂಸ್ಥಾನಗಳಲ್ಲಿ. ಅಂದಾಗ ಈ ರಾಷ್ಟ್ರಕ್ಕೆ, ಈ ರಾಷ್ಟ್ರದ ಇತಿಹಾಸಕ್ಕೆ ಮತ್ತು ಈ ರಾಷ್ಟ್ರದ ಸಾಂಸ್ಕೃತಿಕ ಪರಂಪರೆಗೆ ಇವರು ನಿಮ್ಮೆಲ್ಲರಿಗಿಂತ ದೂರದವರು, ಹೊಸಬರು, ಮೂರು ತಲೆಮಾರಿನಷ್ಟು ಅಂತರದವರು, ಓದಿ ತಿಳಿದುಕೊಂಡಿದ್ದರೂ ನಿಮಗೆ ಕನ್ನಡಿ ಹಿಡಿದಿದ್ದಾರೆ- ನೀವು ಪುರಸಭೆಯಲ್ಲಿ ಸಾಮಾನ್ಯ ಜನರ ಪ್ರತಿನಿಧಿಗಳಾಗಿ ಆಯ್ಕೆಯಾಗಿರುವ ಸದಸ್ಯ ಮಿತ್ರರು ರಾಷ್ಟ್ರ ಪಿತರ ಬಗ್ಗೆ ತಿಳಿದಿರಲೇಬೇಕಾಗಿತ್ತು! ಶ್ರೀ ಸಾಮಾನ್ಯರಿಂದ ಆಯ್ಕೆಯಾಗಿರುವ ಪ್ರತಿನಿಧಿಗಳು ತಮ್ಮ ಸಮಾಜಕ್ಕೆ ಕರ್ತವ್ಯ ಮತ್ತು

ಹೊಣೆಗಾರಿಕೆಗಳೆರಡನ್ನೂ ಹೊಂದಿರುತ್ತಾರೆ. ಈ ಮುಖ್ಯಾಂಶವನ್ನು ಮಾತ್ರವೇ ನಾವು ಗಮನದಲ್ಲಿಟ್ಟುಕೊಂಡು ಕಾರ್ಯೋನ್ಮುಖರಾಗಬೇಕು, ಹಾಗಲ್ಲದೆ ರಾಷ್ಟ್ರ ಪಿತನನ್ನು ಅಜ್ಞಾತ ಸಂತ ಅಥವಾ ಒಬ್ಬ ಯಃಕಶ್ಚಿತ್ ವ್ಯಕ್ತಿಯನ್ನಾಗಿ ಪರಿಗಣಿಸುವ ಹೊಲಸು ರಾಜಕೀಯದಲ್ಲಿ ನಾವು ನಮ್ಮನ್ನು ತೊಡಗಿಸಿಕೊಳ್ಳಬಾರದು!

ಇನ್ನು ರಾಷ್ಟ್ರ ಪಿತರ ಹೆಸರಿಗೇ ಸಂಬಂಧಿಸಿದಂತಿರುವ ಇಲ್ಲಿನ ಗಾಂಧೀ ಮೈದಾನದ ಹೆಸರನ್ನು ಬದಲಿಸುವ ಅಥವಾ ಪುನರ್ ನಾಮಕರಣ ಮಾಡುವ ಬಗ್ಗೆ ಹೇಳುವುದಾದರೆ, ಪ್ರಥಮತಃ ನನ್ನನ್ನು ನಾನು ದ್ರೋಹಿ ಎಂದು ಕರೆದುಕೊಂಡ ಹೊರತು ಮೈದಾನದ ಹೆಸರನ್ನು ಬದಲಿಸಲು ನನಗೆ ಧೈರ್ಯವುಂಟಾಗುವುದಿಲ್ಲ! ಆದ್ದರಿಂದ "ಗಾಂಧೀ ಮೈದಾನ" ಎಂಬುದಕ್ಕೆ ಹಿಂದೆ ಅಥವಾ ಮುಂದೆ ಏನನ್ನಾದರೂ ಸೇರಿಸಿ ಅಥವಾ ಇರುವುದನ್ನು ತುಂಡರಿಸಿ ಬದಲಿಸುವ ವಿಚಾರವನ್ನು ಮಾಡಲೇಬೇಡಿ ಎಂದು ನಿಮ್ಮೆಲ್ಲರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ಗಾಂಧೀ ಮೈದಾನವು ಬರುವ ಪೀಳಿಗೆಗೂ ಗಾಂಧ ಮೈದಾನವಾಗಿಯೇ ಉಳಿಯಬೇಕು, ಉಳಿಸೋಣ, ಈಗಾಗಲೇ ರಾಜಧಾನಿಗೆ ರವಾನಿಸಲಾಗಿರುವ ಪ್ರತಿಮೆಯನ್ನು ಹಿಂದಿರುಗಿಸುವ ವ್ಯವಸ್ಥೆಯನ್ನು ಸ್ವಂತ ವೆಚ್ಚದಲ್ಲಿ ಕೂಡಲೇ ಮಾಡಲಾಗುವುದು. ಅದನ್ನು ಮೈದಾನದಲ್ಲಿ ಪ್ರತಿಷ್ಠಾಪಿಸುವುದಾಗಬೇಕು, ಸುತ್ತಲೂ ಸುಂದರವಾದ ಉದ್ಯಾನ ನಿರ್ಮಾನವಾಗಬೇಕು. ಬರುವ ದಿನಗಳಲ್ಲಿ ಜನರ ಮನಸ್ಸಿನಲ್ಲಿ ಮಹಾತ್ಮರ ನೆನಪು ಅಚ್ಚಳಿಯದೆ ಉಳಿಯಬೇಕು, ಬೆಳೆಯಬೇಕು, ಬೆಳೆಸಲೂ ಬೇಕು. ಇಷ್ಟೆಲ್ಲದಕ್ಕೂ ಅಗತ್ಯವಾದ ಹಣವನ್ನು ಮಂಜೂರು ಮಾಡುವ, ಬಿಡುಗಡೆ ಮಾಡಿಸುವ ಜವಾಬ್ದಾರಿ ನನ್ನದು!" ಎಂದರು.

ಬಂದಿದ್ದ ಕೆಲಸವನ್ನು ಮುಗಿಸಿ ಮುಖ್ಯ ಮಂತ್ರಿಯವರು ಹೊರಟರು, ಹೊರಡುವ ಮುನ್ನ ಸಭಾಧ್ಯಕ್ಷರ ಆಡಳಿತಾವಧಿ ಯಶಸ್ವಿಯಾಗಲಿ ಎಂದೂ ಹಾರೈಸಿದರು.

ಅಧ್ಯಕ್ಷರು ಮನೆಗೆ ಹಿಂದಿರುಗಿದರು. ಅವರ ಹೃದಯ ಹಗುರವಾಗಿತ್ತು. ನಡೆದುದೆಲ್ಲವನ್ನೂ ತಮ್ಮ ಹೆಂಡತಿಗೆ ಸಂಕ್ಷೇಪವಾಗಿ ತಿಳಿಸುತ್ತ, ಆ ದಿನ ಸ್ವಾಮಿ ಹನುಮಂತ ನೀಡಿದ್ದ ಸಂದೇಶ– "ತಾಳ್ಮೆಯಿಂದ ಕಾಯಬೇಕು, ಎಚ್ಚರಿಕೆಯೂ ಬೇಕು" ಎಂಬುದನ್ನು ನೆನಪಿಸಿಕೊಂಡರು.

ಗಂಡ ಹಳಿದ ಎಲ್ಲವನ್ನೂ ತೀರಾ ಗಮನವಿಟ್ಟು ಕೇಳಿದ ಆಕೆ– "ಇಲ್ಲಿ ಕೇಳಿ, ಅದೇ ಹನುಮ ಸ್ವಾಮಿ ನನ್ನ ಪ್ರಾರ್ಥನೆಯನ್ನೂ ಈಡೇರಿಸಿದ್ದಾನೆ!" ಎಂದಳು–ಸಂತೋಷದಿಂದ.

"ಹೌದಾ, ಏನದು?" ಕುತೂಹಲದಿಂದ ಕೇಳಿದರು.

"ನೀವು........ ತಂದೆಯಾಗಲಿದ್ದೀರಿ!"

"ಹೌದಾ? ನನ್ನ ತಂದೆತನಕ್ಕಿಂತ ನಿನ್ನ ತಾಯ್ತನ ಮೊದಲು!"

"ಎಲ್ಲದಕ್ಕೂ ದೇವರ ಕರುಣೆ ಮೊದಲು!"

(ಈ ಧಾರಾವಾಹಿ ಮುಗಿಯಿತು)

* * *

ಜನಪದ ಧ್ವನಿ

ನಮ್ಮ ಯುವಜನರು ಯಾವುದಾದರೂ ಕ್ಷೇತ್ರದಲ್ಲಿ ಅದರಲ್ಲೂ ಚಲನಚಿತ್ರ ಮತ್ತು ಕ್ರಿಕೆಟ್‌ನಲ್ಲಿ ಕೀರ್ತಿ, ಹಣ ಸಂಪಾದಿಸಿದವರನ್ನು ಹಾಡಿ ಹೊಗಳಿ ವೈಭವೀಕರಿಸುತ್ತಾರೆ. ಅವರ ವೇಶ ಭೂಷಣಗಳನ್ನು ಅನುಕರಿಸಿ ಅವರ ಹೆಸರುಗಳಲ್ಲಿ ಅಭಿಮಾನಿ ಬಳಗಗಳನ್ನು ಸ್ಥಾಪಿಸಿ ಅವರ ಹುಟ್ಟು ಹಬ್ಬಗಳನ್ನು ಆಚರಿಸಿ ಅವರು ಬಂದರೆ ಹುಚ್ಚೆದ್ದು ಕುಣಿಯುತ್ತಾರೆ. ಅವರ ಹಸ್ತಾಕ್ಷರ ಪಡೆದರೆ ಧನ್ಯರಾದೆವೆಂದುಕೊಳ್ಳುತ್ತಾರೆ. ಆದರೆ ಅವರ ಹಾಗೆ ತಾವು ಸಹ ಶ್ರಮವಹಿಸಿ ಸಾಧಿಸಿ ಅವರಂತೆಯೇ ಕೀರ್ತಿಶಾಲಿಗಳಾಗಲು ಪ್ರಯತ್ನಿಸುವುದಿಲ್ಲ. ಇದು ಅತ್ಯಂತ ದೌರ್ಭಾಗ್ಯದ ವಿಷಯ.

ಟಿಪ್ಪು ಸುಲ್ತಾನರ ಆಸ್ಥಾನಕ್ಕೆ ಓರ್ವ ಫ್ರಾನ್ಸ್‌ನ ವ್ಯಾಪಾರಿ ಬಂದು ತಮ್ಮ ದೇಶದಲ್ಲಿ ತಯಾರಾಗುವ ಪದಾರ್ಥಗಳನ್ನು ತಂದಿರುವುದಾಗಿಯೂ, ಅವುಗಳನ್ನು ಆಸ್ಥಾನದಲ್ಲಿ ಪ್ರದರ್ಶಿಸುವುದಕ್ಕೆ ಅವಕಾಶ ಮಾಡಬೇಕೆಂದೂ ಕೇಳಿಕೊಂಡರು. ಸುಲ್ತಾನರು ಇದಕ್ಕೆ ಒಂದು ದಿನ ನಿಗದಿ ಪಡಿಸಿ ಆ ದಿನ ಆಸ್ಥಾನಿಕರೆಲ್ಲರೂ ಇರುವಂತೆ ಅಪ್ಪಣೆ ಮಾಡುತ್ತಾರೆ. ನಿಗದಿಯಾದ ದಿನ ಆ ವ್ಯಾಪಾರಿ ತಾನು ತಂದಿದ್ದ ಪದಾರ್ಥಗಳನ್ನು ಒಂದೊಂದಾಗಿ ತೋರಿಸಿ ಅವುಗಳ ಗುಣವಿಶೇಷಣಗಳನ್ನು ವರ್ಣಿಸುತ್ತಾನೆ. ಕೊನೆಯಲ್ಲಿ ಸುಲ್ತಾನರು ಆಸ್ಥಾನಿಕರನ್ನು ನಿಮ್ಮ ಅಭಿಪ್ರಾಯ ತಿಳಿಸಿ ಎಂದರು. ಪ್ರತಿಯೊಬ್ಬರೂ 'ಸ್ವಾಮಿ ನಾವು ನೋಡಿದ್ದೆಲ್ಲವೂ ಅದ್ಭುತವಾಗಿತ್ತು, ಅಮೋಘವಾಗಿತ್ತು ಇಂಥದ್ದನ್ನು ನೋಡಿಯೇ ಇರಲಿಲ್ಲ. ಈ ದಿನ ನೋಡಿ ನಮ್ಮ ಜನ್ಮ ಸಾರ್ಥಕವಾಯಿತು' ಎಂದೆಲ್ಲ ಹೇಳಿದರು. ಸುಲ್ತಾನರು ಕೋಪದಿಂದ ಕುದಿಯುತ್ತ ಕಣ್ಣು ಕೆಂಪಗೆ ಮಾಡಿಕೊಂಡು 'ಥೂ ಅಯೋಗ್ಯರೇ ನನ್ನ ಮುಂದೆ ನಿಲ್ಲಬೇಡಿ ಹೊರಟು ಹೋಗಿ' ಎಂದು ಅಬ್ಬರಿಸಿದರು. ಆಸ್ಥಾನಿಕರಿಗೆಲ್ಲ ಆಶ್ಚರ್ಯವಾಯಿತು. ಒಬ್ಬರು ಧೈರ್ಯ ಮಾಡಿ ಮೆಲ್ಲಗೆ 'ಸ್ವಾಮಿ, ನಾವೇನು ತಪ್ಪು ಮಾಡಿದ್ದೇವೆ, ತಮ್ಮ ಕೋಪಕ್ಕೆ ಕಾರಣವೇನು? ದಯವಿಟ್ಟು ತಿಳಿಸಿ' ಎಂದು ಕೇಳಿಕೊಂಡರು. ಸುಲ್ತಾನರು 'ನಿಮ್ಮಲ್ಲಿ ಒಬ್ಬರಾದರೂ ಇಂಥದ್ದೆಲ್ಲವನ್ನು ನಾವು ಕೂಡ ಮಾಡಬಲ್ಲೆವು, ಇನ್ನೂ ಚೆನ್ನಾಗಿ ಮಾಡಬಲ್ಲೆವು ಎಂದು ಹೇಳಲಿಲ್ಲ. ಇದರಿಂದ ನನಗೆ ತುಂಬ ಸಂಕಟವಾಗಿ ಕೋಪಬಂತು' ಎಂದು ಹೇಳಿದರು. ಇದು ಸ್ವಾಭಿಮಾನ.

ಸಾಧನೆ ಮಾಡಿದವರನ್ನು ಗೌರವಿಸೋಣ. ಅದಕ್ಕಿಂತ ಮುಖ್ಯವಾಗಿ ಅದೆ ರೀತಿ ನಾವು ಕೂಡ ಸಾಧಿಸೋಣ ಎಂಬ ಆಸೆ ಬರಬೇಕು. ಸಾಧನೆ ಮಾಡಿದವರೆಲ್ಲರೂ ಸಣ್ಣದರಿಂದಲೇ ದೊಡ್ಡವರಾದರು. ಸತತ ಪ್ರಯತ್ನದಿಂದ ಏನು ಬೇಕಾದರೂ ಸಾಧಿಸಬಹುದು. ಕೇವಲ ಅಭ್ಯಾಸದಿಂದ ಏಕಲವ್ಯನು ಅರ್ಜುನನ್ನು ಬಿಲ್ಲು ವಿದ್ಯೆಯಲ್ಲಿ ಮೀರಿಸಿದನು. ಪರ್ವತಗಳನ್ನು ನೋಡಿದರೆ ಹತ್ತಬೇಕೆಂದು, ನದಿಗಳನ್ನು ನೋಡಿದರೆ ಈಜಬೇಕೆಂದು ಎನಿಸಬೇಕು. ಮನಸ್ಸನ್ನು ಕೇಂದ್ರೀಕರಿಸಿದರೆ ಏನು ಬೇಕಾದರೂ ಸಾಧಿಸಬಹುದು.

– ಎ.ವೆಂಕಟರಮಣಶೆಟ್ಟಿ, ಮೈಸೂರು

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕನ್ನಡದ ಸುಪ್ರಸಿದ್ಧ ಗಾಂಧೀ ವಿಚಾರ ಸಾಹಿತ್ಯ ರಚನಾಕಾರರು ಮತ್ತು ಚಿಂತಕರು ಹಾಗೂ ಕ್ರಿಯಾಶೀಲರು ಆಗಿದ್ದ ಸಿದ್ದವನಹಳ್ಳಿ ಕೃಷ್ಣಶರ್ಮ ಶತಮಾನೋತ್ಸವ ಆಚರಣೆ ಕಳೆದ ವರ್ಷ ನಡೆಯಿತು. ಆ ಸಂದರ್ಭದಲ್ಲಿ ಶತಮಾನೋತ್ಸವ ಸಮಿತಿಯವರು ಸಾರ್ವಜನಿಕ ಸೇವಾ ಸಂಸ್ಥೆಗೆ ಕೊಡುವ ಪ್ರಶಸ್ತಿ ಪತ್ರ ಹಾಗೂ ಹತ್ತು ಸಾವಿರರೂಪಾಯಿಗಳ ಕಾಣಿಕೆಯನ್ನು ಜನಪದ ಸೇವಾ ಟ್ರಸ್ಟ್‌ಗೆ ಕೊಡಲಾಗಿತ್ತೆಂಬುದನ್ನು ಈಗಾಗಲೇ ತಿಳಿಸಲಾಗಿದೆ. ಕಳೆದ ಜುಲೈ ೪ ಅವರ ಜನ್ಮದಿನದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಜಯಂತ್ಯೋತ್ಸವ ಆಚರಿಸಲಾಯಿತು. ಆ ಸಮಾರಂಭಕ್ಕೆ ಟ್ರಸ್ಟಿನ ಅಧ್ಯಕ್ಷರನ್ನು ಆಹ್ವಾನಿಸಿ ಅವರನ್ನು ಗೌರವಿಸಲಾಯಿತು. ಹೆಗ್ಗೋಡಿನ ರಂಗಕರ್ಮಿ ಚರಖಾ ಸಂಸ್ಥೆಯ ಧುರೀಣರಾದ ಶ್ರೀ ಪ್ರಸನ್ನರವರು ಆಧುನಿಕವಾದ ಮತ್ತು ಗಾಂಧಿವಾದ ವಿಚಾರವಾಗಿ ಮಾತನಾಡಿದರು. ಜನಪದ ಸೇವಾ ಟ್ರಸ್ಟ್ ಬೇಸಿಗೆ ಮತ್ತು ದಸರಾ ರಜೆಗಳಲ್ಲಿ ನಡೆಸಿಕೊಂಡು ಬರುತ್ತಿರುವ ನಾಟಕಗಳಲ್ಲಿ ಭಾಗವಹಿಸುತ್ತಾ ಈಗ ರಂಭೂಮಿಯ ಬಗ್ಗೆ ಆಸಕ್ತಿತಾಳಿರುವ ಟ್ರಸ್ಟಿನ ಜನಪದ ವಿದ್ಯಾಲಯದ ಹಿರಿಯ ವಿದ್ಯಾರ್ಥಿ ಗಿರೀಶ ರಂಗಭೂಮಿಯ ಬಗ್ಗೆ ಹೆಚ್ಚಿನ ತರಬೇತಿಗಾಗಿ ಚಿತ್ರದುರ್ಗ ಜಿಲ್ಲೆಯ ಸಾಣೆಹಳ್ಳಿಯಲ್ಲಿರುವ ಶ್ರೀ ಶಿವಕುಮಾರಸ್ವಾಮಿ ರಂಗ ತರಬೇತಿ ಸಂಸ್ಥೆಗೆ ಪ್ರವೇಶ ಪಡೆದಿದ್ದಾರೆ. ಅಲ್ಲಿ ಅವರು ಹತ್ತು ತಿಂಗಳ ರಂಗತರಬೇತಿ ಪಡೆಯಲಿದ್ದಾರೆ.

೨೦೧೦ ಜುಲೈ ಮಾಹೆಯ ದಾನಿಗಳು

ಡಾ.ರತ್ನ; ಶ್ರೀಮತಿ ಎಚ್.ಎಸ್.ಅಪರ್ಣ-ಮೈಸೂರು
ಶ್ರೀ ಟಿ.ನಾರಾಯಣಗೌಡ್ರು - ಶ್ರೀನಿವಾಸಪುರ
ಶ್ರೀ ಆರ್.ಆರ್.ಅನವಟ್ಟಿ - ಬೆಂಗಳೂರು
ಶ್ರೀ ಬಿ.ಟಿ.ಎನ್.ಸ್ವಾಮಿ - ಪುಣೆ
ಶ್ರೀ ಕೆ.ರಮೇಶ್‌ರಾವ್ - ಮಂಗಳೂರು
ಶ್ರೀ ಅಶೋಕ್ - ಮಂಡ್ಯ ಇವರಿಗೆ ಮತ್ತು ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೬೧

- ಸುರೇಂದ್ರ ಕೌಲಗಿ



ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು "ಹಳ್ಳಿಗಳಿಗೆ ಹಿಂದಿರುಗಿ" ಎಂಬ ಘೋಷಣೆಯನ್ನು ದೇಶದ ಯುವಕರಿಗೆ ಕೊಟ್ಟಿದ್ದರು. ಏಕೆಂದರೆ ಅವರ ಪ್ರಕಾರ ಭಾರತ ದೇಶವೆಂದರೆ ಹಳ್ಳಿಗಳೇ ಆಗಿದ್ದವು. ಹಳ್ಳಿಗಳ ಉದ್ಧಾರವಾದರೆ ದೇಶದ ಉದ್ಧಾರವು ಆದಂತೆಯೇ ಎಂಬುದು ಅವರ ಖಚಿತ ಅಭಿಪ್ರಾಯವಾಗಿತ್ತು. ಸ್ವಾತಂತ್ರ್ಯ ಬರುವ ಕೇವಲ ಮೂರು ವಾರಗಳ ಮೊದಲು ಅಂದರೆ ೧೯೪೭ ಜುಲೈ ೧೯ ರಂದು ಗಾಂಧೀಜಿಯವರು ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ:- "ಗ್ರಾಮಗಳ ಬಗ್ಗೆ ಅತೀ ಜಾಗೃತ ವ್ಯವಸ್ಥೆಯ ಗಮನ ಹರಿಸದಿದ್ದರೆ ಮುಂದೇನಾಗುವುದೋ ನನಗೆ ಗೊತ್ತಿಲ್ಲ ಮುಂದುವರಿದ ನಗರ ಮತ್ತು ಪಟ್ಟಣ ಸಂಖ್ಯೆ ಎಷ್ಟಿದೆ? ಅವು ಬೆರಳಣಿಕೆಯಷ್ಟಿದೆ. ಅವುಗಳಿಂದಷ್ಟೇ ದೇಶ ಏಳಿಗೆಹೊಂದಲಾರದು, ಸಂತೋಷದಿಂದಿರಲಾರದು ಭಾರತವೆಂದರೆ ಅದರ ಏಳು ಲಕ್ಷ ಹಳ್ಳಿಗಳು. ಒಂದು ಹಳ್ಳಿಯಲ್ಲಿ ಒಬ್ಬನೇ ಸ್ವಾರ್ಥರಹಿತವಾಗಿ ಕೆಲಸ ಮಾಡುವ ಕಾರ್ಯಕರ್ತನಿದ್ದರೆ ಕೇವಲ ಒಂದು ವರ್ಷದಲ್ಲಿ ಭಾರತದ ನಕ್ಷೆಯನ್ನೇ ಬದಲಾಯಿಸಬಹುದು". ವಿದ್ಯಾರ್ಥಿದೆಸೆಯಿಂದಲೂ ಗಾಂಧೀಜಿ ಹಾಗೂ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾದದ್ದರಿಂದ ಸಹಜವಾಗಿಯೇ ಗ್ರಾಮದತ್ತ ಮನಸ್ಸುಹರಿಯ ತೊಡಗಿತ್ತು. ಬಿಹಾರದ ಹಳ್ಳಿಗಳಲ್ಲಿ ಕೆಲಸಮಾಡುವ ಗಾಂಧೀ ವಿಚಾರದ ದೊಡ್ಡ ಪಡೆಯೇ ಇತ್ತು. ಅಲ್ಲಿ ಗಾಂಧೀಯವರು ೧೯೧೭ರಲ್ಲಿ ನಡೆಸಿದ ಚಂಪಾರಣ್ಯ ಸತ್ಯಾಗ್ರಹದ ಮುಂದೆ ೧೯೫೪ರಲ್ಲಿ ಜಯಪ್ರಕಾಶ್ ನಾರಾಯಣರು ಬೋಧಗಯ ಸರ್ವೋದಯ ಸಮ್ಮೇಳನದಲ್ಲಿ ಭೂದಾನ ಯಜ್ಞ ಮೂಲಕ ಗ್ರಾಮೋದ್ಯೋಗ ಪ್ರಧಾನ ವಿಕೇಂದ್ರಿಕೃತ ಗ್ರಾಮ ಸ್ವರಾಜ್ಯದ ಸ್ಥಾಪನೆಗಾಗಿ ಜೀವನದಾನ ಮಾಡಿದ ಮೇಲೆ ಬಿಹಾರ್ ರಾಜ್ಯದಲ್ಲಿ ಬಹುದೊಡ್ಡ ಸಂಖ್ಯೆಯ ಸಮಾಜವಾದಿ ಪ್ರೇಮಿಗಳು ಜಯಪ್ರಕಾಶ್‌ನಾರಾಯಣರನ್ನು ಅನುಸರಿಸಿ ಗ್ರಾಮಗಳತ್ತ ಪಯಣ ಬೆಳೆಸಿದರು. ಸ್ವತಃ ಜಯಪ್ರಕಾಶ್ ನಾರಾಯಣರು ಸೊಖೋದೇವರಾ, ಮುಸಹರಿ ಮುಂತಾದ ಹಳ್ಳಿಗಳಲ್ಲಿ ತಮ್ಮ ಗ್ರಾಮ ಸ್ವರಾಜ್ಯದ ಕೆಲಸವನ್ನು ಪ್ರಾರಂಭಿಸಿದರು. ಇದಕ್ಕೂ ಮೊದಲು ಸಂತ ವಿನೋಬಾರವರಂತೂ ಸೇವಾಗ್ರಾಮ ಮತ್ತು ಪವನಾರ್ ಗ್ರಾಮಗಳಲ್ಲಿ ಗ್ರಾಮಸೇವೆಯಲ್ಲಿ ತಮ್ಮನ್ನು ಪೂರ್ತ ತೊಡಗಿಸಿಕೊಂಡಿದ್ದರು. ಅಲ್ಲದೇ ೧೯೫೧ರಲ್ಲಿ ಭೂದಾನ ಯಜ್ಞದ ಮೂಲಕ ದೇಶದಲ್ಲಿ ಅಹಿಂಸಾತ್ಮಕ ಗ್ರಾಮ ಸ್ವರಾಜ್ಯದ ಆಂದೋಲನವನ್ನು ಪ್ರಾರಂಭಿಸಿದ್ದರು. ಇದೆಲ್ಲದರ ಪ್ರಭಾವದ ಕಾರಣದಿಂದಾಗಿ ಗ್ರಾಮ ಸೇವೆಯ ಇಚ್ಛೆ ಬಲವಾಯಿತು. ತತ್‌ಫಲವಾಗಿ ೧೯೫೯ರಲ್ಲಿ ಮೇಲುಕೋಟೆಯನ್ನು ಕಾರ್ಯಕ್ಷೇತ್ರವನ್ನಾಗಿ ಆಯ್ಕೆಮಾಡಿಕೊಳ್ಳಲಾಯಿತು. ಗ್ರಾಮ ಸೇವೆಯ ಕೆಲಸವನ್ನು ಪ್ರಾರಂಭ ಮಾಡುತ್ತ ಹೋದಂತೆ ಗ್ರಾಮ ನಿರ್ಮಾಣದ ಕೆಲಸ ಎಷ್ಟು ಕಷ್ಟ ಎಂಬುದು ಅರ್ಥವಾಗುತ್ತಾ ಬಂತು ಮತ್ತು ಅನುಭವಕ್ಕೂ ಬರುತ್ತಾ ಹೋಯಿತು. ಪ್ರಾರಂಭದಲ್ಲಿ ಗ್ರಾಮಸ್ಥರ ವಿಶ್ವಾಸವನ್ನು ಸಂಪಾದಿಸುವುದೇ ಒಂದು ದೊಡ್ಡ ಆಹ್ವಾನವಾಯಿತು. ಯಾವುದಾದರೊಂದು ಉದ್ದಿಮೆಮಾಡಿ ಹಣವನ್ನು ಸಂಪಾದಿಸಬಹುದು. ಆದರೆ ಯಾವುದಾದರೊಂದು ಅಪರಿಚಿತ ಗ್ರಾಮದಲ್ಲಿ ಇದ್ದುಕೊಂಡು ಆ ಗ್ರಾಮದ ಜನರ

ನಂಬಿಕೆಯನ್ನು ಮತ್ತು ಪ್ರೀತಿಯನ್ನು ಪಡೆಯುವುದು ಸುಲಭವಾದ ಕೆಲಸವಲ್ಲ. ಎಲ್ಲಿಯವರೆಗೆ ಕಾರ್ಯಕರ್ತ ಗ್ರಾಮಸ್ಥರ ವಿಶ್ವಾಸವನ್ನು ಮತ್ತು ಪ್ರೀತಿಯನ್ನು ಸಂಪಾದಿಸುವುದಿಲ್ಲವೋ ಅಲ್ಲಿಯವರೆಗೆ ಅವನ ಮಾತಿಗೆ ಮನ್ನಣೆ ದೊರೆಯುವುದಿಲ್ಲ. ಮಾತಿಗೆ ಮನ್ನಣೆ ದೊರೆಯುವವರೆಗೆ ಗ್ರಾಮ ನಿರ್ಮಾಣದ ಮಾತುಗಳು ಗ್ರಾಮಸ್ಥರಿಗೆ ಅರ್ಥವಾಗುವುದಿಲ್ಲ. ಗ್ರಾಮಸ್ಥರು ಕಾರ್ಯಕರ್ತನನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ಅವನ ಪ್ರಾಮಾಣಿಕತೆ ಮತ್ತು ನೈತಿಕತೆ, ಇಚ್ಛೆ ಎಲ್ಲವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಕಾರ್ಯಕರ್ತನಿಗೆ ಗೊತ್ತಾಗದಂತೆ ಪರೀಕ್ಷಿಸಿ ನೋಡುತ್ತಾರೆ. ಗ್ರಾಮ ಕಡಿಮೆ ಜನಸಂಖ್ಯೆಯದ್ದಾಗಿರುವುದರಿಂದ ಎಲ್ಲ ಜನರ ಪರಿಚಯವಾಗುವುದು ಮತ್ತು ಎಲ್ಲರೊಂದಿಗೆ ಸಂಪರ್ಕ ಬರುವುದು ಸಹಜ ಕ್ರಿಯೆಯಾಗುತ್ತದೆ. ಆದ್ದರಿಂದ ಎಲ್ಲಿಯವರೆಗೆ ಗ್ರಾಮಸ್ಥರ ದೃಷ್ಟಿಯಲ್ಲಿ ಮತ್ತು ಅಭಿಪ್ರಾಯದಲ್ಲಿ ಕಾರ್ಯಕರ್ತನ ವ್ಯಕ್ತಿತ್ವ ಹಿರಿದಾದುದು ಎನಿಸುವುದಿಲ್ಲವೋ ಅಲ್ಲಿಯವರೆಗೆ ಕಾರ್ಯಕರ್ತನ ಪ್ರಭಾವ ಗ್ರಾಮದ ಮೇಲೆ ಶೂನ್ಯವತ್ತಾಗಿರುತ್ತದೆ. ಕಾರ್ಯಕರ್ತ ಎಷ್ಟೇ ಶಿಕ್ಷಿತನಾಗಿರಲಿ, ಅನುಭವಸ್ಥನಾಗಿರಲಿ ಅವನು ಗ್ರಾಮದವರಿಗೆ ಕಲಿಸುವುದಕಿಂತ ಗ್ರಾಮದವರಿಂದ ಅವನು ಕಲಿಯಬೇಕಾದುದೇ ಹೆಚ್ಚಾಗಿರುತ್ತದೆ. ಮೇಲುಕೋಟೆಯಲ್ಲಿ ಗ್ರಾಮ ಸೇವೆಯನ್ನು ಪ್ರಾರಂಭಿಸಿ ಐವತ್ತು ವರ್ಷಗಳಾದವು ಆದರೆ ಅಂದುಕೊಂಡಿದ್ದ ರೀತಿಯಲ್ಲಿ ಗ್ರಾಮ ನಿರ್ಮಾಣದ ಕೆಲಸ ಸಾಧ್ಯವಾಗುತ್ತಿಲ್ಲ. ಈ ಐವತ್ತು ವರ್ಷಗಳ ಗ್ರಾಮ ಸೇವೆಯನ್ನು ಯೋಜನಾ ಯುಗ ಪೂರ್ವ ಗ್ರಾಮಸೇವೆ ಮತ್ತು ಯೋಜನೋತ್ತರ ಗ್ರಾಮಸೇವೆಯೆಂದು ವಿಭಜಿಸಬಹುದು. ಯೋಜನಾಪೂರ್ವ ಗ್ರಾಮ ಸೇವೇ ಸರಳ ಮತ್ತು ಸುಲಭವಾಗಿತ್ತು ಎಂದೆನಿಸುತ್ತದೆ. ಏಕೆಂದರೆ ಆಗಿನ್ನೂ ಅಭಿವೃದ್ಧಿಯ ಹೆಸರಿನಲ್ಲಿ ಹಣದ ಹೊಳೆ ಹರಿಯುತ್ತಿರಲಿಲ್ಲ. ಗ್ರಾಮ ಪಂಚಾಯತಿ ರಾಜಕೀಯ ವಾತಾವರಣದಿಂದ ಹೆಚ್ಚೇನೂ ಕಲುಷಿತಗೊಂಡಿರಲಿಲ್ಲ. ಜನರಲ್ಲಿ ಇನ್ನೂ ಬಹಳಷ್ಟು ಮುಗ್ಧತೆ ಮತ್ತು ಸರಳತೆಯಿತ್ತು. ಯೋಜನಾಯುಗ ಪ್ರಾರಂಭವಾದ ಮೇಲೆ ಗ್ರಾಮಗಳಿಗೆ ಹಣ ಬರಲಾರಂಭಿಸಿತು. ಹಣದೊಂದಿಗೆ ರಾಜಕಾರಣ ಬಂದಿತು. ರಾಜಕಾರಣದೊಂದಿಗೆ ಕಲುಷಿತ ವಾತಾವರಣವೂ ಬಂದಿತು. ಹೀಗೆ ಮೇಲುಕೋಟೆಯಲ್ಲಿ ಐವತ್ತು ವರ್ಷಗಳ ಗ್ರಾಮ ಸೇವೆಯ ಸಂದರ್ಭದಲ್ಲಿ ಯೋಜನಾಪೂರ್ವ ಮತ್ತು ಯೋಜನೋತ್ತರ ಕಾಲದಲ್ಲಿಯ ಗ್ರಾಮೀಣರ ಮನೋಸ್ಥಿತಿಯಲ್ಲಿ ಉಂಟಾದ ಬದಲಾವಣೆಯನ್ನು ಗಮನಿಸಿದ್ದಾಯಿತು. ಈಗ ಗ್ರಾಮಸ್ಥರೆಲ್ಲ ನಗರಗಳ ಕಡೆಗೆ ಮುಖ ಮಾಡಿದ್ದಾರೆ. ತಮ್ಮ ಗ್ರಾಮವು ಸಹ ಪಟ್ಟಣವಾಗಿ ಬೆಳೆಯ ಬೇಕು ಮತ್ತು ಕ್ರಮೇಣ ನಗರವಾಗಿ ರೂಪಾಂತರಗೊಳ್ಳಬೇಕು ಎಂಬ ಅಭಿಲಾಷೆಯನ್ನು ಹೊಂದಿದ್ದಾರೆ. ದುರ್ದೈವದ ಸಂಗತಿಯೆಂದರೆ ಗ್ರಾಮಸ್ಥರಿಗೆ ನಗರ ಜೀವನದ ಭಯಂಕರ ದುಃಸ್ಥಿತಿಯ ಅರಿವಾಗುತ್ತಿಲ್ಲ. ಅಂತೆಯೇ ನಗರವಾಸಿಗಳಿಗೆ ಗ್ರಾಮ ಜೀವನದ ಸೌಂದರ್ಯ ಅರ್ಥವಾಗುತ್ತಿಲ್ಲ. ಮೇಲುಕೋಟೆಯಲ್ಲಿ ಸೇವಾ ಕಾರ್ಯವನ್ನು ಪ್ರಾರಂಭಿಸಿದಾಗ ಯೋಜನಾಪೂರ್ವ ಮೇಲುಕೋಟೆಯನ್ನು ನೋಡಿದ್ದಾಯಿತು. ಈಗ ಯೋಜನೋತ್ತರ ಮೇಲುಕೋಟೆಯನ್ನು ನೋಡಲಾಗುತ್ತಿದೆ. ದಿನಕಳೆದಂತೆ ಗ್ರಾಮಗಳಲ್ಲಿಯ ಪರಿಸ್ಥಿತಿ ಸಂಕೀರ್ಣಗೊಳ್ಳುತ್ತ ಹೋಗುತ್ತಿದೆ. ಸಂಕೀರ್ಣತೆ ಮನುಷ್ಯನನ್ನು ಭ್ರಮಿತನನ್ನಾಗಿ ಮಾಡುತ್ತದೆ. ಭ್ರಮಿತಗೊಂಡ ಮನುಷ್ಯ ಸುಂಟರಗಾಳಿಯಲ್ಲಿ ಸಿಕ್ಕ ತರಗೆಲೆಯಂತಾಗುತ್ತಾನೆ. ಇದನ್ನು ಮೇಲುಕೋಟೆಯ ಗ್ರಾಮ ಸೇವೆಯ ಸಂದರ್ಭದಲ್ಲಿ ನೋಡುತ್ತಿರುವಾಗ ಹಳ್ಳಿಗಳ ಕುಶಲತೆಯನ್ನು ಗಮನಿಸದೆ ನಗರಗಳ ಕುಶಲತೆಯನ್ನು ಗಮನಿಸಿದ್ದರ ತಪ್ಪಿನ ಸ್ಪಷ್ಟ ಅರಿವಾಗುತ್ತದೆ. ಭಗವಂತನೇ ದೇಶವನ್ನು ಕಾಪಾಡಬೇಕು.

* * *

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಆಂದೋಲನ ತನ್ನದೇ ಆದ ಇತಿಮಿತಿಯೊಂದಿಗೆ ಕಳೆದ ಅರವತ್ತು ವರ್ಷಗಳಿಂದ ಬದ್ಧತೆ, ನಿಷ್ಠೆ ಮತ್ತು ಸಾತತ್ಯತೆಯಿಂದ ಇಡೀ ಭಾರತ ದೇಶದಲ್ಲಿ ನಡೆದು ಕೊಂಡು ಬರುತ್ತಿದೆ. ಸಾವಿರಕ್ಕೂ ಹೆಚ್ಚು ನಿಷ್ಠಾವಂತ ಕಾರ್ಯಕರ್ತರು ದೇಶದ ವಿವಿಧ ಸ್ಥಾನಗಳಲ್ಲಿ ಸರ್ವೋದಯ ಸಿದ್ಧಾಂತದನುಸಾರವಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅಲ್ಲದೇ ಪ್ರತಿರಾಜ್ಯದಲ್ಲೂ ಸರ್ವೋದಯ ಮಂಡಲಿಗಳು ಕೆಲಸ ಮಾಡುತ್ತಿವೆ. ಪ್ರತಿಯೊಂದು ರಾಜ್ಯ ಮಂಡಲಿಯು ತನ್ನದೇ ಆದ ರೀತಿಯಲ್ಲಿ ಕಾರ್ಯಕ್ರಮ ಆಯೋಜಿಸಿಕೊಳ್ಳುತ್ತದೆ. ಈಗ ತಮಿಳುನಾಡು ಸರ್ವೋದಯ ಮಂಡಲವು ಇದೇ ಸೆಪ್ಟೆಂಬರ್ ಹನ್ನೊಂದು ಸಂತ ವಿನೋಬಾರ ಜಯಂತಿಯ ದಿನದಿಂದ ಅಕ್ಟೋಬರ್ ೨ ಗಾಂಧೀ ಜಯಂತಿವರೆಗೆ ೨೨ ದಿನಗಳ ಕಾಲ ಸರ್ವೋದಯ ವಿಚಾರ ಪ್ರಚಾರಕ್ಕಾಗಿ ಯಾತ್ರೆಯನ್ನು ಆಯೋಜಿಸಿದೆ. ಮಹತ್ಮಾ ಗಾಂಧೀಜಿಯವರು ತಮಿಳುನಾಡಿನ ತಮ್ಮ ಪ್ರವಾಸಕಾಲದಲ್ಲಿ ಭೇಟಿಕೊಟ್ಟ ಎಲ್ಲ ಸ್ಥಳಗಳೊಂದಿಗೆ ಈ ಯಾತ್ರೆ ಮೂಲಕ ಸಂಪರ್ಕ ಸ್ಥಾಪಿಸಿ ಪುನಃ ಅಲ್ಲಲ್ಲಿಯ ಜನರಿಗೆ ಗಾಂಧೀ ವಿಚಾರ ಮತ್ತು ಸರ್ವೋದಯ ವಿಚಾರ ತಿಳಿಸಲಾಗುವುದು. ಅಲ್ಲದೆ, ಆಯಾ ಜನರ ಬಳಿ ಇರುವಂಥ ಗಾಂಧೀಯವರ ಪತ್ರಗಳನ್ನು, ಶಿಲಾನ್ಯಾಸಗಳನ್ನು ಮತ್ತು ಇತರ ಐತಿಹಾಸಿಕ ವಸ್ತುಗಳನ್ನು ಸಂಗ್ರಹಿಸಲಾಗುವುದು. ಜನರ ಮನಸ್ಸಿನಲ್ಲಿ ಗಾಂಧೀಯವರ ಬಗ್ಗೆ ಇರುವ ಭಾವನೆ ಮತ್ತು ವಿಚಾರಗಳನ್ನು ದಾಖಲಿಸಿ ಕೊಳ್ಳಲಾಗುವುದು. ಈ ಯಾತ್ರೆಯಿಂದ ಎರಡು ಪ್ರಕಾರದ ಪ್ರಯೋಜನ ಹೊಂದುವ ಉದ್ದೇಶ ಇಟ್ಟುಕೊಳ್ಳಲಾಗಿದೆ.

ಒಂದನೆಯದು ಗಾಂಧೀಜಿಯವರ ತಮಿಳುನಾಡು ಭೇಟಿಯ ಅಧಿಕೃತ ಹಾಗೂ ಕ್ರೂಢೀಕೃತ ಮಾಹಿತಿಯನ್ನು ತಯಾರಿಸುವುದು ಮತ್ತು ಎರಡನೆಯದು ಯಾರ ಬಳಿ ಗಾಂಧೀಯವರಿಗೆ ಸಂಬಂಧಿಸಿದ ಅಮೂಲ್ಯ ವಸ್ತುಗಳು ಇವೆಯೋ ಅಂಥವರನ್ನು ಸಂಪರ್ಕಿಸಿ ಅವರ ಮೂಲಕ ಗಾಂಧೀಜಿಯವರು ಪ್ರತಿಪಾದಿಸಿದ ಸರ್ವೋದಯ ಚೇತನವನ್ನು ಸ್ಥಳೀಯ ಶ್ರೀಸಾಮಾನ್ಯರಲ್ಲಿ ಸ್ಪಂದಿಸುವಂತೆ ಮಾಡುವುದು. ಈ ಯಾತ್ರೆಯ ಬಗ್ಗೆ ಮತ್ತು ಅದರ ಮಹಿಮೆ ಕುರಿತು ತಮಿಳುನಾಡಿನ ಎಲ್ಲ ವೃತ್ತ ಪತ್ರಿಕೆಗಳು ವಿಸ್ತಾರವಾಗಿ ವಿಷಯ ಪ್ರಕಟಿಸಿವೆ. ಗಾಂಧೀಜಿಗೆ ಸಂಬಂಧಿಸಿದ ಇಂತಿಂಥ ವಸ್ತುಗಳು ತಮ್ಮಬಳಿ ಇವೆಯೆಂದು ಜನರಿಂದ ಕಾಗದಗಳು ಬರುತ್ತಿವೆ. ಈ ಯಾತ್ರೆಯ ಖರ್ಚಿಗಾಗಿ ದಾನವು ದೊರೆಯುತ್ತಿದೆ. ಈ ಯಾತ್ರೆಯ ಹಾಗೂ ಸ್ಮಾರಕಗಳ ಖರ್ಚಿಗಾಗಿ ಸುಮಾರು ಹತ್ತು ಲಕ್ಷರೂಪಾಯಿ ಖರ್ಚಾಗಬಹುದೆಂದು ಅಂದಾಜಿಸಲಾಗಿದೆ. ಈ ಯಾತ್ರೆಗಾಗಿ ಸರ್ಕಾರವು ೮೦.ಜಿ.ಯ ಅನುಕೂಲತೆ ಒದಗಿಸಿಕೊಟ್ಟಿದೆ.

* * *

ಖಾದಿ ವಿಚಾರ

೧೮೨೫ರಲ್ಲಿ ಗಾಂಧೀಜಿಯವರು ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಪ್ರಕಟಿಸಿದ ಓರ್ವ ಮಹಿಳೆಯ ಕಥೆ.

"ನಾನು ಓರ್ವ ನೇಕಾರಳು. ಬಹಳ ದುಃಖವನ್ನು ಸಹಿಸಿದ ನಂತರ ಈ ಪತ್ರವನ್ನು ತಮಗೆ ಬರೆಯುತ್ತಿದ್ದೇನೆ, ಕೃಪೆಮಾಡಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರಿ. ನನ್ನ ಕಷ್ಟವನ್ನು ದೂರ ಮಾಡಬಹುದಾದಂಥ ಜನರಿಗೆ ನನ್ನ ಧ್ವನಿ ತಲುಪುವುದೆಂದು ನಾನು ಕೇಳಿದ್ದೇನೆ. ದಯಮಾಡಿ ಕಷ್ಟದಲ್ಲಿರುವ ಓರ್ವ ಮಹಿಳೆಯ ಈ ಪತ್ರವನ್ನು ಉಪೇಕ್ಷಿಸಬೇಡಿರಿ.

ನಾನು ತುಂಬ ದುರ್ದೈವಿ. ನನ್ನ ಕಷ್ಟಗಳನ್ನು ಎಣಿಸಲಾರಂಭಿಸಿದರೆ ಅದೊಂದು ದೊಡ್ಡ ಕಥೆಯೇ ಆಗುವುದು. ಆದರೂ ಕೂಡ ಸಂಕ್ಷಿಪ್ತವಾಗಿ ಕೆಲ ಮಾತುಗಳನ್ನು ಹೇಳುವ ಪ್ರಯತ್ನ ಮಾಡುತ್ತೇನೆ. ಮೂರು ಹೆಣ್ಣು ಮಕ್ಕಳ ತಾಯಿಯಾದ ನಾನು ೨೨ ವರ್ಷದವಳಾಗಿದ್ದಾಗ ವಿಧವೆಯಾದೆ. ನನ್ನ ಗಂಡ ಸಾಯುವಾಗ ಅತ್ತೆ ಮಾವಂದಿರು ಮತ್ತು ಮೂರು ಹೆಣ್ಣು ಮಕ್ಕಳ ಪಾಲನೆ ಪೋಷಣೆಗಾಗಿ ಏನನ್ನೂ ಬಿಟ್ಟು ಹೋಗಲಿಲ್ಲ. ಗಂಡನ ಶ್ರಾದ್ಧಕ್ಕಾಗಿ ನನ್ನ ಆಭರಣಗಳನ್ನು ಮಾರಿದೆ. ಆ ಸಮಯದಲ್ಲಿ ನಾನು ಹಸಿವೆಯಿಂದ ಸಾಯುತ್ತಿದ್ದಾಗ ದೇವರು ನನಗೆ ದಾರಿಯನ್ನು ತೋರಿಸಿದ. ನಾನು ತಕಲಿ ಮತ್ತು ಚರಕದ ಮೇಲೆ ನೂಲಲು ಪ್ರಾರಂಭಿಸಿದೆ.

ಬೆಳಿಗ್ಗೆ ಮನೆಕೆಲಸ ಮುಗಿಸಿ ನೂಲಲು ಕುಳಿತುಕೊಳ್ಳುತ್ತಿದ್ದೆ. ಮಧ್ಯಾಹ್ನ ಎದ್ದು ಅತ್ತೆಮಾವಂದಿರಿಗೆ ಮತ್ತು ಹುಡುಗಿಯರಿಗೆ ಊಟಹಾಕಿ ಪುನಃ ನೂಲು ತೆಗೆಯಲು ಕುಳಿತುಕೊಳ್ಳುತ್ತಿದೆ. ಈ ರೀತಿ ಪ್ರತಿದಿನ ಒಂದು ತೊಲ ನೂಲನ್ನು ತೆಗೆಯುತ್ತಿದ್ದೆ. ನೇಕಾರರು ನನ್ನ ಮನೆಗೆ ಬಂದು ಪ್ರತಿ ತೊಲಕ್ಕೆ ಒಂದು ರೂಪಾಯಿಯಂತೆ ನೂಲನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಗತ್ಯವಿದ್ದಾಗ ನನಗೆ ಮುಂಗಡ ಹಣವನ್ನೂ ಕೊಡುತ್ತಿದ್ದರು. ಇದರಿಂದ ನಮ್ಮೆಲ್ಲರ ಊಟ ಬಟ್ಟೆಯ ಚಿಂತೆ ದೂರಾಯಿತು ಕೆಲ ವರ್ಷಗಳ ಬಳಿಕ ಇಪ್ಪತ್ತೆಂಟು ರೂಪಾಯಿಗಳು ಸಂಗ್ರಹವಾಯಿತು. ಆಗ ನನ್ನ ಒಬ್ಬ ಮಗಳ ಮದುವೆ ಮಾಡಿದೆ. ಇದೇ ಪ್ರಕಾರ ನನ್ನ ಮೂರು ಹುಡುಗಿಯರ ಮದುವೆ ಮಾಡಿದೆ. ಇದೆಲ್ಲವೂ ಚರಖೆಯ ಕೃಪೆಯಾಗಿತ್ತು.ಆದರೆ ಕಳೆದ ಮೂರುವರ್ಷಗಳಿಂದ ನಾನು ಮತ್ತು ನನ್ನ ಅತ್ತೆ ಹಸಿವೆಯಿಂದ ಸಾಯುವ ಸ್ಥಿತಿಯಲ್ಲಿದ್ದೇವೆ. ನೇಕಾರರು ನಾನು ತೆಗೆದ ನೂಲನ್ನು ತೆಗೆದು ಕೊಳ್ಳುತ್ತಿಲ್ಲ. ಏಕೆಂಬುದು ನನಗೆ ಗೊತ್ತಾಗಲಿಲ್ಲ. ಈ ಬಗ್ಗೆ ಜನರನ್ನು ವಿಚಾರಿಸಿದಾಗ ವಿದೇಶದಿಂದ ನೂಲನ್ನು ತರಿಸಲಾಗುತ್ತಿದೆ ಮತ್ತು ನೇಕಾರರು ಅದನ್ನೇ ಖರೀದಿಸುತ್ತಾರೆ ಎಂದು ತಿಳಿಯಿತು. ವಿದೇಶದಿಂದ ಬಂದ ದಾರ ನಾನು ತೆಗೆದ ದಾರಕ್ಕಿಂತ ಉತ್ತಮವಿರಲಾರದೆಂದು ಅಭಿಮಾನಪಡುತ್ತಿದ್ದೆ. ಆದರೆ ವಿದೇಶಿದಾರವು ನನ್ನ ದಾರಕ್ಕಿಂತ ಉತ್ತಮವೆಂದು ಮತ್ತು ಕಡಿಮೆ ಬೆಲೆಯದೆಂದು ಗೊತ್ತಾಯಿತು. ಆಗ ನನ್ನ ದುಃಖಕ್ಕೆ ಪಾರವೇ ಇರಲಿಲ್ಲ"

ಈ ಕಥೆಯು ಕೇವಲ ನೂಲುವ ಮಹಿಳೆಯದು ಮಾತ್ರವಲ್ಲ ಪ್ರಸ್ತುತ ಸಮಾಜದ ಹೀನಸ್ಥಿತಿಯ ಕಡೆಗೆ ಬೊಟ್ಟು ಮಾಡಿ ತೋರಿಸುತ್ತದೆ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ಶಕುಂತಲಾ ವೇಣುಗೋಪಾಲ್; ಶ್ರೀ ಕೆ.ಜಿ.ಪ್ರಕಾಶ್;
ಶ್ರೀ ಬಿ.ಎಸ್.ಎನ್.ಪ್ರಸಾದ್; ಶ್ರೀ ಕೆ.ರಾಮಚಂದ್ರ;
ಶ್ರೀ ಕೆ.ಆರ್.ವಿಶ್ವನಾಥನ್ - ಮೈಸೂರು
ಪ್ರೊ॥ ಆರ್.ಕೆ.ಶ್ರೀಕಂಠಕುಮಾರಸ್ವಾಮಿ - ಬೆಂಗಳೂರು
ಶ್ರೀ ಚಾಂದ್‌ಬಾಷಾಬಿಷೇಕ್;
ಶ್ರೀ ಎನ್.ಶ್ರೀನಿವಾಸ್; ಶ್ರೀ ಕೆ.ವಿ.ಶಂಕರಪ್ಪ - ಕೋಲಾರ
ಶ್ರೀ ನಾ.ಸು.ನಾಗೇಶ್- ನಾಗಮಂಗಲ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಸಿ.ಜಿ.ಸಿದ್ದಯ್ಯ - ಬೆಂಗಳೂರು,
ಡಾ॥ ರತ್ನ - ಮೈಸೂರು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. -ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.